ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ ಫಿಲ್ ಪದವಿಗಾಗಿ ಸಲ್ಲಿಸಿದ ಪ್ರಬಂಧ

ಸಂಶೋಧಕಿ

ಮಧು ಎಂ. ಎನ್.

ಮಾರ್ಗದರ್ಶಕರು

ಡಾ. ಟಿ. ವಿಜಯ್ ಪೂಣಚ್ಚ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೦೭

45

ಪರಾಮರ್ಶೆಗೆ ಮಾತ್ರ
145
"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Shree Mahantesh
XEROX & BOOK BINDING
Near S.B.I., K.C.D. Road,
DWD. Ph : 0836 - 2447880

೩೦-೩೦-ತ-ಅಗಿ೨

145

'ಸುಗನ್ನಡ' ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ, ಹಂಪಿ.

AKSHARA GRANTHALAYA
ACC.NO. 129782

145

745

ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಪ್ರಬಂಧ

ಮಧು ಎಂ.ಎನ್

ಮಾರ್ಗದರ್ಶಕರು
ಡಾ. ಟಿ. ವಿಜಯ್ ಪೂಣಚ್ಚ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

954.87
MAD h
129782

ಸಂಶೋಧಕರ ಪ್ರಮಾಣ ಪತ್ರ

ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ ಎಂಬ ನಿಂಬಂಧವನ್ನು ಡಾ.ಟಿ.ವಿಜಯ್ ಪೂಣಚ್ಚ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Madhu. M N.

ಸ್ಥಳ : ವಿದ್ಯಾರಣ್ಯ

ದಿನಾಂಕ : 20-2-02

ಮಧು ಎಂ.ಎನ್.
ಸಂಶೋಧಕ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ ಎಂಬ ನಿಂಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಮಧು ಎಂ.ಎನ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 30.07.17

ಡಾ. ಟಿ. ವಿಜಯ್ ಪೂಣಚ್ಚ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಯನದ ವಿವರಗಳು

* * * * *

ಅಧ್ಯಾಯ ೧

ಪ್ರಸ್ತಾವನೆ

ಹಳೆಯ ಶಿಲಾಯುಗದಿಂದ ಮಾನವನ ವಸತಿಯು ಬಳ್ಳಾರಿ ಪ್ರದೇಶದ ಸುತ್ತಮುತ್ತಲಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಪ್ರಸ್ತುತ ಅಧ್ಯಯನವು ವಿಜಯನಗರದ ಉಪನಗರವಾದ ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಈ ಹಿನ್ನೆಲೆಯಲ್ಲಿ ಹೊಸಪೇಟೆಗೆ ಸಂಬಂಧಪಟ್ಟಂತೆ ಹೊಸಪೇಟೆಯ ಹುಟ್ಟು ಮತ್ತು ಬೆಳವಣಿಗೆಯನ್ನು ಗುರುತಿಸಲಾಗಿದೆ. ವಿವಿಧ ರೀತಿಯ ಸೈದ್ಧಾಂತಿಕ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಬಂದ ಈ ಎಲ್ಲ ಚಾರಿತ್ರಿಕ ಆಕರಗಳನ್ನು ಪರಾಮರ್ಶಿಸಿ ಹೊಸಪೇಟೆ ಚರಿತ್ರೆಯ ಅಧ್ಯಯನವನ್ನು ಮಾಡಲಾಗಿದೆ. ಹೊಸಪೇಟೆಯು ವಿಜಯನಗರದ ಕೇಂದ್ರ ಬಿಂದುವಾದ ಹಂಪೆಯ ಉಪನಗರದೆ. ಇಂದು ಹೊಸಪೇಟೆ ತಾಲೂಕಾಗಿದ್ದು ಇದರೊಂದಿಗೆ ಹಂಪೆ ಸೇರಿಕೊಂಡಿದೆ. ಹೊಸಪೇಟೆಯ ಆರಂಭಿಕ ಕಾಲಘಟ್ಟದಲ್ಲಿ ಮತ್ತು ಮಧ್ಯಕಾಲೀನದಲ್ಲಿ ಹಾಗೂ ಆಧುನಿಕ ಕಾಲದ (೧೯೫೬) ವರೆಗಿನ ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡುವ ಕಿರು ಪ್ರಯತ್ನವನ್ನು ಮಾಡಿದೆ. ಈ ಬಗ್ಗೆ ಅನೇಕ ಲೇಖನಗಳು ಹಾಗೂ 'ಹೊಸಪೇಟೆ ತಾಲ್ಲೂಕು ದರ್ಶನ' ಎಂಬ ಪುಸ್ತಕ ಬಂದಿದ್ದರೂ ಇವುಗಳನ್ನು ಒಟ್ಟುಗೂಡಿಸಿ ಭಿನ್ನವಾಗಿ ಅಧ್ಯಯನ ಮಾಡಲು ಪ್ರಯತ್ನ ಮಾಡಲಾಗಿದೆ. ಈ ಅಧ್ಯಯನದಲ್ಲಿ ಸೀಮಿತ ಪ್ರದೇಶಗಳನ್ನೊಳಗೊಂಡಂತೆ ಅಭ್ಯಸಿಸಲಾಗುತ್ತದೆ.

ಹೊಸಪೇಟೆ ಚಾರಿತ್ರಿಕ ಅಧ್ಯಯನದಲ್ಲಿ ಮೂರು ವರ್ಗಗಳನ್ನಾಗಿ ಮಾಡಲಾಗಿದೆ. ಅವು ೧. ಹೊಸಪೇಟೆಯ ಆರಂಭಿಕ ಕಾಲಘಟ್ಟವನ್ನಷ್ಟೇ ಅಲ್ಲದೆ ಇದಕ್ಕೆ ಸಂಬಂಧಪಟ್ಟಂಥ ಗ್ರಾಮಗಳನ್ನು ತಕ್ಕಮಟ್ಟಿಗೆ ಮೊದಲನೆಯ ವರ್ಗಕ್ಕೆ ಸೇರಿಸಲಾಗಿದೆ. ವಿಜಯನಗರ ಕಾಲದಲ್ಲಿ ಹೊಸಪೇಟೆಯ ಸಾಮಾಜಿಕ ಜೀವನ, ಆರ್ಥಿಕ ಜೀವನ, ರಾಜಕೀಯ ಜೀವನ, ಈ ರೀತಿಯಲ್ಲಿ ಅಧ್ಯಯನ ಮಾಡಿರುವುದನ್ನು ೨ನೇ ವರ್ಗಕ್ಕೆ ಸೇರಿಸಲಾಗಿದೆ. ಮೂರನೇ ವರ್ಗದಲ್ಲಿ ಆಧುನಿಕ ಕಾಲದಲ್ಲಿ ಹೊಸಪೇಟೆಯ ಪರಿವರ್ತನೆಯನ್ನು

[illegible]

[illegible]

ಗುರುತಿಸಿ ಅಧ್ಯಯನ ಮಾಡಲಾಗಿದೆ. ಇವುಗಳಿಗೆ ಕಾಲಕ್ಕೆ ತಕ್ಕಂತೆ ಮಾಪನಗಳನ್ನು ನೀಡಲಾಗಿದೆ. ಇಲ್ಲಿ ಅಧ್ಯಯನಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಬಳಸಲಾಗಿದೆ.

ಪ್ರಸ್ತಾವನೆ

ರಾಷ್ಟ್ರದ ನಗರೀಕರಣದ ಕೇಂದ್ರವಾಗಿ ಹೊಸಪೇಟೆಯನ್ನು ಅರ್ಥೈಸಿಕೊಳ್ಳುವ ಕ್ರಮ ಇಂದು ಹೆಚ್ಚು ವ್ಯಾಪಕವಾಗಿ ಕಂಡುಬರುತ್ತವೆ. ವಿಜಯನಗರ ಚರಿತ್ರೆಯ ದೃಷ್ಟಿಕೋನದಿಂದಲೂ ಹೊಸಪೇಟೆಯನ್ನು ಅರ್ಥೈಸುವುದನ್ನು ನಾವು ಕಾಣಬಹುದು. ಮೇಲ್ನೋಟಕ್ಕೆ ಇವೆರಡು ಅಂಶಗಳು ಬೇರೆ ಬೇರೆಯಾಗಿ ಕಂಡರೂ ಚಾರಿತ್ರಿಕವಾಗಿ ಇವುಗಳ ಸಂಬಂಧಗಳು ಗಾಢವಾದವು. ವಿಜಯನಗರ ಮತ್ತು ಕರ್ನಾಟಕ ಚರಿತ್ರೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಬಹುತೇಕ ವಿದ್ವಾಂಸರು ಹಂಪೆಯನ್ನು ಸಾಂಸ್ಕೃತಿಕ ಕೇಂದ್ರ ಬಿಂದುವಾಗಿ ನೋಡಲು ಪ್ರಯತ್ನಿಸಿದ್ದಾರೆ. ಪ್ರಸ್ತುತ ಅಧ್ಯಯನವು ಈ ವಾದವನ್ನು ಭಾಗಶಃ ಒಪ್ಪಿಕೊಂಡರೂ, ಹಂಪೆಗೆ ಹೊಂದಿಕೊಂಡಿರುವ ಹೊಸಪೇಟೆಯ ಚಾರಿತ್ರಿಕ ಅಧ್ಯಯವನ್ನು ಮಾಡಲು ಉದ್ದೇಶಿಸಿದೆ. ಪ್ರಾಗೈತಿಹಾಸಿಕ ಕಾಲ, ಮಧ್ಯಕಾಲ ಹಾಗೂ ಆಧುನಿಕ ಕಾಲಘಟ್ಟಗಳಲ್ಲಿ ಈ ನಗರ ಪ್ರದೇಶವು ಹೊಸಪೇಟೆಯು ಬೆಳೆದು ಬಂದಿರುವ ವಿವಿಧ ಹಂತಗಳನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ. ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳನ್ನು, ಶಾಸನಗಳನ್ನು ಮತ್ತು ಮೌಖಿಕ ಆಕರಗಳನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಹೊಸಪೇಟೆ ಪ್ರದೇಶವು ಆಂಧ್ರಪ್ರದೇಶದ ಭೂಭಾಗಗಳಿಗೆ ಸಮೀಪವಾಗಿದೆ. ಈ ನಗರ ಪ್ರದೇಶವು ಉತ್ತರಕ್ಕೆ ಮುದ್ದಾಪುರ, ದಕ್ಷಿಣಕ್ಕೆ ಕಬ್ಬಿಣದ ಅದಿರಿನ ಗುಡ್ಡಗಳು, ಪೂರ್ವಕ್ಕೆ ಕಾರಿಗನೂರು, ಪಶ್ಚಿಮಕ್ಕೆ ತುಂಗಭದ್ರ ನದಿಯ ಪ್ರದೇಶವನ್ನು ಒಳಗೊಂಡಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಹೊಸಪೇಟೆ ಪ್ರದೇಶಕ್ಕೆ ಸಂಬಂಧಿಸಿದ ಚಾರಿತ್ರಿಕ ದೃಷ್ಟಿಕೋನದ ವಿವಿಧ ಮುಖಗಳನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತದೆ.

ಪ್ರಾಚೀನ ಚರಿತ್ರೆ, ಮಧ್ಯಕಾಲೀನ ಚರಿತ್ರೆ ಹಾಗೂ ಆಧುನಿಕ ಕಾಲದ ಚರಿತ್ರೆಯನ್ನು ಅದರಲ್ಲಿ ಮುಖ್ಯವಾಗಿ, ಕರ್ನಾಟಕ ಏಕೀಕರಣದವರೆಗಿನ ಕಾಲಘಟ್ಟಗಳನ್ನು ಈ ಸಂದರ್ಭದಲ್ಲಿ ಅಧ್ಯಯನ ಮಾಡಲಾಗುವುದು. ಹೊಸಪೇಟೆಗೆ ಸಂಬಂಧಿಸಿದಂತೆ ಅಲ್ಲಲ್ಲಿ ಸಂಶೋಧನೆಗಳು ನಡೆದರೂ, ಹೊಸಪೇಟೆಯ ಚರಿತ್ರೆ ಬಗ್ಗೆ ಸಂಪೂರ್ಣವಾಗಿ ವಿವರಗಳು ಒಂದೇ ಕಡೆ ದೊರಕುವುದಿಲ್ಲ. ವಿಜಯನಗರದ ಕಾಲದಿಂದಲೂ ಹೊಸಪೇಟೆ ನಗರವು ಹಂತಹಂತವಾಗಿ, ಪರಿಸ್ಥಿತಿಗಳಿಗನುಗುಣವಾಗಿ ಬದಲಾವಣೆಯಾಗಿರುವ ಬಗ್ಗೆ

ಅಧ್ಯಯನವನ್ನು ನಡೆಸುವ ಉದ್ದೇಶ ಹೊಂದಿದೆ. ಹೊಸಪೇಟೆ ಪ್ರದೇಶದ ಮತ್ತು ಇತರೆ ಪಟ್ಟಣಗಳಿಗಿರುವ ಸಂಬಂಧವನ್ನು ಚಾರಿತ್ರಿಕ ದೃಷ್ಟಿಯಿಂದ ಅಧ್ಯಯನ ಮಾಡುವ ಪ್ರಯತ್ನವನ್ನು ನಡೆಸಲಾಗುವುದು.

ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಚಾರಿತ್ರಿಕ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಆಕರ ಸಾಮಗ್ರಿಗಳನ್ನಾಗಿ ಪ್ರಕಟಿತ, ಅಪ್ರಕಟಿತ ಲೇಖನಗಳನ್ನು ಮತ್ತು ಗ್ರಂಥಗಳನ್ನು ಪರಿಶೀಲಿಸಲಾಗುತ್ತದೆ. ಹಾಗೆಯೇ ಸಮಕಾಲೀನ ಐತಿಹಾಸಿಕ ದಾಖಲೆಗಳನ್ನು ಗಮನಿಸಲಾಗುತ್ತದೆ. ಹೊಸಪೇಟೆ ಕ್ಷೇತ್ರಕಾರ್ಯದಲ್ಲಿ ದೊರಕುವ ಆಕರಗಳನ್ನು ಇಲ್ಲಿ ಬಳಸಲಾಗುವುದು. ಮೌಖಿಕ ಆಕರಗಳ ಸಹಾಯದಿಂದ ಹೊಸಪೇಟೆ ಚಾರಿತ್ರಿಕ ಅಧ್ಯಯನದ ಸ್ವರೂಪವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಲಾಗುವುದು.

ಚಾರಿತ್ರಿಕ ಹಿನ್ನೆಲೆ

ಈ ನಗರ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ವಾಸಸ್ಥಾನವಾಗಿದೆ. ಈ ಪ್ರದೇಶಗಳಲ್ಲಿ ಆದಿಶಿಲಾಯುಗದ ಅವಶೇಷಗಳು ದೊರಕಿವೆ. ಈ ಕಾಲದ ಕಲ್ಲಿನ ಮತ್ತು ಲೋಹದ ಆಯುಧಗಳು ಮತ್ತು ಒರಟು ಮಣ್ಣಿನ ಪಾತ್ರೆಗಳ ಅವಶೇಷಗಳು ಅಲ್ಲಲ್ಲಿ ಕಂಡುಬಂದಿವೆ. ಗ್ರಾನೈಟ್ ಗುಡ್ಡಗಳ ಮೇಲೆ ಇಂತಹ ವಸಾಹತುಗಳಿದ್ದ ಗುರುತುಗಳು ಕಂಡುಬಂದಿರುವುದನ್ನು ಕಾಣಬಹುದಾಗಿದೆ (ಸುವರ್ಣ ಮಹೋತ್ಸವ ಸಮಾರಂಭಗಳ ಹೊಸಪೇಟೆಯ ಪುರಸಭೆಯ ಸಂಚಿಕೆ (೧೯೧೩-೧೯೬೪:೪).

ಪ್ರಾಚೀನ ಕಾಲದಿಂದಲೂ ಮಾನವನ ಚಟುವಟಿಕೆಗಳ ಕೇಂದ್ರವಾಗಿದ್ದ ಈ ನಗರವು ಅವನ ನಿರಂತರ ಬದುಕಿನ ಕುರುಹು ಅವಶೇಷಗಳನ್ನು ಹೊಂದಿದೆ. ತಾಲೂಕಿನ ಗಡಿಯಾಗಿ ಹರಿಯುವ ತುಂಗಭದ್ರ ನದಿಯ ಹಂಪಿ ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗ ಕಾಲದ ಆಯುಧ ಉಪಕರಣಗಳು ಕಂಡುಬಂದಿವೆ.

ರಾಬರ್ಟ್ ಬ್ರೂಸ್ ಫೂಟ್ ಎಂಬುವವನು ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳನ್ನು ಸರ್ವೇಕ್ಷಣೆ ಮಾಡಿದ್ದಾನೆ. ಈತನು ಸುಮಾರು ೨೨ ನೆಲೆಗಳನ್ನು ಗುರುತಿಸಿದ್ದಾನೆ. ಅವುಗಳಲ್ಲಿ ಸುಮಾರು ೩೬ ನೆಲೆಗಳು ಪ್ರಮುಖವಾಗಿವೆ ಎಂದು ತಿಳಿಸಿದ್ದಾನೆ (ಮಹದೇವ, ೨೦೦೨-೨೦೦೩:೬).

ಮದ್ರಾಸ್ ಪ್ರಾಂತ್ಯದ ಇತರೆ ಜಿಲ್ಲೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಲಾಯುಗದ ನೆಲೆಗಳನ್ನು ಮತ್ತು ಅವಶೇಷಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಗುರುತಿಸಲಾಗಿದೆ ಎಂದು ೧೯೦೪-೧೯೦೮ರ ಭಾರತದ ಗೆಜೆಟಿಯರ್ ತಿಳಿಸುತ್ತದೆ.

ಹೊಸಪೇಟೆಯ ತಾಲ್ಲೂಕಿನ ಗಾದಿಗನೂರು ಮತ್ತು ಕುರಿಕುಪ್ಪಿ ಬೆಟ್ಟಗಳಲ್ಲಿ ಹಳೆಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಪತ್ತೆಯಾಗಿವೆ. ಈ ಪ್ರದೇಶದ ಸಮೀಪವಿರುವ ಜೇಡರ ಬೆಳಗಲ್ಲು, ದರೋಜಿ,

ಬದನಹಟ್ಟಿ ಬೆಟ್ಟ, ಜೋಗ, ಹುಲಕುಂಡಿಹಳ್ಳಿಯ ಸಮೀಪ ಮತ್ತು ಬಳ್ಳಾರಿ ಜಿಲ್ಲೆಯ ದಕ್ಷಿಣಕ್ಕಿರುವ ತಾಮ್ರ ಪರ್ವತದ ತಪ್ಪಲಲ್ಲಿ ಹಳೆಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಬೆಳಕಿಗೆ ಬಂದಿವೆ. ಈ ಶಿಲಾಯುಧ ಅವಶೇಷಗಳನ್ನು ಬೆಣಚು ಮತ್ತು ಹಿಮಟೈಟ್ ಶಿಲೆಗಳಿಂದ ಮಾಡಲಾಗಿದೆ. ಇದರಿಂದ ಹೊಸಪೇಟೆ ಪ್ರದೇಶದಲ್ಲಿ ಹಳೆಶಿಲಾಯುಗ ಕಾಲದಿಂದಲೂ ಮಾನವನ ಅಸ್ತಿತ್ವವಿರುವುದು ಸುಸ್ಪಷ್ಟ (ಪೂಜಾರಹಳ್ಳಿ, ೧೯೫೫:೫).

ಹಂಪೆಯ ಸುತ್ತಮುತ್ತ ಸೂಕ್ಷ್ಮ ಶಿಲಾಯುಧಗಳು ಕಂಡುಬರುತ್ತವೆ. ಮುಖ್ಯವಾಗಿ ಶೃಂಗಾರದ ಹೆಬ್ಬಾಗಿಲಿನ ಹತ್ತಿರದ ಬೆಟ್ಟದ ತಪ್ಪಲಿನಲ್ಲಿ ಸೂಕ್ಷ್ಮ ಶಿಲಾಯುಧಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ (ಮಹದೇವ, ೨೦೦೨:೭).

ಹೊಸಪೇಟೆ ತಾಲ್ಲೂಕಿನ ನಿಂಬಾಪುರದ ಸಮೀಪ ಕಂಡುಬಂದಿರುವ ಬೂದಿದಿಬ್ಬವು ನವಶಿಲಾಯುಗ ಸಂಸ್ಕೃತಿಗೆ ಪ್ರಮುಖ ಉದಾಹರಣೆಯಾಗಿದೆ. ಇದನ್ನು ಸ್ಥಳೀಯರು ವಾಲಿದಿಬ್ಬವೆಂದು ಕರೆಯುತ್ತಾರೆ. ಈ ರೀತಿಯ ಬೂದಿದಿಬ್ಬಗಳು ಜಿಲ್ಲೆಯ ಸಂಗನಕಲ್ಲು ಮತ್ತು ಕಪ್ಪಗಲ್ಲಿಗಳಲ್ಲಿ ಕಂಡುಬರುತ್ತವೆ. ಈ ದಿಬ್ಬಗಳು ಸಗಣಿ ಸುಡುವಿಕೆಯಿಂದಾಗಿವೆ ಎಂದು ತಿಳಿದು ಬಂದಿವೆ ಎಂದು ವಿದ್ವಾಂಸರು ಊಹಿಸಿದ್ದಾರೆ (ಕೃಷ್ಣರಾವ್ ಮತ್ತು ಕೇಶವಭಟ್ಟ,೧೯೭೦:೫-೬).

ಹೊಸಪೇಟೆ ತಾಲ್ಲೂಕಿನ ಕುರಿಕುಪ್ಪಿಬೆಟ್ಟದ ನೆಲೆಯಲ್ಲಿ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವಶಿಲಾಯುಗದ ಜೊತೆಯಲ್ಲಿ ಬೃಹತ್ ಶಿಲಾಯುಗ ಅಥವಾ ಕಬ್ಬಿಣ, ಯುಗದ ಅವಶೇಷಗಳು ಕಂಡುಬಂದಿವೆ.

ಹೊಸಪೇಟೆಯ ಪ್ರದೇಶವು ಸಹ ತನ್ನದೇ ಆದ ಪ್ರಾಚೀನತೆಯನ್ನು ಹೊಂದಿದೆ. ರಾಮಾಯಣ ಮಹಾಕಾವ್ಯದಲ್ಲಿ ಬರುವ ವಾನರು ಇಂದಿನ ಹಂಪಿ ಪರಿಸರದ ಕಿಷ್ಕಿಂದ ಪ್ರದೇಶದಲ್ಲಿ ವಾಸಿಸುತ್ತಿದ್ದರು ಎಂದು ಹೇಳಲಾಗಿದೆ (ಮಹದೇವ,೨೦೦೨:೧೧). ಐದು ಪರ್ವತಗಳು ಹಾಗೂ ಪಂಪಾಸರೋವರ, ಶಬರಿ ಆಶ್ರಮ ಆಂಜನೇಯನ ಜನ್ಮಸ್ಥಳ ಮೊದಲಾದವು ಇಲ್ಲಿವೆ.

ಪುರಾಣಗಳಲ್ಲಿ ಹಂಪೆಯನ್ನು 'ಪಂಪಾಕ್ಷೇತ್ರ'ವೆಂದು ಕರೆಯಲಾಗಿದೆ. ಪಂಪಾ ಎಂಬುದು ತುಂಗಭದ್ರೆಯ ಮತ್ತೊಂದು ಹೆಸರು. ಪಂಪಾಸರೋವರ ಅನೇಕ ಋಷಿಗಳ ತಪೋಭೂಮಿಯಾಗಿತ್ತೆಂದು ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ.

ಹೇಮಕೂಟ ಕಾಳಿದಾಸ ಹಾಗೂ ಬಾಣರು ತಮ್ಮ ಕೃತಿಗಳಲ್ಲಿ ಹೇಳಿರುವ ಹೇಮಕೂಟವಾಗಿದೆ ಎಂದು ತಿಳಿಯಲಾಗಿದೆ. ಹರಿಹರ, ರಾಘುವಾಂಕ ಮತ್ತು ವಾದಿರಾಜರು ಹೇಮಕೂಟವನ್ನು ಕುರಿತು ಹೇಳಿದ್ದಾರೆ. ಜೈನರಿಗೂ ಹಂಪೆಯ ಹೇಮಕೂಟ ಪ್ರದೇಶ ಪುಣ್ಯಸ್ಥಳವಾಗಿದೆ ಎಂದು ಕನ್ನಡ ಪ್ರಪ್ರಥಮ ಕೃತಿಯಾದ ವಡ್ಡಾರಾಧನೆಯಿಂದ ತಿಳಿದು ಬರುತ್ತದೆ. ಹೇಮಕೂಟದ ಚರಿತ್ರೆಯನ್ನು ಶೋಧಿಸಲು ಪ್ರಯತ್ನಪಟ್ಟರೆ ಪ್ರಾಚೀನ ಕನ್ನಡ ನಾಡಿನ ಚರಿತ್ರೆಯೂ ಬೆಳಕಿಗೆ ಬರುವುದೆಂದು ಭಾವಿಸಲಾಗಿದೆ.

ಪುರಾಣಗಳ ಪ್ರಕಾರ ಸಮಗ್ರ ಭಾರತವು ನಂದರ ಆಧೀನಕ್ಕೊಳಪಟ್ಟದ್ದೆಂದು ತಿಳಿದುಬರುತ್ತವೆ. ಕೆಲವು ಮಾಹಿತಿಗಳಿಂದ ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ನಂದರು ಬಳ್ಳಾರಿ ಪ್ರದೇಶವನ್ನು ಆಳಿದರೆಂದು ತಿಳಿದು ಬರುತ್ತದೆ. ನಂತರ ಕಾಲದ ಕೆಲವು ಕನ್ನಡ ಶಾಸನಗಳು (ಕಿ.ಶ. ೧೦ರಿಂದ ೧೩ನೆಯ ಶತಮಾನ) ನಂದರು ಕುಂತಳ ದೇಶವನ್ನಾಳಿದ ಬಗ್ಗೆ ಬೆಳಕು ಚೆಲ್ಲುತ್ತವೆ. ಅಂತಹ ಒಂದು ಶಾಸನವು ಕುಂತಳ ರಾಜ್ಯಕ್ಕೆ ಪ್ರಸಿದ್ಧ ನಂದರು ಅಧಿಪತಿಗಳಾಗಿದ್ದರೆಂದು ತಿಳಿದುಬರುತ್ತದೆ. (ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ) ಇದರಿಂದ ಮೌರ್ಯರ ಪೂರ್ವದಲ್ಲಿ ನಂದರು ಈ ೧೮ ಭಾಗವನ್ನು ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು.

ನಂದರ ನಂತರ ಭಾರತವನ್ನಾಳಿದ ಮೌರ್ಯ ಚಕ್ರವರ್ತಿ ಅಶೋಕನ ಅನೇಕ ಬಂಡೆಗಲ್ಲು ಶಾಸನಗಳು ಈ ಪ್ರದೇಶದ ಸಮೀಪದಲ್ಲಿ ದೊರೆತಿವೆ. ಕೂಡ್ಲಿಗಿ ತಾಲೂಕಿನಲ್ಲಿ ಸಿಕ್ಕಿರುವ ಕ್ರಿ. ಪೂ. ೨೫೪ರ ಶಿಲಾಸ್ತಂಭ ಶಾಸನ ವಾಕ್ಯಮಾಡಿವೆ ಮತ್ತು ನಿಟ್ಟೂರು ಉದೇಗೊಳ್ಳ ಶಾಸನಗಳು ಅಶೋಕನ ಹೆಸರನ್ನು ನೇರವಾಗಿ ಹೇಳುವುದರಿಂದ ಚಾರಿತ್ರಿಕ ಮಹತ್ವವೂ ಪಡೆದಿವೆ. ನಂತರದಲ್ಲಿ ಅಶೋಕ ಆಳಿದನೆಂದು ತಿಳಿಯುತ್ತದೆ. ಅಶೋಕ ಮರಣ ಹೊಂದಿದ ಮೇಲೆ ಈ ಪ್ರದೇಶವೂ ಮಹಾರಥಿಗಳು ಕಲಕುಲ ಸ್ವತಂತ್ರವಾಗಿ ಆಳ್ವಿಕೆ ಮಾಡಿದ್ದಾರೆ.

ನಂತರ ದಕ್ಷಿಣದಲ್ಲಿ ಶಾತವಾಹನರು ಪ್ರಾಬಲ್ಯಕ್ಕೆ ಬಂದರು. ಸುಮಾರು ಕ್ರಿ.ಶ.೨೨೦ರಿಂದ ಕ್ರಿ.ಶ. ೩೦ರವರೆಗೆ ರಾಜ್ಯವಾಳಿದ ಇವರ ಮೂಲವನ್ನು ಕುರಿತಂತೆ ವಿವಿಧ ಅಭಿಪ್ರಾಯಗಳಿವೆ. ಡಾ ಸುಕ್ತಂಕರ್ ಶಾತವಾಹನರ ಕೆಲವು ಸಂಸ್ಕೃತ ಶಾಸನಗಳಲ್ಲಿ ವ್ಯಕ್ತವಾಗುವ ಶಾತಮಹನೀಹಾರ ಮತ್ತು ಶಾತವಾಹನೀರದ್ದು ಅಂದರೆ 'ಶಾತ'ವಾದಿ ಪ್ರದೇಶ ಮೂಲ ಪದಗಳ ಆಧಾರದ ಮೇಲೆ ಅವರು ಕನ್ನಡ ಪ್ರದೇಶದವರೆಂದು, ಅದು ಬಳ್ಳಾರಿ ಪ್ರದೇಶದವರೆಂದು ಗುರುತಿಸುತ್ತಾರೆ. ಕರ್ನಾಟಕದಲ್ಲೇ ಹೆಚ್ಚಾಗಿ ದೊರೆಯುವ ಶಾತವಾಹನರ ಶಾಸನಗಳಲ್ಲಿ ಅವರನ್ನು ಕುಂತಳಸ್ವಾಮಿ ಎಂದು ಕರೆಯಲಾಗಿದೆ (ಸರ್ವೇಶ್ವರಸ್ವಾಮಿ,೧೯೬೪:೧೪). ರಾಜಶೇಖರನ ಕಾವ್ಯ ಮೀಮಾಂಸೆಯು ಕುಂತಲದೊರೆಯಾದ ಶಾತವಾಹನರನ್ನು ಕುರಿತು ತಿಳಿಸುತ್ತದೆ.

ಶಾತವಾಹನರ ಕೊನೆಯ ಅರಸರಲ್ಲಿ ಒಬ್ಬನಾದ ಪುಲುಮಾವಿಗೆ ಸೇರಿದ ಶಾಸನವೊಂದು ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿದೆ. ಇದರಿಂದ ಶಾತವಾಹನರು ಆಳ್ವಿಕೆ ತಿಳಿಯಲು ಸಹಾಯವಾಗಿದೆ.

ಶಾತವಾಹನರ ಅವಸಾನದ ನಂತರ ಅವರ ಸಾಮ್ರಾಜ್ಯವು ವಾಯವ್ಯದಲ್ಲಿ ಅಭೀರರು, ದಕ್ಷಿಣದಲ್ಲಿ ಮತ್ತು ಆಂಧ್ರಪ್ರಾಂತ್ಯದಲ್ಲಿ ಇಕ್ಷ್ವಾಂಕುಗಳಲ್ಲಿ ಭಾಗಗೊಂಡಿತು. ಇವರಲ್ಲಿ ಚುಟುಗಳು ಕರ್ನಾಟಕದ ಭಾಗಗಳನ್ನು ಆಳಿದರು (ರಾವ್ ಮತ್ತು ಭಟ್,೧೯೭೭:೧೫).

ಇತ್ತೀಚೆಗೆ ಹಂಪಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಕೈಗೊಂಡ ಉತ್ಖನನದ ಪರಿಣಾಮವಾಗಿ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯ ಶಾಸನಗಳಿರುವ ಸುಣ್ಣಕಲ್ಲಿನ ಫಲಕಗಳು ಬೆಳಕಿಗೆ ಬಂದಿವೆ. (ಗುರುರಾಜರಾವ್,೧೯೨೧:೧೬).

ಹಂಪೆ ಪ್ರದೇಶದಲ್ಲಿ ಗಾಂಧಾರಶೈಲಿಯ ಬಿಳಿಯ ಜೇಡಿಮಣ್ಣಿನ ಗೊಂಬೆಗಳು ದೊರೆತಿದ್ದು, ಅವುಗಳ ಕಾಲ ಕ್ರಿ.ಶ ಎರಡನೆಯ ಶತಮಾನವೆಂದು ಡಾ ಅ.ಸುಂದರ ತಿಳಿಸುತ್ತಾರೆ. (ಸರ್ವೇಶ್ವರಸ್ವಾಮಿ,೧೯೬೪ : ೧೭).

ನಂತರದ ಕಾಲದಲ್ಲಿ ಕದಂಬರ ಆಳ್ವಿಕೆ ಕಂಡುಬಂದಿದೆ. ಕದಂಬರ ಮಯೂರಶರ್ಮನ ಶಾಸನವು ನೆರೆಯ ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ದೊರೆತಿದೆ. ಇವರ ರಾಜ್ಯವು ಪಶ್ಚಿಮ ತೀರದಿಂದ ಬಳ್ಳಾರಿ ಪ್ರದೇಶದವರೆಗೂ ಹಬ್ಬಿತು. ಹೊಸಪೇಟೆಯ ಆಗ್ನೇಯ ದಿಕ್ಕಿಗಿರುವ ಸಂಡೂರು ಪ್ರದೇಶ ಮತ್ತು ಅಲ್ಲಿನ ಕುಮಾರಸ್ವಾಮಿ ದೇವಾಲಯವು ಕದಂಬರ ಕಾಲದಲ್ಲೇ ಪ್ರಾಮುಖ್ಯತೆಯನ್ನು ಪಡೆದಿದ್ದವು. ಬಾದಾಮಿ ಚಾಲುಕ್ಯರ ಪ್ರಾಬಲ್ಯದಿಂದಲೂ ಕದಂಬರು ಅವರ ಸಾಮಂತರಾಗಿ ಮುಂದುವರಿಯುತ್ತಾರೆ.

ಬಾದಾಮಿ ಚಾಲುಕ್ಯರು:

ಬಾದಾಮಿ ಚಾಲುಕ್ಯರು ಒಂದನೆಯ ಪುಲಿಕೇಶಿಯ ಕಾಲಕ್ಕೆ ಪ್ರಾಬಲ್ಯಕ್ಕೆ ಬಂದರು. ಈತನ ಮಗನಾದ ಶಾಂತಿವರ್ಮನು (ಕ್ರಿ.ಶ.೫೬೬-೫೯೭) ಕೊಂಕಣದ ಮೌರ್ಯರನ್ನು, ಬನವಾಸಿಯ ಕದಂಬರನ್ನು ಹಾಗೂ ಬಳ್ಳಾರಿ ಮತ್ತು ಕರ್ನೂಲ್ ಪ್ರಾಂತ್ಯಗಳನ್ನಾಳುತ್ತಿದ್ದನು.

ಇಮ್ಮಡಿ ಪುಲಿಕೇಶಿಯ ಐಹೊಳೆ ಪ್ರಶಸ್ತಿ ಶಾಸನವು ಈ ಪ್ರದೇಶ ಸೇರಿದಂತೆ ಇಡೀ ದಕ್ಷಿಣಪ್ರಾಂತವು ಅವನ ಆಳ್ವಿಕೆಗೆ ಒಳಗಾದ ಬಗ್ಗೆ ತಿಳಿಸುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದುರ್ಗ ದೇವಾಲಯವೊಂದು ಹೊಸಪೇಟೆಯ ಸಮೀಪದ ಸಂಡೂರಿನ ಕುಮಾರಸ್ವಾಮಿ ಬೆಟ್ಟದಲ್ಲಿದೆ. ಇಲ್ಲಿರುವ ಕುಮಾರಸ್ವಾಮಿ ಮತ್ತು ಕಾರ್ತಿಕೇಯ ಬಾದಾಮಿ ಚಾಲುಕ್ಯರ ಆರಾಧ್ಯ ದೈವವಾಗಿತ್ತು. ಇದು ಕದಂಬರ

ಕಾಲದಲ್ಲೇ ಪ್ರಖ್ಯಾತಿ ಪಡೆದಿತ್ತು. ಇಮ್ಮಡಿ ಪುಲಿಕೇಶಿಯು ತನ್ನ ಮಕ್ಕಳನ್ನು ಬಳ್ಳಾರಿ ಮತ್ತು ಕರ್ನೂಲ್ ಪ್ರದೇಶಗಳಿಗೆ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದನು. ಬಾದಾಮಿಯು ಪಲ್ಲವರ ದಾಳಿಗೀಡಾದಾಗ ಚಾಲುಕ್ಯರ ಆದಿತ್ಯವರ್ಮ ಮತ್ತು ಚಂದ್ರಾದಿತ್ಯರು ಕೆಲಕಾಲ ಈ ಪ್ರದೇಶವನ್ನಾಳಿದರು. ಆದಿತ್ಯವರ್ಮನು ಈ ಪರಿಸರದ ಮುಂಡಕಲ್ ಮತ್ತು ಪರಗೆರೆ ಗ್ರಾಮಗಳನ್ನು ದತ್ತಿ ಬಿಟ್ಟನು. ವಿಜಯಾದಿತ್ಯನು ತನ್ನ ಸೈನ್ಯದೊಂದಿಗೆ ಪಂಪಾತೀರ್ಥದಲ್ಲಿ ಬೀಡುಬಿಟ್ಟಾಗ ಭೂಮಿಯನ್ನು ದತ್ತಿ ಕೊಟ್ಟನೆಂದು ಕ್ರಿ.ಶ. ೬೮೯ರ ತಾಮ್ರಶಾಸನವೊಂದು ತಿಳಿಸುತ್ತದೆ (ಪುಟ.೨೦). ಬಾದಾಮಿ ಚಾಲುಕ್ಯರು ಕ್ರಿ.ಶ. ೭೫೩ರವರೆಗೂ ಈ ಪ್ರದೇಶವನ್ನು ಆಳಿದರು.

ರಾಷ್ಟ್ರಕೂಟರು

ರಾಷ್ಟ್ರಕೂಟರ ಅರಸ ದಂತಿದುರ್ಗನು ಬಾದಾಮಿ ಚಾಲುಕ್ಯರ ದೊರೆ ಇಮ್ಮಡಿ ಕೀರ್ತಿವರ್ಮನನ್ನು ಕ್ರಿ.ಶ. ೭೫೨ರಲ್ಲಿ ಸೋಲಿಸಿ, ಮಾನ್ಯಖೇಟದಿಂದ ಆಳ್ವಿಕೆಯನ್ನು ಆರಂಭಿಸಿದನು. ಎ. ಎಸ್. ಅಲ್ತೇಕರರು ರಾಷ್ಟ್ರಕೂಟರು ಕನ್ನಡಿಗರಾಗಿದ್ದು, ಎರಡು ಶತಮಾನಕ್ಕೂ ಮೀರಿ ಆಳ್ವಿಕೆ ನಡೆಸಿದರೆಂದು ತಿಳಿಸುತ್ತಾರೆ. ನಂತರ ಬಂದ ಒಂದನೆಯ ಕೃಷ್ಣ ಮತ್ತು ಧ್ರುವ ರಾಷ್ಟ್ರಕೂಟರ ಪರಮಾಧಿಕಾರವನ್ನು ಉತ್ತರ ಮತ್ತು ದಕ್ಷಿಣ ಭಾರತಗಳಲ್ಲಿ ಸ್ಥಾಪಿಸಿದರು. ಧ್ರುವನ ಮಗನಾದ ಮೂರನೆಯ ಗೋವಿಂದನು ನೊಳಂಬವಾಡಿಯನ್ನು ಜಯಿಸಿದನು. ಇಂದಿನ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಅನಂತಪುರ ಮತ್ತು ಕೋಲಾರ ಜಿಲ್ಲೆಗಳ ಕೆಲಭಾಗಗಳನ್ನು ಈ ರಾಜಮನೆತನ ಒಳಗೊಂಡಿತ್ತು.

ಹೊಸಪೇಟೆಯ ಸಮೀಪದ ಕುಡತಿನಿ ಶಾಸನವೊಂದು ರಾಷ್ಟ್ರಕೂಟರ ಖೆರುಟ್ಟಿದವನ್ನ ಉಲ್ಲೇಖಿಸುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಹಂಪಿಯಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಆ ಕಾಲಕ್ಕಾಗಲೇ ಹಂಪೆಯು ಪ್ರಮುಖ ಧಾರ್ಮಿಕ ಕ್ಷೇತ್ರವಾಗಿತ್ತು. ರಾಷ್ಟ್ರಕೂಟರು ಉತ್ತರ ಭಾರತದ ದಿಗ್ವಿಜಯಗಳಿಂದಾಗಿ ಕರ್ನಾಟಕ ಇತಿಹಾಸದಲ್ಲಿ ಪ್ರಮುಖಸ್ಥಾನ ಪಡೆದಿದ್ದಾರೆ (ದೀಕ್ಷಿತ,೧೯೯೭:೨೧).

ನೊಳಂಬರು:

ರಾಷ್ಟ್ರಕೂಟರ ಸಾಮಂತರಾಗಿ ನೊಳಂಬರು ಮತ್ತು ಗಂಗರು ಈ ಪ್ರದೇಶವನ್ನು ಆಳಿದರು. ಮೊದಲಿಗೆ ಬಳ್ಳಾರಿ ಪ್ರದೇಶವು ನೊಳಂಬವಾಡಿಯ ಒಂದು ಭಾಗವಾಗಿತ್ತು. ಇದರ ರಾಜಧಾನಿಗಳು ಉಚ್ಚಂಗಿ (ಹರಪನಳ್ಳಿ ತಾಲೂಕು), ಹೆಂಜೇರು ಅಥವಾ ಹೇಮಾವತಿ (ಮಡಕಶಿರ ತಾಲೂಕು), ಕಂಪಿಲಿ (ಹೊಸಪೇಟೆ

ತಾಲೂಕು)ಗಳಾಗಿದ್ದವು. ಮೊದಲಿಗೆ ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ನೊಳಂಬರು, ತಲಕಾಡಿನ ಗಂಗರಿಗೂ ಸಾಮಂತರಾಗಿದ್ದರು.

ರಾಷ್ಟ್ರಕೂಟರ ನಂತರ ನೊಳಂಬರು ಕಲ್ಯಾಣಿ ಚಾಲುಕ್ಯರ ಅಧೀನರಾಗಿ ಕಂಪಿಲಿಯಿಂದ ಈ ಪ್ರದೇಶವನ್ನಾಳಿದರು. ಕ್ರಿ.ಶ. ೧೦೧೪ರ ಶಾಸನವೊಂದು ಇರಿವ ನೊಳಂಬಾದಿ ರಾಜರು ಮತ್ತು ಆತನ ಹೆಂಡತಿಯಾದ ಮಬ್ಬರಸಿಯು ಸಂತಾಪದಲ್ಲಿನ (ಹಂಪೆ) ಮಹಾಕಾಲ ದೇವರಿಗೆ ತೆರಿಗೆಗಳನ್ನು ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ (ನೀಲಕಂಠ ಶಾಸ್ತ್ರಿ,೧೯೫೮:೨೨).

ಗಂಗರು ಬಳ್ಳಾರಿ ಜಿಲ್ಲೆಯ ಕೆಲ ಭಾಗಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು. ದುರ್ವಿನೀತ ಮತ್ತು ಶ್ರೀ ಪುರುಷ ತಮ್ಮ ರಾಜ್ಯವನ್ನು ಈ ಪ್ರದೇಶದ ಹಗರಿ ನದಿಯವರಿಗೆ ವಿಸ್ತರಿಸಿದ್ದು, ಧ್ರುವನ ಮಗನಾದ ಕಂಬರಸನು ಗಂಗವಾಡಿಯ ರಾಜ್ಯಪಾಲನಾಗುತ್ತಾನೆ. ಧ್ರುವನ ಕಿರಿಯ ಸಹೋದರನಾದ ಗೋವಿಂದ ಪ್ರಭೂತ ಸೇನನು ಪಟ್ಟಕ್ಕೆ ಬಂದ ನಂತರ ಗಂಗವಾಡಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ.

ಕಲ್ಯಾಣದ ಚಾಲುಕ್ಯರು

ಕ್ರಿ.ಶ. ೯೭೩ರಲ್ಲಿ ಕಲ್ಯಾಣದ ಚಾಲುಕ್ಯರು ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಈ ವಂಶದ ಇಮ್ಮಡಿ ತೈಲನು, ರಾಷ್ಟ್ರಕೂಟರ ಕೊನೆಯ ದೊರೆಯನ್ನು ಪದಚ್ಯುತಗೊಳಿಸಿ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಪಾಂಚಾಲದೇವನನ್ನು ಯುದ್ಧದಲ್ಲಿ ಸೋಲಿಸಿ ಬಳ್ಳಾರಿ, ಪ್ರಾಂತ್ಯವನ್ನು ಚಾಲುಕ್ಯರ ವಶಕ್ಕೆ ತೆಗೆದುಕೊಂಡನು (ಮಹದೇವ,೨೦೦೩:೧೮).

ಕಲ್ಯಾಣ ಚಾಲುಕ್ಯರ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಆದರೆ ಹೊಸಪೇಟೆ ತಾಲ್ಲೂಕಿನಲ್ಲಿ ಅತಿ ವಿರಳವಾಗಿವೆ. ಹೊಸಪೇಟೆ ಸುತ್ತಮುತ್ತಲಿನ ಪ್ರದೇಶ ಸ್ವಲ್ಪ ಕಾಲ ಚೋಳರ ವಶದಲ್ಲಿತ್ತು ಎಂದು ತಿಳಿಯುತ್ತದೆ (ಮಹದೇವ, ೨೦೦೨:೨೪).

ಕ್ರಿ.ಶ.೧೦೧೪ರ ಗೋಣಹುಳಿನ ಶಾಸನವು (ಹೊಸಪೇಟೆ ತಾಲೂಕು) ಸಾಮಂತನಾದ ಇರಿವ ನೊಳಂಬಾದಿ ರಾಜನು ಕಂಪಿಲಿ ನೆಲೆಯಿಂದ ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. (ಎಫಿಗ್ರಫಿ, ಕರ್ನಾಟಿಕಯ.೨೫).

ಚೋಳರ ರಾಜಾದಿರಾಜನು ನೊಳಂಬವಾಡಿ ಮೇಲೆ ದಾಳಿ ಮಾಡಿ ಕಂಪಿಲಿಯನ್ನು ಹಾಳುಮಾಡಿದ ನಂತರ ಕಂಪಿಲಿಯು ಚಾಲುಕ್ಯರ ಪ್ರಾಂತೀಯದ ರಾಜಧಾನಿಯಾಗಿತ್ತು. ಕೋಗಳಿಯ ಕ್ರಿ.ಶ. ೧೦೫೪ರ ಶಾಸನವು ಒಂದನೆಯ ಸೋಮೇಶ್ವರನು ಕಂಪ್ಲಿಯಿಂದ ರಾಜ್ಯವಾಳಿದನೆಂದು ತಿಳಿಸುತ್ತದೆ (ಮಹದೇವ,೨೦೦೨:೨೮).

ವಿಕ್ರಮಾದಿತ್ಯನ (ಕ್ರಿ.ಶ.೧೦೭೬ ರ ಹಂಪಿಯ ಶಾಸನವು) ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಚಟ್ಟೋಪಾಧ್ಯಾಯನು ಮಠವೊಂದರಲ್ಲಿ ಪುರಾಣವನ್ನು ಹೇಳುವ ಉಪಾಧ್ಯಾಯರಿಗೆ ಪ್ರತಿವರ್ಷ ೮೦ ಲೊಕ್ಕಿಗದ್ಯಾಣಗಳನ್ನು ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ (ಎಫಿಗ್ರಫಿ ಕರ್ನಾಟಿಕ, ಕೃಷ್ಣರಾಜನಗರ,೨೯).

ಕಲ್ಯಾಣಿ ಚಾಲುಕ್ಯರಿಗೂ, ಚೋಳರಿಗೂ ಅನೇಕ ಯುದ್ಧಗಳು ನಡೆದರೂ ಚೋಳರು ತಮ್ಮ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸಲಿಲ್ಲ. ಇದರಿಂದಾಗಿ ಈ ಪ್ರದೇಶವು ಚಾಲುಕ್ಯ ಮತ್ತು ಚೋಳರ ರಾಜಕೀಯ ಜೂಜಾಟದ ಕೇಂದ್ರಭಾಗದಂತಿತ್ತು. ಕಲ್ಯಾಣಿ ಚಾಲುಕ್ಯರ ಕೊನೆಯ ದೊರೆ ನಾಲ್ಕನೆಯ ಸೋಮೇಶ್ವರ (೧೧೫೮-೧೧೯೮) ಮತ್ತು ಈತನ ಸಹೋದರರು ಬಿಜ್ಜಳನಿಂದ ತಪ್ಪಿಸಿಕೊಂಡು ಬಂದು ಬಳ್ಳಾರಿ ಮತ್ತು ಚಿತ್ರದುರ್ಗ ಪ್ರದೇಶಗಳಲ್ಲಿ ನೆಲೆ ನಿಂತರು. ಸುಮಾರು ೨೦ ವರ್ಷದ ನಂತರ ಅಂದರೆ ಕ್ರಿ.ಶ.೧೧೮೩ರ ವೇಳೆಗೆ ನಾಲ್ಕನೆಯ ಸೋಮೇಶ್ವರನು ಚಾಲುಕ್ಯ ರಾಜ್ಯವನ್ನು ಮತ್ತೆ ಗಳಿಸಿದನು. ಆದರೆ ಈ ವೇಳೆಗೆ ಹೊಯ್ಸಳರು ಮತ್ತು ಸೇವುಣರು ಪ್ರಬಲರಾಗಿದ್ದು ಅಂತಿಮವಾಗಿ ಚಾಲುಕ್ಯ ರಾಜ್ಯವು ಅವರಲ್ಲಿ ಹಂಚಿಹೋಯಿತು (ಮಹದೇವ, ೨೦೦೨:೧೯).

ಪಾಂಡ್ಯರು

ಪಾಂಡ್ಯರು 'ಉಚ್ಚಂಗಿ'ಯ ಪಾಂಡ್ಯರೆಂದೇ ಪ್ರಸಿದ್ಧರಾಗಿದ್ದಾರೆ. ಇವರು ಚಾಲುಕ್ಯರ ಸಾಮಂತರಾಗಿ ನೊಳಂಬವಾಡಿಯನ್ನು ಆಳುತ್ತಿದ್ದರು. ಇವರ ಕಾಲಕ್ಕೆ ಹೊಸಪೇಟೆ ನೆಲೆಯ ಸಂಡೂರಿನ ಕುಮಾರಸ್ವಾಮಿ ದೇವಾಲಯ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಈಗಿನ ಹೊಸಪೇಟೆ ಪ್ರದೇಶ ಸಿಮರವಾಡಿ ನಾಡಿನ ಭಾಗವಾಗಿತ್ತು. ಕ್ರಿ.ಶ. ೧೧೪೮ರ ಒರುವಾಯಿ ಶಾಸನವು ದೊರವಾಡಿಯನ್ನು ಕುರಿತು ಉಲ್ಲೇಖಿಸುತ್ತದೆ (ಎಫಿಗ್ರಫಿಯ, ಕರ್ನಾಟಿಕ:೨೦).

ಉಚ್ಚಂಗಿ ಪಾಂಡ್ಯರು ಮುಂದೆ ಕಲ್ಯಾಣದಲ್ಲಿ ಅಧಿಕಾರಕ್ಕೆ ಬಂದ ಕಳಚೂರಿ ಅರಸರ ಸಾಮಂತರಾಗಿ ನೊಳಂಬವಾಡಿಯನ್ನು ಆಳುತ್ತಾರೆ.

ಕಳಚೂರಿಗಳು

ಕಲ್ಯಾಣ ಚಾಲುಕ್ಯರ ಮೂರನೆಯ ತೈಲಪನು ಕ್ರಿ.ಶ. ೧೧೬೨ರಲ್ಲಿ ಮರಣ ಹೊಂದಿದ ಬಳಿಕ ಬಿಜ್ಜಳನು ಚಾಲುಕ್ಯ ಸಿಂಹಾನಕ್ಕೆ ಅಧಿಪತಿಯಾದನು. ಈ ಪ್ರದೇಶದ ಉಚ್ಚಂಗಿ ಪಾಂಡ್ಯರ ವಿಜಯ ಪಾಂಡ್ಯನನ್ನು ಮತ್ತು ಸಿಂಹನಾಡಿಯ ಒಮ್ಮಿಲೋವರಸನನ್ನು ಯುದ್ಧದಲ್ಲಿ ಸೋಲಿಸಿ ತನ್ನ ಸಾಮಂತರನ್ನಾಗಿ ಮಾಡಿಕೊಳ್ಳುತ್ತಾನೆ. ಬಿಜ್ಜಳನ ಶಾಸನವೊಂದು ಹೊಸಪೇಟೆಯಲ್ಲಿ ದೊರೆತಿದೆ (ದೇವರಕೊಂಡಾರೆಡ್ಡಿ, ೨೦೦೦:೨೨).

[illegible]

ಈ ವಂಶದ ಸೋಮಿದೇವ (೧೧೬೭-೧೧೭೬) ಮತ್ತು ಇತರರು ಕ್ರಿ.ಶ. ೧೧೮೩ರ ವೇಳೆಗೆ ಕಲ್ಯಾಣಿ ಚಾಲುಕ್ಯರ ನಾಲ್ಕನೆಯ ಸೋಮೇಶ್ವರನು ಕಳೆದುಹೋಗಿದ್ದ ರಾಜ್ಯವನ್ನು ಮತ್ತೆ ಗಳಿಸಿಕೊಂಡು ಚಾಲುಕ್ಯರ ಆಳ್ವಿಕೆಯನ್ನು ಆರಂಭಿಸಿದನು (ದೀಕ್ಷಿತ್, ಜಿ.ಎಸ್.ಪೂರ್ವೋಕ್ತ:೩೪).

ಬಳ್ಳಾರಿ ಅನಂತಪುರ ಮತ್ತು ಚಿತ್ರದುರ್ಗದ ಶಾಸನಗಳು ಈ ಪ್ರದೇಶವನ್ನು ನಾಲ್ಕನೆಯ ಸೋಮೇಶ್ವರನು ಆಳಿದನೆಂದು ತಿಳಿಸುತ್ತದೆ. ಹಂಪೆಯ ಕ್ರಿ.ಶ. ೧೧೯೯ರ ಶಾಸನವು ಕುರುಗೋಡಿನ ಇಮ್ಮಡಿ ರಾಚಮಲ್ಲನ ಮಗನಾದ ವೀರಕಲಿದೇವರಸನನ್ನು ಮತ್ತು ವಿರೂಪಾಕ್ಷತೀರ್ಥ ರಕ್ಷಣೆಗಾಗಿ ಮತಂಗ ಪರ್ವತವನ್ನು ಆಳುತ್ತಿದ್ದ ಸಾಮಂತನಾದ ಮಾಲೆಯನಾಯಕನನ್ನು ಉಲ್ಲೇಖಿಸುತ್ತದೆ (ಬಳ್ಳಾರಿ ಡಿಸ್ಟ್ರಿಕ್ ಗ್ಯಾಸೆಟಿಯರ್: ೩೫).

ಮುಂದೆ ಹೊಯ್ಸಳರು ಮತ್ತು ಸೇವುಣರು ಚಾಲುಕ್ಯ ರಾಜ್ಯಕ್ಕಾಗಿ ಅನೇಕ ಯುದ್ಧಗಳನ್ನು ಮಾಡಿದರು. ಆದರೆ ತುಂಗಭದ್ರಾ ಪ್ರವೇಶವನ್ನು ಹತೋಟಿಯಲ್ಲಿಟ್ಟುಕೊಳ್ಳುವಲ್ಲಿ ಹೊಯ್ಸಳರು ಯಶಸ್ವಿಯಾದರು.

ಹೊಯ್ಸಳರು

ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು ಕ್ರಿ.ಶ. ೧೦೪೭ರಲ್ಲಿ ಈ ಪ್ರದೇಶದ ಕುಮ್ಮಟವನ್ನು ತಮ್ಮ ಭದ್ರನೆಲೆಯನ್ನಾಗಿ ಮಾಡಿಕೊಂಡಿದ್ದರು. ಕಲ್ಯಾಣಿ ಚಾಲುಕ್ಯರಿಗೂ ಮತ್ತು ಹೊಯ್ಸಳರಿಗೂ ವೈವಾಹಿಕ ಸಂಬಂಧವಿತ್ತು. ಬಲ್ಲಾಳನ ಕ್ರಿ.ಶ. ೧೨೧೭ರ ಶಾಸನವು ಈ ಪ್ರದೇಶದ ಕಂಪ್ಲಿ ಮತ್ತು ಸಿರೆಯ ಕುರುಗೋಡು ಸ್ಥಳಗಳನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೨೧೯ರಲ್ಲಿ ಸಂಡೂರಿನ ಕಾರ್ತಿಕೇಯ ತಪೋವನಕ್ಕೆ ದತ್ತಿ ನೀಡಿದ್ದಾನೆ (ಬಳ್ಳಾರಿ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್:೨೨).

ಕ್ರಿ.ಶ. ೧೨೩೫ ರಿಂದ ೧೨೫೩ರವರೆಗೆ ಆಳಿದ ಸೋಮೇಶ್ವರನು ಹೊಯ್ಸಳ ರಾಜ್ಯದ ಉತ್ತರದ ಭಾಗಗಳಿಗೆ ಅಷ್ಟಾಗಿ ಗಮನ ಕೊಡಲಿಲ್ಲ. ಕ್ರಿ.ಶ.೧೨೩೭ರ ಹಂಪಿ ಶಾಸನವು ಸೋಮೇಶ್ವರನು ವಿರೂಪಾಕ್ಷ ದೇವರಿಗೆ ದತ್ತಿ ಕೊಟ್ಟ ಬಗ್ಗೆ ತಿಳಿಸುತ್ತದೆ (ದೇವರಕೊಂಡಾರೆಡ್ಡಿ ,೧೯೯೮:೩೮).

ಸೇವುಣರ ಶಾಸನಗಳು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವುದರಿಂದ ಈ ಪ್ರದೇಶಗಳು ಕೆಲಕಾಲ ಅವರ ವಶದಲ್ಲಿದ್ದವೆಂದು ಹೇಳಬಹುದು.

ಕ್ರಿ.ಶ. ೧೨೯೧ರಲ್ಲಿ ಪಟ್ಟಕ್ಕೆ ಬಂದ ಮೂರನೆಯ ಬಲ್ಲಾಳನು ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಕುಮ್ಮಟದ ಕಂಪ್ಲಿ ದೇವನೊಡನೆ ಸೆಣಸಬೇಕಾಯಿತು. ಕ್ರಿ.ಶ. ೧೩೨೦ರ ಸುಮಾರಿಗೆ ಬಲ್ಲಾಳನು ಕಂಪಿಲದೇವನನ್ನು ಸೋಲಿಸಿ ದೂರಮಾಡಿ ಮತ್ತು ಕಂಪಿಲಗಳನ್ನು ಕೈವಶ ಮಾಡಿಕೊಂಡನೆಂದು ಅಭಿಪ್ರಾಯ

ಪಡಲಾಗಿದೆ (ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್:೪೦) ಕ್ರಿ.ಶ. ೧೩೨೭ರಲ್ಲಿ ಕುಮ್ಮಟವು ತನ್ನ ಅಸ್ತಿತ್ವ ಕಳೆದುಕೊಂಡ ಮೇಲೆ ಬಲ್ಲಾಳನು ಈ ಪ್ರದೇಶದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದನು. ಬಲ್ಲಾಳನು ರಾಜ್ಯದ ರಕ್ಷಣೆಗಾಗಿ ರಾಜ್ಯದ ಉತ್ತರ ಭಾಗವಾದ ಹಂಪೆಯಲ್ಲಿ ಹೊಸಪಟ್ಟಣವನ್ನು ನಿರ್ಮಿಸಿ ಇಲ್ಲಿ ಆಗಾಗ್ಗೆ ತಂಗುತ್ತಿದ್ದನು. ಹೊಸ ಪಟ್ಟಣವೆಂಬುದು ವಿಜಯನಗರದ ಮೊದಲಿನ ಹೆಸರಾಗಿತ್ತು (ದೀಕ್ಷಿತ್,ಪೂರ್ವೋಕ್ತ:೪೩).

ಕ್ರಿಶ. ೧೩೨೦ರ ಶಾಸನವೊಂದು ಬಲ್ಲಾಳ 'ಪುದುಪಡ್ಯೆವೀಡು' ಎಂದರೆ ಹೊಸಪಟ್ಟಣದಲ್ಲಿದ್ದಾನೆಂದು ತಿಳಿಸುವುದು (ದೇವರಕೊಂಡಾರೆಡ್ಡಿ,೨೦೦೨:೪೪).

ಅನಂತರ ಅರಸೀಕರೆ ಶಾಸನವು ಸಹ ಬಲ್ಲಾಳನು ಹೊಸಪಟ್ಟಣದಲ್ಲಿದ್ದನೆಂದು ತಿಳಿಸುವುದು (ಪುಟ.೪೫ ವಸುಂಧರಾ ಫಿಲಿಯೋಜಾ, ಪೂರ್ವೋಕ್ತ). ಗುಬ್ಬಿಯ ಶಾಸನ ವಿರೂಪಾಕ್ಷ ಹೊಸಪಟ್ಟಣವೆಂದು ಹೊಸಕೋಟೆಯ ಶಾಸನ ಬಲ್ಲಾಳ ವಿಜಯ ವಿರುಪಾಕ್ಷಪುರವೆಂದು (ದೇವರಕೊಂಡಾರೆಡ್ಡಿ,೨೦೦೨, ೪೨-೪೬). ಹಾಗೂ ದೇವನಹಳ್ಳಿ ಶಾಸನ ವಿರೂಪಾಕ್ಷಸುತಿ ಎಂದು ಉಲ್ಲೇಖಿಸಿದೆ. (ಎಫಿಗ್ರಫಿಯಾ ಕರ್ನಾಟಿಕ:೪೮). ಈ ಹೆಸರು ಹೇಗೆ? ಏಕೆ? ಬಂದಿತು ಎಂಬ ಪ್ರಶ್ನೆಗೆ ಉತ್ತರ ಸುಲಭ. ಮುಮ್ಮಡಿ ಬಲ್ಲಾಳನ ಮಗನ ಹೆಸರು ನಾಲ್ವಡಿ ಬಲ್ಲಾಳ, ವೀರ ವಿಜಯ ಬಲ್ಲಾಳ ವೀರ ವಿರೂಪಾಕ್ಷ ಬಲ್ಲಾಳ ಹಾಗೂ ಹಂಪೆವೊಡೆಯ ಎಂದಿರೆ ಹಂಪೆಯ ಮುಖ್ಯದೇವರ ಹೆಸರೂ ವಿರೂಪಾಕ್ಷ, ನಾಲ್ಕನೆಯ ಬಲ್ಲಾಳನ ಹೆಸರು ವಿರೂಪಾಕ್ಷ ಎಂದಿರುವುದರಿಂದ ಸಹಜವಾಗಿಯೇ ವಿರೂಪಾಕ್ಷ ಪಟ್ಟಣ ಎಂಬುದು ಹಂಪೆಯ ಇನ್ನೊಂದು ಹೆಸರಾಗಿದೆ (ಮಹದೇವ,೨೦೦೨:೫೨). ಹನ್ನೆರಡನೆಯ ಶತಮಾನದ ಶಾಸನವೊಂದು (೧೧೯೯) ಹಂಪೆಯ ವಿರೂಪಾಕ್ಷ ತೀರ್ಥ ಎಂದು ಕರೆದಿದೆ. ವಿರೂಪಾಕ್ಷ ತೀರ್ಥ ಅಥವಾ ವಿರೂಪಾಕ್ಷಪಾದ, ವಿರೂಪಾಕ್ಷ ಪಟ್ಟಣ ಎಂಬುವು ಹಂಪೆಯ ಬೇರೆ ಬೇರೆ ಹೆಸರುಗಳಾಗಿವೆ. ಮೂರನೆಯ ಬಲ್ಲಾಳನು ಮೂರು ರಾಜಧಾನಿಗಳನ್ನು ಹೊಂದಿದ್ದನು. ಒಂದನೆಯದು ದ್ವಾರಸಮುದ್ರ (ಹಳೆಬೀಡು, ಹಾಸನ ಜಿಲ್ಲೆ) ಎರಡನೆಯದು ವಿಜಯ ವಿರೂಪಾಕ್ಷ ಹೊಸಪಟ್ಟಣ, ಕ್ರಿ.ಶ. ೧೩೩೬ರಿಂದ ಮಹಾಮಂಡಲೇಶ್ವರನಾಗಿ ಹರಿಹರನು ಹಂಪೆಯ ಹೊಸಪಟ್ಟಣದಿಂದ ಹೊಯ್ಸಳ ರಾಜ್ಯದ ಉತ್ತರಭಾಗಗನ್ನು ಆಳಿದನು. ಕ್ರಿ.ಶ. ೧೩೩೯ ರಲ್ಲಿ ಮೂರನೆಯ ಬಲ್ಲಾಳನು ಹಂಪೆಯಲ್ಲಿ ತಂಗಿದ್ದನೆಂದು ಶಾಸನವೊಂದು ತಿಳಿಸುತ್ತದೆ. ಕ್ರಿ.ಶ ೧೩೪೨ರಲ್ಲಿ ಮೂರನೆಯ ಬಲ್ಲಾಳ ತೀರಿಕೊಂಡನು ೧೩೮೩ರಲ್ಲಿ ಈತನ ಮಗನಾದ ನಾಲ್ಕನೆಯ ಬಲ್ಲಾಳನು ಹಂಪೆಯ ಹೊಸ ಪಟ್ಟಣದಲ್ಲಿ ಪಟ್ಟಾಭಿಷಿಕ್ತ ನಾದನು ಆದರೆ ಕ್ರಿ.ಶ ೧೩೪೬ರಲ್ಲಿ ಮರಣ ಹೊಂದಿದನು.

ಇಲ್ಲಿಗೆ ಹೊಯ್ಸಳರ ಆಳ್ವಿಕೆಯು ಈ ಪ್ರದೇಶ ಸೇರಿದಂತೆ ಕೈಗೆ ತೆಗೆದುಕೊಳ್ಳುತ್ತಾನೆ. ಮುಂದೆ ಸಂಗಮ ಸಹೋದರರು ಈ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದರು ಎಂದು ಹೇಳಬಹುದು (ಮಹದೇವ,೨೦೦೨,:೨೨).

ವಿಜಯನಗರ ಕಾಲದಲ್ಲಿ ಹಂಪೆಯೊಂದಿಗೆ ವಿಜಯ ವಿರೂಪಾಕ್ಷಪುರ ಸೇರಿತ್ತು. ಕಾಲಾಂತರದಲ್ಲಿ ಕೃಷ್ಣದೇವರಾಯ ತನ್ನ ಪಟ್ಟದರಸಿಯಲ್ಲೊಬ್ಬಳಾದ ತಿರುಮಲಾದೇವಿ ಹೆಸರಿನಲ್ಲಿ ವಿಜಯನಗರದ ಒಂದು ಉಪಭಾಗವನ್ನು ತಿರುಮಲಾದೇವಿ ಪಟ್ಟಣವೆಂದು ನಾಮಕರಣ ಮಾಡಿದ್ದಾನೆ. ವಿಜಯನಗರ ಕಾಲದಲ್ಲಿ ತಿರುಮಲಾದೇವಿ ಪಟ್ಟಣ ಅಭಿವೃದ್ಧಿ ಹೊಂದಿರುವುದಕ್ಕೆ ಅನೇಕ ಆಕರಗಳಲ್ಲಿ ಮೂಲಗಳಿವೆ. ತಿರುಮಲಾದೇವಿ ಪಟ್ಟಣದಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಲಾಗಿತ್ತು. ಸಣ್ಣಕ್ಕಿ ವೀರಭದ್ರ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿತ್ತು. ಜಂಬುಲಿಂಗ ದೇವಾಲಯದ ಮುಂದೆ ಹಿತ್ತಾಳೆಯ ಧ್ವಜಸ್ತಂಭವನ್ನು ನಿರ್ಮಿಸಲಾಗಿದೆ. ಬನ್ನಿಮಂಟಪವನ್ನು ಕೂಡ ಇವರ ಕಾಲದಲ್ಲಿ ನಿರ್ಮಿಸಲಾಗಿತ್ತು. ಈ ಕಾಲದಲ್ಲಿ ಅನೇಕ ಗ್ರಾಮಗಳನ್ನು ದಾನವಾಗಿ ನೀಡುತ್ತಿದ್ದುದು ಕಂಡುಬರುತ್ತದೆ. ಈ ವಿವರಗಳು ದೇವರಕೊಂಡಾರೆಡ್ಡಿ ಅವರು ಸಂಪಾದಿಸಿದ ಶಾಸನಸಂಪುಟಗಳಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ತಿರುಮಲಾದೇವಿ ಪಟ್ಟಣಕ್ಕೆ ಕೋಟೆಯನ್ನೂ ನಿರ್ಮಿಸಲಾಗಿದೆ. ಎಲ್ಲಪಂಣನು ಕೆರೆಯನ್ನು ನಿರ್ಮಿಸಿದ್ದಕ್ಕೆ ಉಲ್ಲೇಖಗಳಿವೆ. ಈ ಕೆರೆ ಇಂದು ಬಸವೇಶ್ವರ ಬಡಾವಣೆಯಾಗಿದೆ. ಅಷ್ಟೇ ಅಲ್ಲದೆ ಕೆರೆಗಳಿಗೆ ಕಾಲುವೆಗಳನ್ನು ನಿರ್ಮಿಸಿದ್ದು ಕಂಡುಬಂದಿದೆ. ತುಂಗಭದ್ರಾ ನದಿಯಿಂದ ವಿಜಯನಗರಕ್ಕೆ ನೀರನ್ನು ಪೂರೈಸಲು ತಿರುಮಲಾದೇವಿ ಪಟ್ಟಣದ ಮೂಲಕ ಕಾಲುವೆಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಬಹುಶಃ ವಿಜಯನಗರ ಪತನಾನಂತರ ಈ ಭಾಗವು ಹಾಳುಬಿದ್ದು, ಜನವಸತಿಯು ಕ್ರಮೇಣ ಕಡಿಮೆಯಾಗುತ್ತಾ ಬಂದು ಸ್ವಲ್ಪ ಸ್ಥಳಾಂತರವಾಗಿರಬಹುದು. ನಂತರ ಹೊಸದಾಗಿ ಸ್ಥಳಾಂತರಗೊಂಡ ಜನರಿಂದ ಈ ತಿರುಮಲಾದೇವಿ ಪಟ್ಟಣವೇ ಹೊಸಪೇಟೆಯಾಗಿ ಮಾರ್ಪಾಟಾಗಿರುವ ಸಾಧ್ಯತೆಗಳಿವೆ. ಪ್ರಸ್ತುತ ಅಧ್ಯಯನದಲ್ಲಿ ಈ ಬಗ್ಗೆ ವಿವರವಾಗಿ ಅಧ್ಯಯನ ಮಾಡಲಾಗಿದೆ. ನಂತರದಲ್ಲಿ ಈ ಪಟ್ಟಣವು ಆದಿಲ್‌ಶಾಹಿಗಳ ಆಳ್ವಿಕೆಗೆ ಒಳಪಟ್ಟಿತು. ಆ ನಂತರ ಟಿಪ್ಪು ಬಳ್ಳಾರಿ ಪ್ರದೇಶವನ್ನು ಬ್ರಿಟೀಷರಿಗೆ ಮತ್ತು ನಿಜಾಮರಿಗೆ ಬಿಟ್ಟುಕೊಟ್ಟಾಗ ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಲಾಯಿತು. ನಂತರ ಈ ಪ್ರದೇಶ ಮದ್ರಾಸ್ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿತು.

[illegible]

ಭಾರತದ ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಹೊಸಪೇಟೆ ಪ್ರದೇಶಕ್ಕೆ ಒಂದು ಆಯಾಮವೇ ದೊರೆತಿದೆ. ಹೊಸಪೇಟೆಯು ೧೯೫೭ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಖ್ಯ ಪಾತ್ರ ವಹಿಸಿತು. ಇದರಲ್ಲಿ ಠಾಕೂರ್ ಧನ ಸಹಾಯ ಮಾಡಿದ್ದರು. ಭೀಮರಾವ್, ಕೆಂಚನಗೌಡ, ಹಮ್ಮಿಗಿಯ ದೇಸಾಯಿ ಪ್ರಮುಖ ಪಾತ್ರ ವಹಿಸಿದ್ದಾರೆ. ೧೯೩೦ರ ಉಪ್ಪಿನ ಸತ್ಯಾಗ್ರಹ ಮತ್ತು ಮದ್ಯ ನಿಷೇಧ ಚಳವಳಿಯಲ್ಲಿ ಹೊಸಪೇಟೆ ಪಾತ್ರ ಮುಖ್ಯವಾಗಿದೆ. ಈ ಚಳವಳಿಯಲ್ಲಿ ಮತ್ತಿಹಳ್ಳಿ ರಾಘುವೇಂದ್ರರಾಯ, ಕಲ್ಲಪ್ಪ ಬೆನ್ನೂರು, ತಿರುಮಲರಾಯ ಮೊದಲಾದವರು ಭಾಗವಹಿಸಿದರು. ಚರಿತ್ರೆಯ ದೃಷ್ಟಿಯಿಂದ ೧೯೩ನ-೩೩ರಲ್ಲಿ ನಡೆದ ಆಂದೋಳನಗಳು ಹೆಚ್ಚಿನ ಪ್ರಾಮುಖ್ಯತೆ ಗಳಿಸಿವೆ.

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಭಾಷಾವಾರು ಪ್ರಾಂತ್ಯಗಳ ಹಿನ್ನೆಲೆಯಲ್ಲಿ ೧೯೫೨ ಡಿಸೆಂಬರ್‌ನಲ್ಲಿ ಕೆ.ಎಸ್. ವಾಂಚೂ ವರದಿಯು ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಹೊಸಪೇಟೆ, ಮೈಸೂರು ಸಂಸ್ಥಾನಕ್ಕೆ ಸೇರಬೇಕೆಂದು ವರದಿ ನೀಡಿತ್ತು. ಈ ವರದಿಯಂತೆ ೧೯೫೩ನೆಯ ಅಕ್ಟೋಬರ್ ೧ರಂದು ಮೈಸೂರು ಸಂಸ್ಥಾನಕ್ಕೆ ಸೇರಿತು. ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಆಂದೋಳನಗಳ ಪಾತ್ರ ಪ್ರಮುಖವಾಗಿದ್ದು ಕಂಡುಬರುತ್ತದೆ. ಈ ಅಂಶಗಳನ್ನು ಪ್ರಸ್ತುತ ಅಧ್ಯಯನವು ಅಭ್ಯಾಸ ಮಾಡಲು ಉದ್ದೇಶಿಸಿದೆ.

* * * * *


[illegible]

[illegible]

ಅಧ್ಯಾಯ ೨

ನಗರದ ಬೆಳವಣಿಗೆಯ ಆರಂಭಿಕ ಕಾಲಘಟ್ಟ

ಹೊಸಪೇಟೆ ಒಳಗೊಂಡಂತ ಪಟ್ಟಣಗಳು



೧. ತಿರುಮಲಾದೇವಿ ಪಟ್ಟಣ (ಹೊಸಪೇಟೆ)
೨. ತಿರುಮಲಾಪುರ (ಅನಂತಶಯನಗುಡಿ)
೩. ನಾಗೇನಹಳ್ಳಿ
೪. ಚಿತ್ತವಾಡ್ಗಿ
೫. ಹೊಸೂರು
೬. ವಿಜಯನಗರ (ಹಂಪಿ)
೭. ತುಂಗಭದ್ರಾ ಜಲಾಶಯ

ಜಾಗತಿಕ ಪ್ರವಾಸಿಕೇಂದ್ರ ಎಂದು ಗುರುತಿಸಲ್ಪಟ್ಟ ಹಂಪಿಯು ಕರ್ನಾಟಕ ಚರಿತ್ರೆಯ ಕೇಂದ್ರಬಿಂದುವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಹಂಪಿಯು ವಿಜಯನಗರದ ಕೇಂದ್ರಬಿಂದುವಾಗಿ ಹೊರಹೊಮ್ಮಲು ವಿಜಯನಗರದ ಅನೇಕ ಸ್ಥಳೀಯ ಪಟ್ಟಣಗಳು ಪೂರಕವಾಗಿರುವುದನ್ನು ನಾವು ನೋಡಬಹುದು.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರ ಪಟ್ಟಣವು ಪಂಪಾಕ್ಷೇತ್ರದಲ್ಲಿ ಇದ್ದ ಕಾರಣ ಮುಂದೆ ಇದುವೇ ಹಂಪೆಯಾಗಿ ಮಾರ್ಪಾಡಾಯಿತು. ವಿಜಯನಗರ ಪಟ್ಟಣಕ್ಕೆ ಒಟ್ಟು ಏಳು ಸುತ್ತಿನ ಕೋಟೆ ಇದೆ ಎಂದು ವಿದೇಶಿ ಬರಹಗಳಿಂದ ತಿಳಿಯಬಹುದು. ಏಳು ಸುತ್ತಿನ ಕೋಟೆಯನ್ನು ಇಲ್ಲಿಯವರೆಗೆ ಸ್ಪಷ್ಟವಾಗಿ ಗುರುತಿಸಲಾಗದಿದ್ದರೂ, ಐದು ಸುತ್ತುಗಳನ್ನು ಖಚಿತವಾಗಿ ಗುರುತಿಸಲಾಗಿದೆ. ಈ ಏಳು ಸುತ್ತಿನ ಕೋಟೆಯೊಳಗೆ ವಿಜಯನಗರ ಪಟ್ಟಣಕ್ಕೆ ಹೊಂದಿಕೊಂಡಿದ್ದ ಚಿಕ್ಕ ಜನವಸತಿಯ ಪ್ರದೇಶಗಳನ್ನು ಉಪನಗರಗಳೆಂದು ಗುರುತಿಸಬಹುದು. ಈ ಉಪನಗರಗಳ ಗಾತ್ರ, ವ್ಯಾಪ್ತಿ ಮತ್ತು ರಚನಾ ವಿನ್ಯಾಸದಲ್ಲಿ ನಗರಗಳಿಗಿಂತ ಚಿಕ್ಕನಗರವಾಗಿದ್ದರೂ ಇವುಗಳನ್ನು ವಿಜಯನಗರದ ಪಟ್ಟಣದ ಉಪನಗರಗಳೆಂದು ಹೇಳಬಹುದು (ನಾಗೇಗೌಡ,೧೯೬೬:೬೪).

ವಿಜಯನಗರದ ಉಪನಗರಗಳಲ್ಲಿ ವ್ಯಾಪಾರ ಚಟುವಟಿಕೆಗಳು, ಧಾರ್ಮಿಕ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ಈ ಉಪನಗರಗಳಲ್ಲಿ ವರ್ತಕರಿಗೆ ವಾಸವಾಗುವುದಕ್ಕೆ ಕೃಷ್ಣದೇವರಾಯ ಅನುಮತಿ ನೀಡಿದ್ದು ಇವರಿಗೆ ಮನೆಗಳನ್ನು ನಿರ್ಮಿಸಿದ್ದನು ಎಂಬುದು ವಿದೇಶಿ ಬರಹಗಳಿಂದ ತಿಳಿಯುತ್ತದೆ. ವಿಜಯನಗರ ಪಟ್ಟಣದಲ್ಲಿ ತಿರುಮಲಾದೇವಿ ಪಟ್ಟಣ (ಹೊಸಪೇಟೆ) ಉಪನಗರವಾಗಿತ್ತು (ಹಂಪಿ ಸಂಪುಟ:೨೦೦೦).

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವವೇ ಹೊಸಪೇಟೆ ಪ್ರದೇಶವಿತ್ತೆಂದು ಶಾಸನಗಳಿಂದ ತಿಳಿಯಬಹುದು. ವಿಜಯನಗರ ಕಾಲದಲ್ಲಿ ಕೃಷ್ಣದೇವರಾಯನು ಈ ಪ್ರದೇಶಕ್ಕೆ ತನ್ನ ಪ್ರೀತಿಯ ಹೆಂಡತಿ ತಿರುಮಲಾದೇವಿಯ ನೆನಪಿಗೆ ಹೊಸಪೇಟೆಯನ್ನು ಆಧುನಿಕ ಗ್ರಾಮವಾಗಿ ನಿರ್ಮಾಣ ಮಾಡಿದ್ದನು. ಹೀಗಾಗಿ ಈ ಪ್ರದೇಶವನ್ನು ತಿರುಮಲಾದೇವಿ ಪಟ್ಟಣವೆಂದು ಕರೆಯುತ್ತಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ರಚನೆಗೊಂಡ ಸಣ್ಣ ಸಣ್ಣ ಪ್ರದೇಶಗಳ ಜೊತೆಗೆ ಮುಂದೆ ಕೆಲವು ಗ್ರಾಮಗಳು ಸೇರಿ ಇಂದಿನ ಹೊಸಪೇಟೆಯಾಗಿದೆ ಎಂದು ಸಿ.ಮಹಾದೇವ ಅವರು ಬರೆದಿದ್ದಾರೆ (ಮಹದೇವ,೨೦೦೦:೩).

ಹೊಸಪೇಟೆಯ ಅಧ್ಯಯನಕ್ಕೆ ಶಾಸನಗಳು, ವಿದೇಶಿಯರ ಪ್ರವಾಸಿ ಕಥನಗಳು, ಜನಪದ ಐತಿಹ್ಯಗಳನ್ನು ಪರಿಶೀಲಿಸಲಾಗಿದೆ. ಮುಖ್ಯವಾಗಿ ನಗರವು ಒಂದು ಗ್ರಾಮವು ಗ್ರಾಮದೊಂದಿಗೆ ಸೇರಿಕೊಂಡು ಬೆಳವಣಿಗೆ ಹೊಂದುವುದನ್ನು ಕಾಣಬಹುದು. ವಿಜಯನಗರ ಕಾಲದಲ್ಲಿ ವಲಸೆ ಬಂದ ಜನರು ಮತ್ತು ವ್ಯಾಪಾರಕ್ಕೆ ಬಂದ ವರ್ತಕರಿಂದ ನಗರ ಬೆಳವಣಿಗೆಯಾಗಿ ಕಂಡುಬಂದಿರುವುದನ್ನು ಕಾಣಬಹುದು.

ವಿಜಯನಗರ ಕಾಲದಲ್ಲಿ ಧಾರ್ಮಿಕ ಕೇಂದ್ರಗಳಾಗಿ ಕೆಲವು ಗ್ರಾಮಗಳು ಸ್ಥಾಪನೆಯಾದವು (ರೈ, ೨೦೦೪:೪೪).

ಗ್ರಾಮೀಣ ಪ್ರದೇಶ ನಗರ ಪ್ರದೇಶವಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆ ಸರಳವಾದುದಲ್ಲ. ಅದೊಂದು ಸಂಕೀರ್ಣ ಪ್ರಕ್ರಿಯೆ. ನಗರೀಕರಣ ಪ್ರಕ್ರಿಯೆಯಲ್ಲಿ ನಗರಗಳ ಹುಟ್ಟು ಮತ್ತು ಅವುಗಳ ಬೆಳವಣಿಗೆ ಪ್ರಧಾನ ಅಂಶಗಳು. ಈ ಪ್ರಕ್ರಿಯೆಗಳಿಗೆ ಭೌಗೋಳಿಕ ಸನ್ನಿವೇಶಗಳಲ್ಲಿ ಕೃಷಿಕ್ಷೇತ್ರಗಳಲ್ಲಿ ಹೆಚ್ಚುವರಿ ಉತ್ಪಾದನೆ, ರಾಜಕೀಯ ವ್ಯವಸ್ಥೆ, ಕೃಷಿಯೇತರ ಚಟುವಟಿಕೆಗಳು ತೊಡಗಿದ್ದ, ಪ್ರಧಾನ ಅರ್ಥವ್ಯವಸ್ಥೆ, ಸಾರಿಗೆ ಸಂಪರ್ಕ, ಧರ್ಮ ಮೊದಲಾದವು ಕಾರಣಗಳಾಗಿವೆ (ವಸು,೨೦೦೪:೮೫).

ರಾಜಕೀಯ ಚಟುವಟಿಕೆಗಳು ಪ್ರಧಾನವಾಗಿದ್ದ ಕೇಂದ್ರಗಳು ರಾಜಧಾನಿ ಪಟ್ಟಣಗಳಾಗಿ, ವ್ಯಾಪಾರ ವಾಣಿಜ್ಯದ ಕೇಂದ್ರಗಳು ವ್ಯಾಪಾರ ಕೇಂದ್ರಗಳಾಗಿ, ಧಾರ್ಮಿಕ ಚಟುವಟಿಕೆಗಳೇ ಪ್ರಧಾನವಾಗಿದ್ದ ಕೇಂದ್ರಗಳು ಧಾರ್ಮಿಕ ಕೇಂದ್ರಗಳಾಗಿ ರೂಪಗೊಂಡವು (ರೈ,೨೦೦೪:೧೪).

ನಗರಗಳ ಹುಟ್ಟು ಮತ್ತು ಬೆಳವಣಿಗೆಯನ್ನು ನಾಗರಿಕರು ಎಂಬ ಪರಿಕಲ್ಪನೆಯ ಅಡಿಯಲ್ಲಿ ಅಧ್ಯಯನ ಮಾಡಲಾಗುತ್ತದೆ. ನಾಗರಿಕ ರಾಜ್ಯ ಅಧ್ಯಯನ ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಬೆಳೆದು ಬಂದಿತು. ನಗರ ಅಧ್ಯಯನವನ್ನು ಆಯಾ ಕಾಲಘಟ್ಟದ ಹಿನ್ನೆಲೆಯಿಂದ ಕಂಡುಕೊಳ್ಳಬೇಕಾಗುತ್ತದೆ. ಪ್ರಾಚೀನ ನಗರಗಳು, ಮಧ್ಯಕಾಲೀನ ನಗರಗಳು ಮತ್ತು ಆಧುನಿಕ ನಗರಗಳು ಒಂದೇ ಸ್ವರೂಪದ್ದಾಗಿರುವುದಿಲ್ಲ ಆದರೂ ಅವುಗಳಲ್ಲಿ ಕೆಲವು ಸಾಮ್ಯತೆಯನ್ನು ಗುರುತಿಸಬಹುದು (ರೈ,೨೦೦೬:೪).

[illegible]

[illegible]

[illegible]

[illegible]

[illegible]

[illegible]

ಮಧ್ಯಕಾಲೀನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಸಿದ್ಧ ಪಡೆದ ಅರಸು ಮನೆತನಗಳಲ್ಲಿ ಒಂದು. ಮಧ್ಯಕಾಲೀನ ಐತಿಹಾಸಿಕ ನೆಲೆಗಳಾದ ಚಂಪನೀಕ ಮತ್ತು ಫತೇಪುರ, ಸಿಕ್ರಿ, ಆಗ್ರಾ ಸಹ ವಿಜಯನಗರ ಸಾಮ್ರಾಜ್ಯದ ಸಮಕಾಲೀನ ನೆಲೆಗಳಾಗಿದ್ದರೂ ವಿಜಯನಗರ ಸಾಮ್ರಾಜ್ಯವು ತನ್ನದೆಯಾದ ವೈಶಿಷ್ಟ್ಯಗಳನ್ನು ಹೊಂದಿರುವುದು ಗಮನಾರ್ಹ (ವಾಸುದೇವನ್,೨೦೦೬:೩೦೦). ಬಳ್ಳಾರಿ ಜಿಲ್ಲೆಯಲ್ಲಿರುವ ಹಂಪೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ವಿಜಯನಗರದ ಅರಸರು ಇಡೀ ದಕ್ಷಿಣ ಭಾರತವನ್ನು ಸುಮಾರು ಮೂರು ಶತಮಾನಗಳಿಗೂ ಅಧಿಕವಾಗಿ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಇವರ ರಾಜ್ಯಗಳ ಭೌಗೋಳಿಕ ವಿಂಗಡನೆಯ ಬಹಳ ಮುಖ್ಯವಾದ ಘಟಕ ನಗರ ಅಥವಾ ಪಟ್ಟಣವಾಗಿತ್ತು. ಈ ಅಧ್ಯಾಯದಲ್ಲಿ ವಿಜಯನಗದ ರಾಜಧಾನಿಯನ್ನು ಮತ್ತು ಅದರೊಂದಿಗೆ ಸಾವಯವ ಸಂಬಂಧಗಳನ್ನು ಹೊಂದಿದದ್ದಂತಹ ಉಪನಗರಗಳನ್ನು ಕುರಿತು ಚರ್ಚಿಸಲು ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಹೊಸಪೇಟೆಯನ್ನು ವಸ್ತು ವಿಷಯವನ್ನಾಗಿಟ್ಟುಕೊಂಡು ಅಧ್ಯಯನವನ್ನು ಮಾಡಲು ಪ್ರಯತ್ನಿಸಲಾಗಿದೆ.

ವಿಜಯನಗರದ ಹಂಪೆಯು ರಾಜಕೀಯ, ವ್ಯಾಪಾರ ಮತ್ತು ಧಾರ್ಮಿಕ ಕೇಂದ್ರವಾಗಿ ಬೆಳವಣಿಗೆ ಹೊಂದಿದ್ದರೂ ಹೊಸಪೇಟೆಯು ಪ್ರಮುಖ ಕೃಷಿ ಮತ್ತು ವ್ಯಾಪಾರ ಕೇಂದ್ರವಾಗಿ ಬೆಳವಣಿಗೆ ಹೊಂದಿರುವುದನ್ನು ನೋಡಬಹುದು. ವಲಸೆ ಬಂದ ಜನರು ಅದರಲ್ಲೂ ವರ್ತಕರು ಹೊಸಪೇಟೆ ನಗರ ಬೆಳವಣಿಗೆಗೆ ಕಾರಣೀಭೂತರಾಗಿದ್ದು ಬಹಳ ಮುಖ್ಯವಾದ ಸಂಗತಿಯಾಗಿದೆ.

ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಅಧ್ಯಯನದಲ್ಲಿ ಪ್ರಾಚೀನ ಮಧ್ಯಕಾಲೀನ ಹಾಗೂ ಆಧುನಿಕ ಕಾಲಘಟ್ಟಗಳಲ್ಲಿ ವಿಜಯನಗರದ ಅವಿಭಾಜ್ಯ ಅಂಗವಾಗಿದ್ದ ಹೊಸಪೇಟೆಯ ಬೆಳೆವಣಿಗೆಗಳ ಪ್ರಕ್ರಿಯೆಯನ್ನು ಅಭ್ಯಾಸ ಮಾಡಲು ಪ್ರಯತ್ನಿಸಲಾಗಿದೆ.

ಹೊಸಪೇಟೆ ಭೌಗೋಳಿಕ ವಿವರಣೆಗಳು ಹೀಗಿವೆ.

೧. ಚಿತ್ತವಾಡಿಗಿ

ಹೊಸಪೇಟೆ ಆಧುನಿಕ ನಗರವಾಗುವುದಕ್ಕೆ ಪೂರ್ವದಲ್ಲಿ ಚಿತ್ತವಾಡಿಗಿಯೇ ಪ್ರಮುಖ ಗ್ರಾಮವಾಗಿತ್ತು. ಜಿಲ್ಲೆಗೆ ಇದು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು (ಸರ್ವೇಶ್ವರ ಸ್ವಾಮಿ, ೧೯೬೪:೧೮).

ಹೊಸಪೇಟೆ ನಗರ ವ್ಯಾಪ್ತಿಯಲ್ಲಿರುವ ಚಿತ್ತವಾಡಿಗಿಯ ದಿನಾಂಕವಿಲ್ಲದ ಶಾಸನವೊಂದರಲ್ಲಿ ಚಿಕವಾಡಿ ಎಂಬ ರೂಪವನ್ನು ಹೊಂದಿದ್ದು (ಸರ್ವೇಶ್ವರ ಸ್ವಾಮಿ.ಹೆಚ್, ಪೂರ್ವೋಕ್ತ:೧೭) ನಂತರದ ಕಾಲದಲ್ಲಿ ಚಿತ್ತವಾಡಿಗಿ ಎಂಬ ರೂಪವನ್ನು ಪಡೆದರೆ ವಿಜಯನಗರ ಕಾಲದ ಹೊಸೂರಿನ ಶಾಸನವೊಂದು ಬ್ರಾಹ್ಮಣ

ಚಿತವಾಡಿಗಿ ಸೀಮೆಯನ್ನು ಉಲ್ಲೇಖಿಸುತ್ತದೆ. (ಸರ್ವೇಶ್ವರ ಸ್ವಾಮಿ ಹೆಚ್. ಪೂರ್ವೋಕ್ತ:೪೮) ಇದು ಅಂದರೆ ಚಿತ್ತವಾಡಿಗಿ ಆಡಳಿತ ಘಟಕವಾಗಿತ್ತೆಂದು ತಿಳಿದು ಬರುತ್ತದೆ. ವಿಜಯನಗರ ಕಾಲದಿಂದಲೂ ಇಲ್ಲಿ ಬ್ರಾಹ್ಮಣರ ವಾಸ್ತವ್ಯವನ್ನು ಕಾಣಬಹುದು. ಆದ್ದರಿಂದ ಇದನ್ನು ಶಾಸನದಲ್ಲಿ ಬ್ರಾಹ್ಮಣ ಚಿತ್ತವಾಡಿ ಸೀಮೆ ಎಂದು ಕರೆಯಲಾಗಿದೆ. ಇಲ್ಲಿನ ಗೌಡಿಕೆಯು ಬ್ರಾಹ್ಮಣರಲ್ಲಿದ್ದ ಬಗ್ಗೆ ಹೊಸಪೇಟೆಯ ಕ್ರಿ.ಶ ೧೫೨೦ರ ತಾಮ್ರ ಶಾಸನವೊಂದು ತಿಳಿಸುತ್ತದೆ. (ಮಹದೇವ,೨೦೦೨,ಪುಟ-೮೪) ಒಂದನೆಯ ಬುಕ್ಕರಾಯನು ವಿಜಯನಗರ ಅರಸರಲ್ಲಿ ಪ್ರಸಿದ್ದನಾಗಿದ್ದನು. ಇವನು ಚಿತ್ತವಾಡಿಕಾ ಎಂಬ ತದ್ಭವ ಮಾಸದಲ್ಲಿ ಚಿತ್ತವಾಡಿಗಿಯಾಗಿದೆ ಎಂದು ಹೇಳಲಾಗಿದೆ.

ಸ್ಥಳೀಯರು ತಿಳಿಸುವಂತೆ ವಿಜಯನಗರಕ್ಕೆ ಬಿಜಾಪುರದ ಕಡೆಯಿಂದ ಬರುವ ಜನರು ಈ ಊರಿನ ಮೂಲಕ ಬರುತ್ತಿದ್ದರಂತೆ. ಚಿನ್ನಮಡಿಗೆ ಎಂಬುವುದು ಚಿತ್ತವಾಡಿಗೆ ಆಗಿದ್ದು ವಿಜಯನಗರ ಕಾಲದಲ್ಲಿ ಇಲ್ಲಿ ಚಿನ್ನ ಮಾರುತ್ತಿದ್ದರಂತೆ. ಹೊಸಪೇಟೆಗೆ ಹೊಂದಿಕೊಂಡಿರುವ ಅಮರಾವತಿಯೂ ಮೂರನೆಯ ಬಲ್ಲಾಳನ (ಹೊಯ್ಸಳ) ಕಾಲದಿಂದಲೂ ಇದ್ದು ಚಂದ್ರಶಾಲೆಯಿಂದ ಕೂಡಿ, ವಿಹಾರ ಮಂದಿರವಿದ್ದ ಸ್ಥಳವನ್ನು ಅಮರಾವತಿ ಎಂದು ಕರೆಯಲಾಯಿತಂತೆ (ಕ್ಷೇತ್ರಕಾರ್ಯದಲ್ಲಿ ಕಂಡುಬಂದ ವರದಿ).

ಬಿಜಾಪುರದ ಜನರು ಹುಲಿಗಿಯ ಮಾರ್ಗವಾಗಿ ತುಂಗಭದ್ರಾ ನದಿಯನ್ನು ದಾಟಿ ಬರುತ್ತಿದ್ದರು. ಮುಂಡರಗಿ ಕಡೆಯಿಂದ ವ್ಯಾಪಾರಿಗಳು ಜೋಳದ ರಾಶಿ ಗುಡ್ಡದ ಹತ್ತಿರದ ದಿಡ್ಡಿಬಾಗಿಲಿನ ಮೂಲಕ ಆಗಮಿಸುತ್ತಿದ್ದರು. ಜೋಳ ಅಕ್ಕಿ ದಿನ್ನೆ ದಿನ್ನಾಗಳೋಪಾದಿ ಸಂತೆಯಲ್ಲಿ ಕಾಣಿಸುತ್ತಿದ್ದವು, ರೇಶ್ಮೆ ಸೀರೆ, ಕಸೂತಿ ಕೆಲಸ, ಆಭರಣಗಳ ಕೆಲಸಗಳಿಗೆ ಚಿತ್ತವಾಡಿಗಿ ಕೀರ್ತಿ ಪಡೆದಿತ್ತು. ಈ ರೇಶ್ಮೆ ಕಸೂತಿ ಇಲ್ಲಿನ ವಸ್ತುಗಳ ಮೇಲೆ ಆದಿಲ್‌ಷಾನಿಗೆ ಆಸಕ್ತಿ ಇತ್ತು.

ಚಿತ್ತವಾಡಿಗಿ ಒಂದು ಅಗ್ರಹಾರವಾಗಿದ್ದು, ಇಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ನಂತರದ ಕಾಲದಲ್ಲಿ ಪ್ಲೇಗು, ಕಾಲರಾ ಮತ್ತು ಮಲೇರಿಯಾಗಳು ಚಿತ್ತವಾಡಿಗಿಯ ಅವನತಿಗೆ ಕಾರಣವಾದವು. ಇದರಿಂದ ಜನರು ತಿರುಮಲಾದೇವಿಯ ಪಟ್ಟಣಕ್ಕೆ ವಲಸೆ ಬಂದು ಹೊಸಪೇಟೆ ಒಂದು ನಗರವಾಗುವುದಕ್ಕೆ ಈ ಗ್ರಾಮ ಕಾರಣವಾಯಿತು. ನಂತರದಲ್ಲಿ ಇದು ಹೊಸಪೇಟೆಗೆ ಸೇರಿತ್ತು (ಸರ್ವೇಶ್ವರ ಸ್ವಾಮಿ.ಹೆಚ್,೧೯೭೪: ೧೮-೧೯).


[illegible]

೨. ಅನಂತಶಯನ ಗುಡಿ

ಹಂಪೆಯಿಂದ ಹೊಸಪೇಟೆಗೆ ಹೋಗುವಾಗ ಸಿಗುವ ಇನ್ನೊಂದು ದೊಡ್ಡಗುಡಿ. ಈ ಊರಿಗೆ ಈಗ ಅನಂತಶಯನಗುಡಿ ಎಂದು ಕರೆಯುತ್ತಾರೆ. ಆದರೆ ಕೃಷ್ಣದೇವರಾಯನ ಕಾಲದಲ್ಲಿ ಇದನ್ನು ''ಶಾಲೆ ತಿರುಮಲೆ ಮಹಾರಾಯಪುರ'' ಎಂದು ಕರೆಯುತ್ತಿದ್ದರು. ಈ ಪಟ್ಟಣವನ್ನು ಕೃಷ್ಣದೇವರಾಯ ರಾಣಿ ತಿರುಮಲಾದೇವಿಯ ಕುವರ ತಿರುಮಲರಾಯ ಹುಟ್ಟಿದ ನಂತರ ೧೫೧೮ರಲ್ಲಿ ಕಟ್ಟಿಸಿದನು. ಅದೇ ಸಮಯದಲ್ಲಿ ಅನಂತಶಯನಗುಡಿಯನ್ನು ಪ್ರಾರಂಭಿಸಿ ೧೫೨೪ರಲ್ಲಿ ಕೆಲಸ ಮುಗಿಸಿದನು. ಅನಂತರ ಈ ದೇವಸ್ಥಾನಕ್ಕೆ ಅನೇಕ ದಾನ ಬಿಟ್ಟನು. ಯುವರಾಜ ತಿರುಮಲರಾಯನ ಹೆಸರು ಕ್ರಿ.ಶ ೧೫೨೫ರವರೆಗೆ ಮಾತ್ರ ಶಾಸನಗಳಲ್ಲಿ ಕೇಳಿಬರುತ್ತದೆ.

ತಿರುಮಲರಾಯನ ದೇವಿ ಪಟ್ಟದಿಂದ ಹೆಸರು ಹಾದು ತಿರುಮಲರಾಯಪುರ ಗುಡಿಯಿಂದ ಹಂಪೆಗೆ ಹೋಗುವಾಗ ಹೇಳಿದ ರಾಜಮಾರ್ಗ ಗುರುತಿಸಿದ್ದಾರೆ. ಸಾಕ್ಷಿಯಾಗಿ ಮಂಟಪಗಳು ಇಂದಿಗೂ ಕಂಡುಬರುತ್ತದೆ.

ಇಲ್ಲಿ ತಿರುಮಲರಾಯಪುರ ನಿರ್ಮಿಸಿದ ದೇವಾಲಯ ಎಲ್ಲ ವೈಷ್ಣವ ಗುಡಿಗಳಿಗಿಂತ ಬೇರೆಯಾಗಿದೆ. ಮಹಾದ್ವಾರ ಉತ್ತರಕ್ಕಿದ್ದು ಗೋಪುರವಿದೆ. ಈ ಮಂದಿರಗಳಿಗೆ ಅಚ್ಯುತರಾಯ ಸದಾಶಿವರಾಯರು ಹೇರಳವಾಗಿ ದಾನ ಬಿಟ್ಟರಲ್ಲಿದೆ ಈ ದೇವಾಲಯವನ್ನು ಶಾಲ ಶಿಖರಗಳನ್ನು ಗಚ್ಚುಗಾರೆಗಳಿಂದ ಕಟ್ಟಿದ್ದು



ಅನಂತಶಯನ ಗುಡಿ ಮುಂಭಾಗ



ಇದು ವಿಜಯನಗರದ ಶಿಲ್ಪಕಲೆಯ ಕೈಚಳಕದ ಕುರುಹು ಎಂದೇ ಹೇಳಬಹುದು. ಪೂರ್ವದಲ್ಲಿ ಉತ್ಸವಕ್ಕೆಂದು ಕಟ್ಟಿದ ಮಂಟಪ ಇದೆ (ವಸುಂಧರ ಪುಟ).

ಹಂಪೆ ಸುಮಾರು ೬೦ ಮೈಲುಗಳ ಸುತ್ತಳತೆಯನ್ನು ಹೊಂದಿರುವುದರಿಂದ ಅನಂತಶಯನ ಗುಡಿಯು ವಿಜಯನಗರದ ಮಧ್ಯದಲ್ಲಿಯೂ ಇದ್ದಂತಹ ಪ್ರಮುಖ ಕೇಂದ್ರವಾಗಿದ್ದಿತ್ತು.

ಇಲ್ಲಿ ಶಾಸನಗಳು ಸಿಕ್ಕಿವೆ. ಇವುಗಳಿಂದ ಇಲ್ಲಿ ತಿರುಮಲಾದೇವಿ ಪಟ್ಟಣಕ್ಕೆ ಹೊಂದಿರುವ ಸಂಬಂಧವನ್ನು ಗುರುತಿಸುವುದು ಕಂಡುಬರುತ್ತದೆ. ಇಲ್ಲಿ ದೊರೆತಿರುವ ಶಾಸನದ ದೇವನಾಗರಿ ಲಿಪಿಯಲ್ಲಿ ಇದೆ. ಇದನ್ನು ನಡುಗನ್ನಡ ಭಾಷೆಯಲ್ಲಿ ಬರೆಯಲಾಗಿದೆ. ಮತ್ತೊಂದು ದೇವಸ್ಥಾನದ ಬಲಭಾಗದ ಗೋಡೆಯ ಮೇಲಿರುವ ಶಾಸನದಲ್ಲಿ ಶಾಲಿವಾಹನ ಶಕೆ ೧೪೩೦ರ ಉಲ್ಲೇಖವಿದ್ದು ಅನಂತಶಯನ ದೇವರ ಉಲ್ಲೇಖವಿರುವುದಲ್ಲದೇ ಜಂಬುಕೇಶ್ವರ ದೇವರ ಉಲ್ಲೇಖವೂ ಇದೆ.

ಅನಂತಶಯನ ದೇವಾಲಯದ ಬಲಗೋಡೆಯ ಮೇಲಿರುವ ಶಾಸನವು ತಿರುಮಲಾದೇವಿ ಪಟ್ಟಣಕ್ಕೆ ಇರುವ ಸಂಬಂಧದ ವಿವರಣೆಯನ್ನು ನೀಡುತ್ತದೆ. ಶಾಲಿವಾಹನ ಶಕೆ ವರ್ಷ ೧೪೪೬ನೆಯ ಜೇಷ್ಠ ಶುಭ ಭಾನುವಾರಕ್ಕೆ ಸರಿಹೊಂದುವ ಕ್ರಿ.ಶ ೧೦.೫.೧೫೨೪ರ ಗುರುವಾರದಂದು ಕೃಷ್ಣದೇವರಾಯನು ಅನಂತ ದೇವರನ್ನು ತಿರುಮಲಾದೇವಿ ಪಟ್ಟಣದ ಉತ್ತರಕ್ಕೆ ಪ್ರತಿಷ್ಠಾಪಿಸಿ ದೇವಕಾರ್ಯಗಳಿಗೆ ಮತ್ತು ದೇವಾಲಯದ ನಿರ್ವಹಣೆಗೆ ೧೦,೦೦೦ ವರಹದ ವರಮಾನ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ.

೩. ನಾಗೇನಹಳ್ಳಿ

ಅನಂತಶಯನದ ಗುಡಿಯಿಂದ ಹೊರಟರೆ ನಮ್ಮ ಎಡಕ್ಕೆ ಒಂದು ದಾರಿ ಸಿಗುತ್ತದೆ. ಅಲ್ಲಿಂದ ಮುಂದೆ ಹೋದರೆ ಬರುವುದೇ ನಾಗಲಾಪುರ ಅಥವಾ ಈಗೀನ ನಾಗೇನ ಹಳ್ಳಿ. ನಾಗಲಾದೇವಿ ಕೃಷ್ಣದೇವರಾಯರ ತಾಯಿ ತುಳುವ ನರಸನಾಯಕನ ಎರಡನೇ ಹೆಂಡತಿ. ಇವಳ ಹೆಸರಿನಲ್ಲಿ ಕೃಷ್ಣರಾಯನ ಗುರು ರಂಗನಾಥ ದೀಕ್ಷಿತ ಈ ಪಟ್ಟಣವನ್ನು ಕಟ್ಟಿಸಿ ಇಲ್ಲಿ ನಾಗಶವಾಗಿ ನಾಪಿಶ್ವರರ ದೇವಸ್ಥಾನ ಮಾಡಿಸಿ ನಾಗಸಮುದ್ರವೆಂಬ ಕೆರೆ ಕಟ್ಟಿಸಿ ಊರಿಗೆ ನಾಗಲಾಪುರ ಎಂದು ಹೆಸರಿಸಿದ. ಈ ಹೆಸರನ್ನು ೧೫೧೬ರಲ್ಲಿ ನಿರ್ಮಿಸಿದ್ದು ಕಂಡುಬಂದಿದೆ.

೪. ಹೊಸೂರು

ಈ ಗ್ರಾಮವು ವಿಜಯನಗರ ಕಾಲದಿಂದಲೂ ಶಾಸನಗಳಲ್ಲಿ ಹೊಸ ಊರು ಎಂದು ಉಲ್ಲೇಖಗೊಂಡಿದೆ (ದೇವರಕೊಂಡಾರೆಡ್ಡಿ,೧೯೬೮, ಪುಟ-೮೪) ಸ್ಥಳೀಯರು ಇದು ಹೊನ್ನಿನ ಹೊಸೂರು ಎಂದು ತಿಳಿಸುತ್ತಾರೆ. ತುಂಗಭದ್ರಾ ನದಿಗೆ ತಾಕದಂತೆ ಹಳೆಯ ವಸತಿ ಇದ್ದು, ಪಾಳುಬಿದ್ದ ದೇವಾಲಯಗಳು ಕಂಡುಬರುತ್ತವೆ. ಈ ಹಳೆಯ ಊರಿನ ಹೆಸರು ತಿಳಿದು ಬರುವುದಿಲ್ಲ. ಕಾಲಾನಂತರ ಹೊಸೂರಿನ ಜನರು ಸಾಂಕ್ರಾಮಿಕ



ಹೊಸೂರಮ್ಮನ ದೇವಾಲಯ

ರೋಗಗಳಿಂದ ರಕ್ಷಣೆ ಪಡೆಯಲು ಹೊಸಪೇಟೆಗೆ ವಲಸೆ ಹೋಗಿರಬಹುದು. ಕ್ರಿ.ಶ. ೧೫೧೩ರ ಹೊಸೂರಮ್ಮ ದೇವಾಲಯದಲ್ಲಿರುವ ಶಾಸನವು ದೇವ ಏಕನಾಥ (ಮಹಾಮಾಯಿ ಹೊಸೂರಮ್ಮ)ನನ್ನು ಉಲ್ಲೇಖಿಸಿ ಗೌರದಣ್ಣಾಯಕನ ಮಗ ಬಸಪ್ಪನು ದತ್ತಿಬಿಟ್ಟ ಬಗ್ಗೆ ತಿಳಿಸುತ್ತದೆ. (ಅರಿಸೌಇಎ,೧೯೨೨:೬೮೯) ಇಲ್ಲಿಯ

ಮತ್ತೊಂದು ಶಾಸನವು ಮಾದಿನಾಯಕನು ಹೊಸೂರಿನ ಮಹಾಮಯಿ ಹೊಸೂರಮ್ಮ ದೇವಿಯ ಸೇವೆಗಾಗಿ ಬ್ರಾಹ್ಮಣ ಚಿತ್ತವಾಡಿ ಸೀಮೆಯ ಕೆಲವು ಗ್ರಾಮಗಳ ಭೂಮಿಯನ್ನು ಮೊದಿನಾಯಕನು ಪತ್ತೆಯಾಗಿ ಬಿಡುತ್ತಾನೆಂದು ತಿಳಿಸುತ್ತದೆ. (ಅರಿಸಾ ೧೯೨೨:೧೫೨). ಇನ್ನೊಂದು ಶಾಸನವು ಕೃಷ್ಣದೇವರಾಯರ ಕಾಲದಲ್ಲಿ ನೀಡಿದ್ದ ದಾನವನ್ನು ಹೊಸೂರಮ್ಮನ ಸ್ಥಾನಿಕರ, ಅಂಕಯ್ಯನಿಗೆ ಪುನಃದಾನವನ್ನು ನೀಡಿರುತ್ತಾರೆ ಎಂದು ದೇವಸ್ಥಾನದ ಮುಖಮಂಟಪದ ಬಲಕಂಬದ ಮೇಲಿರುವ ಶಾಸನ ತಿಳಿಸುತ್ತದೆ. ಇದೇ ದೇವಾಲಯದ ಕಂಬದಲ್ಲಿನ ಶಾಸನದಿಂದ ಹೊಸವೂರ ಮಹಾಮಾಯಿಯ ಸ್ಥಾನಿಕರು ಈ ದೇವತೆಯ ಬಣ್ಣದ ಕೆಲಸ ಮಾಡಿದ ವಿಜಯನಗರ ಕಾಲದ ಕಟಕದ ಮಲ್ಲಯ್ಯನಿಗೆ, ಎರಡು ಕೊಳಗೆ ಗದ್ದೆ ನೀಡಿದರು ಎಂದು ತಿಳಿದು ಬರುತ್ತದೆ (ದೇವರಕೊಂಡಾರೆಡ್ಡಿ,೧೯೯೪:೧೫೫). ಈ ಶಾಸನಗಳಲ್ಲಿ ಹೊಸೂರು ತುಂಗಭದ್ರಾ ದಂಡೆಯ ಮೇಲೆ ಇದ್ದ ಗ್ರಾಮ ವಿಜಯ ನಗರ ಕಾಲದಲ್ಲಿ ತನ್ನದೇಯಾದ ವಿಜಯನಗರ ಕಾಲದಲ್ಲಿ ಇತಿಹಾಸವನ್ನು ಒಳಗೊಂಡಿರುವುದು ಕಂಡುಬಂದಿದೆ.

ವಿಜಯನಗರ ಕಾಲದಲ್ಲಿ ರಾಜರು ತಾಲೂಕಿನ ವಿವಿಧೆಡೆಗಳಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟುಗಳನ್ನು ಕಟ್ಟಿಸಿ ನೀರಾವರಿ ಸೌಲಭ್ಯ ಒದಗಿಸಿಕೊಳ್ಳುತ್ತಿದ್ದರು. ವಿಜಯನಗರ ಕಾಲದ ಹೊಸೂರಿನಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಅವುಗಳಿಂದ ಹೊರಡುವ ಕಾಲುವೆಗಳು ಇಂದಿಗೂ ಕಂಡುಬರುತ್ತದೆ.

ಹೊಸೂರು ಅಣೆಕಟ್ಟಿನಿಂದ ಹೊರಡುವ ಬಲದಂಡೆಯೆ ಕಾಳಘಟ್ಟ ಕಾಲುವೆಯೂ ೬ ೧/೨ ಕಿ.ಮೀ ಉದ್ದವಿಟ್ಟು ತಾಲ್ಲೂಕಿನ ಕೆಲವು ಕೃಷಿ ಕ್ಷೇತ್ರಗಳಿಗೆ ಸಹಾಯವಾಗಿದೆ. ಇದೇ ಅಣೆಕಟ್ಟಿನಿಂದ ಹೊರಡುವ ಎಡದಂಡೆಯ ಹಲಿಗ ನಾಲೆಯೂ ಗಂಗಾವತಿ ರಾಯಚೂರು (ಈಗಿನ ಕೊಪ್ಪಳ) ಈ ತಾಲ್ಲೂಕುಗಳಿಗೆ ನೀರನ್ನು ಒದಗಿಸುತಿತ್ತು.

ಈ ರೀತಿ ಹೊಸೂರು ವಿಜಯ ನಗರದಲ್ಲಿ ಪ್ರಾಮುಖ್ಯತೆ ಪಡೆಯಿತು. ಕಾಲಾಂತರದಲ್ಲಿ ತುಂಗಭದ್ರ ನೀರಿನಿಂದ ಊರು ಮುಳುಗಿತು. ಉಳಿದ ಜನರು ಹೊಸಪೇಟೆ ಹತ್ತಿರ ಬಂದು ನೆಲೆಸಿದಾಗ ಹೊಸಪೇಟೆಯೊಂದಿಗೆ ಸೇರಿಕೊಂಡಿತು.

೨.೨ ಪ್ರಾಚೀನ ಇತಿಹಾಸ

ಪ್ರಾಚೀನ ಇತಿಹಾಸ ಕಾಲದಿಂದಲೂ ಹೊಸಪೇಟೆಯು ತನ್ನದೆಯಾದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದೆ. ಹೊಸಪೇಟೆಯ ಪರಿಸರದಲ್ಲಿ ಆದಿಶಿಲಾಯುಗದ ಅವಶೇಷಗಳು ದೊರಕಿವೆ. ಇದಕ್ಕೆ ಅನೇಕ ಪುರಾವೆಗಳು ದೊರೆತಿವೆ. ಈ ನಗರ ಪರಿಸರದ ಗಾದಿಗನೂರು. ಕುರಿಕುಪ್ಪೆ ಬೆಟ್ಟಗಳಲ್ಲಿ ಶಿಲಾಯುಗದ


ಅವಶೇಷಗಳು ಪತ್ತೆಯಾಗಿವೆ. ಇದರಿಂದ ಈ ಪ್ರದೇಶದಲ್ಲಿ ಹಳೆಶಿಲಾಯುಗ ಕಾಲದಿಂದಲೂ ಮಾನವನ ಅಸ್ತಿತ್ವವಿರುವುದು ಸ್ಪಷ್ಟ. ಮುಖ್ಯವಾಗಿ ದೊರೆತ ಶಿಲಾಯುಧಗಳ ಅವಶೇಷಗಳು ಚರ್ಟ್ ಜಾಸ್ತರ್ ಆಗೇಟ್, ಚಾಲ್ಸಿಡಗಿ, ಕ್ರಿಸ್ಟಲ್ ಮುಂತಾದವರ ಅರೆ ಪ್ರಶಸ್ತ ಶಿಲೆಗಳಿಂದ ಹರಿತವಾದ ಅಲಗುಗಳು ಅರ್ಧಚಂದ್ರಾಕೃತಿಯ ಹೆರೆಯುವ, ಕೊರೆಯುವ ಮತ್ತು ಮೊನಚುಳ್ಳ ಆಯುಧಗಳು ದೊರೆತಿವೆ. ಈ ಪ್ರದೇಶದಲ್ಲಿ ತಾಮ್ರದ ಆಯುಧಗಳು ಇದುವರೆಗೂ ದೊರಕಿಲ್ಲ (ಮಹದೇವ,೨೦೦೨ :೬).

ಹೊಸಪೇಟೆಯ ಪರಿಸರದಲ್ಲಿ ಕುರೆಕುಪ್ಪೆಯ ನೆಲೆಯಲ್ಲಿ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗದ ಜೊತೆಯಲ್ಲಿ ಬೃಹತ್ ಶಿಲಾಯುಗ ಅಥವಾ ಕಬ್ಬಿಣದ ಯುಗ ಕಂಡುಬಂದಿದೆ. ಕೊಂಡನಾಯಕನಹಳ್ಳಿ ಸಮೀಪ ಬೃಹತ್ ಶಿಲಾಗೋರಿಗಳನ್ನು ಪತ್ತೆ ಹಚ್ಚಲಾಗಿದೆ. ನಂತರ ಯುಗದಲ್ಲಿ ಹಂಪೆ ಪ್ರದೇಶವು ಬೆಳೆದು ಬಂದಿರುವುನ್ನು ಕಾಣಬಹುದು. ಈ ಜನರು ಕಪ್ಪು ಮತ್ತು ಕೆಂಪು ಮಡಿಕೆಗಳಲ್ಲಿ ಕಬ್ಬಿಣದ ಆಯುಧಗಳನ್ನು ಬಳಸುತ್ತ ಸತ್ತವರನ್ನು ವಿಶಿಷ್ಟ ರೀತಿಯಲ್ಲಿ ಸಮಾಧಿ ಮಾಡುತ್ತಿದ್ದರು. ಪ್ರಾಕ್ತನ ಶಾಸ್ತ್ರಜ್ಞರು ಇವರ ಸಂಸ್ಕೃತಿಯನ್ನು ಬೃಹತ್ ಶಿಲಾ ಸಮಾಧಿ ಸಂಸ್ಕೃತಿ ಎಂದು ಕರೆದಿದ್ದಾರೆ (ರಾವ್,೧೯೭೧ :೧೬).

ಹೊಸಪೇಟೆ ಪ್ರದೇಶದ ಪ್ರಸ್ತಾಪವು ಮಹಾಕಾವ್ಯಗಳಲ್ಲಿರುವುದನ್ನು ನಾವು ನೋಡಬಹುದು. ರಾಮಾಯಣ ಮಹಾಕಾವ್ಯದಲ್ಲಿ ಬರುವ ವಾನರರು ಇಂದಿನ ಹಂಪೆಯ ಪರಿಸರದ ಕಿಷ್ಕಿಂದ ಪ್ರದೇಶದಲ್ಲಿ ವಾಸಿಸುತ್ತಿದ್ದರು ಎಂದು ಹೇಳಲಾಗಿದೆ. ಮಹಾಕಾವ್ಯಗಳಲ್ಲಿ ಹೇಳಿರುವ ಹೇಮಕೂಟ,[೧] ಮಾಲ್ಯವಂತ, ಮಾತಂಗ,[೨] ಋಷ್ಯಮೂಕ ಮತ್ತು ಕಿಷ್ಕಿಂದೆ ಎಂಬ ಐದು ಪರ್ವತಗಳೂ ಹಾಗೂ ಪಂಪಾ ಸರೋವರ, ಶಬರಿ ಆಶ್ರಮ, ಆಂಜನೇಯ ಜನ್ಮ ಸ್ಥಳ ಮೊದಲಾದವುಗಳು ಇಲ್ಲಿವೆ. ಪುರಾಣಗಳಲ್ಲಿ ಹಂಪೆಯನ್ನು ಪಂಪಾ ಕ್ಷೇತ್ರವೆಂದು ಕರೆಯಲಾಗಿದೆ. ಪಂಪ ಎಂಬುದು ತುಂಗಭದ್ರೆಯ ಮತ್ತೊಂದು ಹೆಸರು. ಹೊಸಪೇಟೆ ಪರಿಸರದಲ್ಲಿ ಇರುವ ಅನೇಕ ಪ್ರದೇಶಗಳು ಪುರಾಣಗಳ ಕಾಲದಲ್ಲಿ ದಾಖಲೆಯಾಗಿದ್ದು ಕಂಡುಬಂದಿದೆ (ಸುಂದರ,೧೯೯೭: ೧೫).


ನಂತರದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಂಪೆ ಒಳಗೊಂಡಂತೆ ನಂದರ ಆಳ್ವಿಕೆ ಕಂಡು ಬಂದಿದೆ. ಇಲ್ಲಿ ಮೌರ್ಯ ಸಾಮ್ರಾಟ ಅಶೋಕ ಆಳ್ವಿಕೆ ನಡೆಸಿದ ಎಂಬುದಕ್ಕೆ ಅನೇಕ ಶಾಸನಗಳು ದೊರೆತಿದೆ. ನಂತರದಲ್ಲಿ ಶಾತವಾಹನರು ಆಳ್ವಿಕೆ ನಡೆಸಿದ್ದು ಕಂಡುಬರುತ್ತದೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಗಂಗರು, ಕಲ್ಯಾಣದ ಚಾಲುಕ್ಯರು, ಪಾಂಡ್ಯರು, ಕಳಚೂರಿಗಳು, ಹೊಯ್ಸಳರು ಮತ್ತು ಕುಮ್ಮಟದುರ್ಗದ ನಾಯಕರು ಆಳ್ವಿಕೆ ಮಾಡಿದ್ದು ಕಂಡು ಬರುತ್ತದೆ (ಪರಮೇಶ್ವರಪ್ಪ,೧೯೯೬,:೨).

ಹೊಸಪೇಟೆಯ ಮುಖ್ಯ ಭಾಗಗಳು



ಸ್ಥಳನಾಮಗಳು

ಹೊಸಪೇಟೆ ಪ್ರದೇಶದ ಸ್ಥಾಪನೆ ಪ್ರಕ್ರಿಯೆ ಕಳಚೂರಿ ಬಿಜ್ಜಳದೇವನ ಕಾಲದಿಂದ ಕಂಡುಬಂದಿರುವುದನ್ನು ಕಾಣಬಹುದು (ರವೀಂದ್ರನಾಥ,೨೦೦೫:೬).



ಬಿಜ್ಜಳನ ಕಾಲದ ಉಲ್ಲೇಖಿತ ಶಾಶನ

ಸುಮಾರು ೧೨ ನೆಯ ಶತಮಾನಕ್ಕೆ ಸೇರುವ ಶಾಸನವೊಂದು, ಹೊಸಪೇಟೆಯ ಸಣ್ಣಕ್ಕಿ ವೀರಭದ್ರ ದೇವಾಲಯದ ಹಿಂಭಾಗದ ಮರದ ಬುಡದಲ್ಲಿ ಬಿದ್ದಿದೆ. ಈ ಶಾಸನ ಕಳಚೂರಿ ಬಿಜ್ಜಳದೇವನ ಕಾಲಕ್ಕೆ DψY ;]Š (à;]Ô]Ú]\D]oT ; ((ಶಿವಶಂಕರರ ಪ್ರಬಂಧಗಳು,೧೯೯೬:೬೧).

ಈ ಶಾಸನದ ಲಿಪಿಯು ಕನ್ನಡ ಭಾಷೆಯಲ್ಲಿದೆ. ಷಣ್ಮುಖಗಳಿಂದ ಕೂಡಿದ ಶಾಸನದಲ್ಲಿ ಹನ್ನೊಂದು ಗವಿಗಳು ಲಭ್ಯವಾಗುತ್ತವೆ. ಮೇಲ್ಭಾಗದಲ್ಲಿ ಜನಬಿಂಬ, ಅದರ ಮೇಲೆ ಮುಕ್ಕಡೆ, ಇಕ್ಕೆಲಗಳಲ್ಲಿ ವಾನರ, ಬಲಭಾಗದಲ್ಲಿ ಕಠಾರಿ, ಎಡಭಾಗದಲ್ಲಿ ಹಸು ಕರುವಿನ ಉಬ್ಬುಶಿಲ್ಪಗಳಿವೆ. ಹೀಗಾಗಿ ಈ ಶಾಸನದಿಂದ ವಿಜಯನಗರ ಕಾಲಕ್ಕಿಂತಲೂ ಮುಂಚೆಯೇ ಈ ಭಾಗದಲ್ಲಿ ಗ್ರಾಮವೊಂದು ಇತ್ತೆಂಬುದು ಸ್ಪಷ್ಟ. ಇದು ಇಂದಿನ ಹೊಸಪೇಟೆಯ ನೆಹರೂ ಕಾಲೋನಿಯಾಗಿದೆ ಎಂಬುದನ್ನು ಗುರುತಿಸಲಾಗಿದೆ. ದೊರೆತಿರುವ ಶಾಸನದ ಆದಾರದ ಮೇಲೆ ಸ್ಥಳವನ್ನು ಗುರುತಿಸಲಾಗಿದೆ. ಇದಕ್ಕೆ ವಿದೇಶಿಯರ ಬರಹಗಳನ್ನು ಗಮನಿಸಬಹುದಾಗಿದೆ (ರೆಡ್ಡಿ,೧೯೯೮:೧೬).



೧೨ನೇ ಶತಮಾನದ ಜೈನ ಶಾಸನವು ಬಿಜ್ಜಳನನ್ನು ಮತ್ತು ಕುಂತಳ ದೇಶವನ್ನು ಹೆಸರಿಸುತ್ತದೆ. (ಇದು ತೃಟಿತ ಶಾಸನದಿಂದ ತಿಳಿದುಬರುತ್ತದೆ).

ಈ ಶಾಸನದ ಹಿನ್ನೆಲೆಯಲ್ಲಿ ಮತ್ತು ಮೇಲಿನ ಕೆಲವು ಸಾಕ್ಷಾಧಾರಗಳಿಂದ ಇದು ತಿರುಮಲಾದೇವಿ, ಪಟ್ಟಣಕ್ಕಿಂತ ಮುಂಚೆ ಇದು ಜೈನ ಬಸದಿಯಾಗಿರಬಹುದು ಇಲ್ಲವೆ ಅಗ್ರಹಾರವಾಗಿರಬಹುದು, ಅಂದರೆ ಬಿಜ್ಜಳ ಕಾಲದಿಂದ ಗ್ರಾಮವಿತ್ತು ಎಂದು ಗುರುತಿಸಲಾಗಿದೆ. ಈ ಗ್ರಾಮವೇ ಬಿಸಲಹಳ್ಳಿ ಇರಬಹುದು (ಮಹದೇವ ,೨೦೦೬:೩೨).

ಜೈನ ಬಸದಿ ಇರುವುದಕ್ಕೆ ಇನ್ನೊಂದು ಆಧಾರ ಎಂದರೆ ಸಣ್ಣಕ್ಕಿ ವೀರಭದ್ರ ದೇವಾಲಯ ಹತ್ತಿರ ಕಟ್ಟಡ ನಿರ್ಮಿಸುವಾಗ ದೊರೆತ ಜೈನ ಉಬ್ಬು ಶಿಲ್ಪಗಳು (ಇವು ಇಂದು ಕಮಲಾಪುರ ಮ್ಯೂಸಿಯಂನಲ್ಲಿ ಕಂಡುಬರುತ್ತವೆ).

ಮಲಪನಗುಡಿಯಲ್ಲಿ ದೊರೆತಿರುವ ಶಾಸನಗಳಲ್ಲಿ ಬಿಸಲಹಳ್ಳಿ ಹೆಸರು ವಿಜಯನಗರ ವಲಯದಲ್ಲಿ ಬಳಕೆಯಾಗಿದ್ದು ಕಂಡುಬರುತ್ತದೆ. ಈ ಶಾಸನವು ಮಲಪನಗುಡಿಯ ಈಶ್ವರ ದೇವಾಲಯದ ಮಂದೆ ಇದೆ (ರೆಡ್ಡಿ,೧೯೯೮:೧೭೦).

ಶಾಲಿವಾಹನ ೧೩೩ನೇ ಶತಮಾನ ೫ ಬುಧವಾರದಂದು ದೇವರಾಯ ಮಹಾರಾಯರ ಆಳ್ವಿಕೆ ಕಾಲದಲ್ಲಿ ಬುಳ್ಳಿನಾಯಕರ ಮಗ ಹೆಗ್ಗಡೆ ಸೋಮಾರಸು ಬಿಸಲಹಳ್ಳಿ ಕಣವೆ, ಬಸವದುರ್ಗ ಕಣವೆ, ಕೊಡುವ ದಾರಿಯಲ್ಲಿ ಅರವಟಗೆಯಲ್ಲಿ ಇಡಿಸಿ, ಬಾವಿಯನ್ನು ತೋಡಿಸಿ ಆ ಅರವಟಿಗೆ ಯಾವಾಗಲೂ ನಡೆಸುವ ಉದ್ದೇಶದಿಂದ ಜೀರ್ಣೋದ್ಧಾರ ಮಾಡಲು ಬ್ರಾಹ್ಮಣರಿಗೆ ಕೆಲವು ದತ್ತಿಗಳನ್ನು ನೀಡುವ ಉದ್ದೇಶವಾಗಿತ್ತು.

ಬಿಸಲಹಳ್ಳಿ ಕಣಿವೆಯ ಉಲ್ಲೇಖವು ಕೆಲವು ಶಾಸನಗಳಲ್ಲಿದೆ. ಕ್ರಿ.ಶ. ೧೫೩೩-೧೫೩೫ರ ಹೊಸಪೇಟೆ ಶಾಸನವೊಂದು ತಿರುಮಲದೇವಿಯರ ಪಟ್ಟಣದ ತಿರುಮಲಗಳನಾಥ ದೇವರನ್ನು ಉಲ್ಲೇಖಿಸುವುದರ ಜೊತೆಗೆ ಬಿಸಿಲಹಳ್ಳಿ ಕಣಿವೆ ಪ್ರಸ್ತಾಪಿಸಿದೆ (ಬಳ್ಳಾರಿ ಶಾಸನ ಸಂಪುಟ-೩:೪).

ಮಲಪನಗುಡಿಯಲ್ಲಿ ದೊರೆತ ಇನ್ನೊಂದು ಶಾಸನವು ಭಾಸ್ಕರ ಕ್ಷೇತ್ರದ ಶ್ರೀ ವಿರೂಪಾಕ್ಷದೇವರಿಗೆ ಪಂಚಕೋಲದೊಳಗೆ ಐದನೆಯ ಸುತ್ತಿನ ಕೋಟೆ ಬಿಸಿಲಗಳ್ಳಿಯ ಕಣಿವೆ ಮತ್ತು ಖಿಡವರಿಯ ಕಣಿವೆಯ ಹಾದಿಕೊಡುವ ಮಹಾಪಥದಲ್ಲಿ ಬಾವಿಯನ್ನು ಮಾಡಿಸಿದ ಬಗ್ಗೆ ತಿಳಿಸುತ್ತದೆ. ಅಂದರೆ ಮಲಪನಗುಡಿ ಗ್ರಾಮದಿಂದ ಹೊಸಪೇಟೆ ಮಾರ್ಗವಾಗಿ ಜೋಳದರಾಶಿ ಗುಡ್ಡದ ಪಕ್ಕದಲ್ಲಿ ಹಾಯ್ದು ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿರುವ ಕಣಿವೆಯನ್ನು ಕಣಿವೆ ವೀರಭದ್ರ ದೇವಾಲಯ ಸಂಪರ್ಕಿಸುವ ದಾರಿಯೇ ಬಿಸಿಲಹಳ್ಳಿಯ ಕಣಿವೆ, ಹಾದಿ ಎಂದು ವಿವರಿಸಿದೆ. ಈ ದಾರಿಯನ್ನು ''ಮಹಾಪಥ'' ಎಂದು ಕರೆಯಲಾಗಿದೆ. ಈ ದಾರಿ

ಮೂಲಕವೇ ರಜಾಕ್ ಪಾಯಸ್ ಮುಂತಾದ ವಿದೇಶಿಯರು ವಿಜಯನಗರಕ್ಕೆ ಪ್ರವೇಶಿಸಿದ್ದಾರೆ ಎಂದು ಸದಾನಂದ ಕನವಳ್ಳಿ ಅವರು ಅಭಿಪ್ರಾಯಪಟ್ಟಿದ್ದಾರೆ (ಸಿವೆಲ್,೧೯೯೨:೯೫-೯೭).

ಕಣಿವೆ ವೀರಭದ್ರ ದೇವಾಲಯದಲ್ಲಿರುವ ಶಾಸನದಿಂದ ದೇವಾಲಯವಿರುವ ಕಣಿವೆಯೂ ಬಿಸಿಲಹಳ್ಳಿ ಕಣಿವೆ ಎಂದು ಖಚಿತವಾಗುತ್ತದೆ. ಈ ದೇವರನ್ನು ಬಿಸಿಲಹಳ್ಳಿ ಕಣಿವೆಯ ವೀರಭದ್ರ ದೇವರೆಂದು ಶಾಸನದಲ್ಲಿ ಕರೆಯಲಾಗಿದೆ. ಇಲ್ಲಿ ಸಹಜವಾಗಿ ಗ್ರಹಿಸಬಹುದಾದ ಸಂಗತಿ ಎಂದರೆ ಈ ಕಣಿವೆಯ ಸಮೀಪದಲ್ಲಿದ್ದ ಬಿಸಲಹಳ್ಳಿ ಗ್ರಾಮವಿತ್ತೆಂಬುದು ಈ ಗ್ರಾಮದ ಹೆಸರನ್ನು ಸಮೀಪದಲ್ಲಿದ್ದ ಕಣಿವೆಗೆ ಅನ್ವಯಿಸಿ ಕರೆದಿರುವುದು ಅಲ್ಲಗಳೆಯುವಂತಿಲ್ಲ. ನಾಗೇಗೌಡ ೨೦೦೫ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಬಿಸಲಹಳ್ಳಿ ಚಾರಿತ್ರಿಕವಾಗಿ ಮಹತ್ವದ ಗ್ರಾಮ. ಬಿಸಲಹಳ್ಳಿಯು ಜೈನರ ಧಾರ್ಮಿಕ ಹಾಗೂ ಸಾಮಾಜಿಕ ಕೇಂದ್ರವಾಗಿತ್ತು. ಇಲ್ಲಿ ಅಗ್ರಹಾರಗಳು ಇತ್ತು ಎಂಬುದನ್ನು ಕಾಣಬಹುದು. ಇದು ವ್ಯಾಪಾರ ಕೇಂದ್ರವಾಗಿದ್ದು ಹೆಚ್ಚಾಗಿ ವರ್ತಕರು ಮತ್ತು ವಿದೇಶಿಯರು ಈ ಮಾರ್ಗದಲ್ಲಿ ಬರುತ್ತಿದ್ದು ವಿಜಯನಗರ ಸ್ಥಾಪನೆಯಾಗುವ ಮುಂಚೆ ಈ ಗ್ರಾಮ ಇತ್ತು ಎಂಬುದು ತಿಳಿಯುತ್ತದೆ (ವಸಂತಮಾಧವ,೨೦೦೫:೧೦೫).

ಅಬ್ದುಲ್ ರಜಾಕನ ವಿವರಣೆಯಲ್ಲಿ ಹೊಸಪೇಟೆಯ ಪ್ರಸ್ತಾಪವಿದೆ. ಸಿ.ಮಹದೇವ ಅವರ ಸಂಶೋಧನ ಲೇಖನವೊಂದರಲ್ಲಿ ಇದನ್ನು ಬಿಸಿಲಹಳ್ಳಿ ಎಂದು ಗುರುತಿಸಲಾಗಿದೆ (ಮಹದೇವ ಸಿ,೨೦೦೨: ೬೮). ಮೊದಲನೆಯದಾಗಿ ೨ನೇ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದಿದ್ದ ಪರ್ಷಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕ್‌ನ ಹೇಳಿಕೆಗಳು, ಹೊರಗಿನಿಂದ ಹೊಸಪೇಟೆಗೆ ಹೊಂದಿಕೊಂಡ ಕೋಟೆಗೆ ಬಂದ ನಂತರ ತಾನು ಕಣ್ಣಾರೆ ಕಂಡ ಹಾಗೂ ಕಿವಿಯಾರೆ ಕೇಳಿದ ವಿವರಣೆಗಳನ್ನು ನೀಡಿದ್ದಾನೆ (ಸಿವೆಲ್, ೨೦೦೬:೫೦).

ಸಿಸಿಲೆ ಮೊದಲಾದವರು ಹೊರಸುತ್ತಿನ ಕೋಟೆ ಗೋಡೆಯನ್ನು ಹೊಸಪೇಟೆಯ ನೈರುತ್ಯಕ್ಕಿರುವ ಚೋಳವರಾಣಿ ಗುಡ್ಡದ ಸಮೀಪಕ್ಕೆ ಇದೆ ಎಂದು ಹೇಳಿದ್ದಾರೆ.

ಅಸಿಸ್ಟೆಂಟ್ ಕಮಿಷನರ್ ಕಛೇರಿಯ ಉತ್ತರ ಪಾರ್ಶ್ವದಲ್ಲಿ ಪೂರ್ವ ಪಶ್ಚಿಮವಾಗಿ ಕೋಟೆ ನಿರ್ಮಾಣ ಗೊಂಡಿದ್ದು ಹೊಸಪೇಟೆ ನೆಹರು ಕಾಲೋನಿಯಲ್ಲಿ ಮನೆಗಳು ನಿರ್ಮಿಸುವ ಸಂದರ್ಭದಲ್ಲಿ ಕೋಟೆ ಗೋಡೆ. ಅವಶೇಷಗಳು ದೊರೆತಿವೆ (ಸರ್ವೇಶ್ವರ ಸ್ವಾಮಿ,೧೯೬೪:೧೫).


೨ ಮತ್ತು ೩ನೇ ಸುತ್ತಿನ ಕೋಟೆ ನಡುವಿನ ಪಟ್ಟಣದ ಉಲ್ಲೇಖ ಮತ್ತು ಅದು ಅಷ್ಟೇನು ಜನಸಾಂದ್ರವಾಗಿರಲಿಲ್ಲ ಎಂಬ ರಾಬರ್ಟ್ ಸಿವೆಲ್‌ನ ಊಹೆ ನಿಜವಾಗಿದ್ದಿಲ್ಲ. ಇಂದಿನ ಹೊಸಪೇಟೆ ಈಗಿನ ಸಣ್ಣಕ್ಕಿ ವೀರಭದ್ರ ದೇವಾಲಯದ ಪರಿಸರದಲ್ಲಲ್ಲದೇ ಇದಕ್ಕೆ ಮೊದಲು ಬಿಸಲಹಳ್ಳಿ ಇರಬಹುದು.

ಇದರಿಂದ ಇದನ್ನು ತಿರುಮಲದೇವಿ ಪಟ್ಟಣಕ್ಕಿಂತ ಮುಂಚೆ ಬಿಜ್ಜಳ ಕಾಲದ ಒಂದು ಗ್ರಾಮವಿದ್ದು ಅದೇ ಬಿಸಲಹಳ್ಳಿ ಯಾಗಿದೆ (ಮಹದೇವ,೨೦೦೬:೩೩).

ಬಿಸಲಳ್ಳಿಯು ತನ್ನ ಹಳೆಯ ಹೆಸರನ್ನು ಕಳೆದುಕೊಂಡಿತು. ಮಧ್ಯಕಾಲೀನ ಯುಗದ ಕೃಷ್ಣದೇವರಾಯನ ಕಾಲದಲ್ಲಿ ಇದರ ನೈರುತ್ಯದಲ್ಲಿ ರಾಯರಕೆರೆ ಹತ್ತಿರ ತಿರುಮಲಾದೇವಿ ಪಟ್ಟಣವನ್ನು ನಿರ್ಮಿಸಲಾಯಿತು.


ತಿರುಮಲಾದೇವಿ ಪಟ್ಟಣ

ನಂತರದಲ್ಲಿ ವಿಜಯನಗರದ ತುಳುವ ಮನೆತನದ ಶ್ರೀಕೃಷ್ಣದೇವರಾಯನು ಇದೇ ಸ್ಥಳದಲ್ಲಿ ತನ್ನ ಪಟ್ಟಮಹಾದೇವಿಯಾದ ತಿರುಮಲಾದೇವಿಯ ಹೆಸರಿನಲ್ಲಿ ತಿರುಮಲಾದೇವಿ ಪಟ್ಟಣವನ್ನು ನಿರ್ಮಿಸಿದ್ದಾನೆ. ಈ ಪಟ್ಟಣ ನಿರ್ಮಾಣವನ್ನು ೨ ಶಾಸನಗಳು ಉಲ್ಲೇಖಿಸುವುದು ಕಂಡುಬರುತ್ತದೆ.



ತಿರುಮಲಾ ದೇವಿಯರ ಪಟ್ಟಣದ ಉಲ್ಲೆಖಿತ ಶಾಸನ





ತಿರುಮಲಾದೇವಿ ಪಟ್ಟದ ಉಲ್ಲೇಖಿತ ಶಾಸನದ ಬರಹ

ಕ್ರಿ.ಶ ೧೫೧೩ರ ಕೃಷ್ಣದೇವರಾಯನ ಶಾಸನವೊಂದು ಮಂದಲಾಪುರವನ್ನು ತಿರುಮಲದೇವಿಯರ ಪಟ್ಟಣ ಮಾಗಣಿಗೆ ಸೇರಿಸಿ ಹಂಪೆಯ ಕೃಷ್ಣಸ್ವಾಮಿ ದೇವರಿಗೆ ಸಮರ್ಪಿಸಿದನೆಂದು ತಿಳಿಸುತ್ತವೆ (ಇಂದಿನ ಹೊಸಪೇಟೆಗೆ ಹೊಂದಿಕೊಂಡಿರುವ ಮುದ್ದಾಪುರ) (ರೆಡ್ಡಿ,೧೯೯೩:೧೫೮).

ತಿರಮಲದೇವಿಯರ ಪಟ್ಟಣದ ಗೌರೇಶ್ವರ ದೇವರನ್ನು ಪ್ರತಿಷ್ಠಾಪಿಸುತ್ತಲೇ ಇದೇ ಪ್ರದೇಶದ ಮತ್ತೊಂದು ಶಾಸನವು ಆಯ್ಯವಳಿ ಮುಖ್ಯವಾದ ತಿರುಮಲದೇವಿಯರ ಪಟ್ಟಣದ ಸೇವಾ ಪಟ್ಟಣ ಸ್ವಾಮಿಗಳ ಸಮ್ಮುಖದಲ್ಲಿ ಪ್ರಧಾನ ತಿರುಮಲರಾಜನ ಪ್ರತಿನಿಧಿಯಿಂದ ಅರ್ಥರಾಜ ತಿಮ್ಮೇಸ್ವಾಮಿ ಕೆಲವು ಗ್ರಾಮಗಳ ಮೂಲ ನಿವಾಸವನ್ನು ಅಲ್ಲಿಯ ತಿರುತಿಂಗಳನಾಥ ದೇವರಿಗೆ ದತ್ತಿ ಬಿಡುತ್ತಾನೆ ಎಂದು ಹೇಳುತ್ತದೆ (ರೆಡ್ಡಿ, ೧೯೯೭:೧೪೦).



ಸಣ್ಣಕ್ಕಿ ವೀರಭದ್ರ ದೇವಾಲಯದಲ್ಲಿರುವ ಶಾಸನದಲ್ಲಿ ಶಕವರ್ಷ ೧೪೫೩ನೆಯ ಖರ ಸಂವತ್ಸರ ಆಶ್ವಯುಜ ಶುಕ್ಲ ಅಂದರೆ ಕ್ರಿ.ಶ ೧೧ ಮತ್ತು ೧೫೩೧ ಸೋಮವಾರದಂದು ಅಮೃತ ದೇವ ಮಹಾರಾಯರ ಆಳ್ವಿಕೆಯಲ್ಲಿ ತಿರುಮಲದೇವಿ ಅಮ್ಮನವರ ಪಟ್ಟಣದ ಗುಹೇದೇಶ್ವರ ದೇವರಿಗೆ ಕಂಪ ದೇವರಸ ಅಮ್ಮನವರು ಮತ್ತು ಉಭಯ ನಾನಾದೇಶಿಗಳು ಭೆಸ್ರಾರ ಹೇರಿನ ಮೇಲೆ ೧ ಕಾಸು ಕಂಪಿಗೆ ಪೈರು ಹೇರಿನ ಮೇಲೆ ೧ ಕಾಸು ಮತ್ತೆ ಮದುವೆಯ ಹಾಗೂ ಮೂರನ್ನು ಬಿಡುತ್ತಾರೆ (ರೆಡ್ಡಿ,೧೯೯೭:೧೪೯).

ಕೃಷ್ಣದೇವರಾಯನ ಪಟ್ಟಣದ ಉಲ್ಲೇಖ ಶಾಸನದಲ್ಲಿ ಕಂಡುಬರುತ್ತದೆ. ಬಹುಶಃ ಹಳೆಯ ಗ್ರಾಮವನ್ನು ಜೀರ್ಣೋದ್ದಾರಗಳು ಹೊದಾಗಿ ದೇವಾಲಯಗಳನ್ನು ಕಟ್ಟಿಸಿ, ತನ್ನ ಪಟ್ಟದರಸಿಯ ಹೆಸರನ್ನಿಟ್ಟಿದ್ದಾರೆ. ಮಧ್ಯಕಾಲೀನದಲ್ಲಿ ಇದು ಅಂದರೆ ವಿಜಯನಗರದ ಉಪನಗರವಾಗಿ ಮಾಡಿದ್ದನು. ಇದು ಇಂದಿನ ನೆಹರು ಕಾಲೋನಿ ಪ್ರದೇಶ ಎಂದು ಗುರುತಿಸಲಾಗಿದೆ.

ಕೃಷ್ಣದೇವರಾಯನು ತನ್ನ ಪಟ್ಟದರಿಸಿ ತಿರುಮಲಾದೇವಿಯ ತವರಿನ ಶ್ರೀರಂಗಪಟ್ಟಣ ಮಾರ್ಗದ ನೆಲೆಯಲ್ಲಿ ತಿರುಮಾಲದೇವಿಯರ ಪಟ್ಟಣವನ್ನು ನಿರ್ಮಿಸುತ್ತಾನೆ. ಬಿಸಿಲಹಳ್ಳಿ ತನ್ನ ಹಳೆಯ ಹೆಸರನ್ನು ಕಳೆದುಕೊಂಡಿತ್ತು. ಇದರ ನೈರುತ್ಯದಲ್ಲಿದ್ದ ರಾಯರ ಕೆರೆ ಹತ್ತಿರ ಈ ಪಟ್ಟಣವನ್ನು ನಿರ್ಮಿಸಿದ್ದಾರೆ (ಮಹದೇವ.೨೦೦೬:೯೧-೯೪).

ಪಾಯೆಸನು ಕೃಷ್ಣದೇವರಾಯನಿಗೆ ಈ ಪಟ್ಟಣ ಬಹಳ ಇಷ್ಟವಾಗಿತ್ತೆಂದು ಮತ್ತು ನನ್ನ ಸರದಾರರಿಗೆ ಇದರಲ್ಲಿ ಮನೆ ಕಟ್ಟಿಕೊಳ್ಳಲು ಆಗ್ರಹಪಡಿಸಿದನೆಂದು ಹೇಳುತ್ತಾನೆ. ಇಲ್ಲಿಯ ಮುಖ್ಯ ದೇವಾಲಯ ತಿರುವೆಂಗಳನಾಥ ದೇವಾಲಯ ೧೫೩೫ರ ಒಂದು ಶಾಸನದಲ್ಲಿ ಪ್ರಧಾನ ತಿರುಮಲರಾಜನ ಪ್ರತಿನಿಧಿ ಅಬ್ಬರಾಜ ತಿಮ್ಮಪ್ಪನು ತಿರುವೆಂಗಳನಾಥ ದೇವರಿಗೆ ದಾನ ಮಾಡುತ್ತಾನೆ. ೧೫೩೧ರ ಒಂದು ಶಾಸನವು ತಿರುಮಲದೇವಿಯ ಪಟ್ಟಣದ ಗೌರೇಶ್ವರ ದೇವಾಲಯದ ಪ್ರಸ್ತಾಪ ಮಾಡುತ್ತದೆ. ೧೫೧೩ರ ಶಾಸನ ಮುರಲಾಪುರವು ತಿರುಮಲ ದೇವಿಯರ ಪಟ್ಟಣದ ಮಾಗಣಿಗೆ ಸೇರಿತ್ತೆಂದು ಹೇಳಿದೆ. ಈ ಶಾಸನದಿಂದ ತಿರುಮಲದೇವಿರ ಪಟ್ಟ ೧೫೧೩ ರ ಹೊತ್ತಿಗೆ ನಿರ್ಮಿತವಾಯಿತೆಂದು ತಿಳಿಯಬಹುದು. (ಕನವಳ್ಳಿ, ೨೦೦೫: ೫೪)

ಪ್ರಸ್ತುತ ಅಧ್ಯಯನದಲ್ಲಿ ತಿರುಮಲಾದೇವಿಯ ಪಟ್ಟಣ ಸ್ಥಾಪನೆ ಮುಂಚೆಯೇ ಬಿಸಲಹಳ್ಳಿ ಗ್ರಾಮವನ್ನು ಗುರುತಿಸಿ ಇದು ಹೊಸಪೇಟೆಯ ಮೂಲನೆಲೆಯಾಗಿತ್ತೆಂದು ತಿಳಿಸುವ ಪ್ರಯತ್ನ ಮಾಡಲಾಗಿದೆ.

[illegible]

[illegible]

[illegible]

[illegible]

[illegible]

ಕೃಷ್ಣದೇವರಾಯನು ತನ್ನ ಪ್ರೀತಿಯ ಹೆಂಡತಿಯರ ಹೆಸರಿನಲ್ಲಿ ಎರಡು ನಗರಳನ್ನು ನಿರ್ಮಿಸಿದ್ದನು. ಅಷ್ಟೆ ಅಲ್ಲದೆ ಈತನ ಮಗನಾದ ತಿರುಮಲರಾಯನ ಹೆಸರಿಗೆ ಮತ್ತು ತಾಯಿಯ ಹೆಸರಿನಲ್ಲಿ ಒಂದು ಗ್ರಾಮವನ್ನು ನಿರ್ಮಿಸಿದ್ದ ಎಂಬುದು ಕಂಡುಬರುತ್ತದೆ (ಸಿವೆಲ್,೨೦೦೫:೫೨).

ನಾಗಲಾಪುರ

ಕೃಷ್ಣದೇವರಾಯನ ಪ್ರೀತಿಯ ಹೆಂಡತಿಯಾದ ಚಿನ್ನಾದೇವಿ ಹೆಸರಿನಲ್ಲಿ ನಿರ್ಮಿಸಿದ ಗ್ರಾಮವನ್ನು ನಾಗಲಾಪುರ ಎಂದು ಗುರುತಿಸಲಾಗಿದೆ (ಮಹದೇವ,೨೦೦೩:೬೪).

ತಿರುಮಲಾದೇವಿಯ ಪಟ್ಟಣದ ಪೂರ್ವಕ್ಕೆ ನಗರವೊಂದನ್ನು ನಿರ್ಮಿಸಿ ನಾಗಲಾಪುರವೆಂಬ ಹೆಸರಿನಲ್ಲಿ ಕರೆಯಲಾಗಿತ್ತು ನಾಗಲಾಪುರ ಎಂಬ ಊರಿನ ಬಗ್ಗೆ ತಪ್ಪುಗ್ರಹಿಕೆಗಳು ಹುಟ್ಟಿವೆ.

ಶಾಸನಗಳು ಮತ್ತು ದೇವಾಲಯಗಳ ಅವಶೇಷಗಳಿಂದಾಗಿ ಹೊಸಪೇಟೆಯ ನೈರುತ್ಯ ಭಾಗವೇ ತಿರುಮಲದೇವಿಯರ ಪಟ್ಟಣವೆಂದು ಹೇಳಲಾಗಿದೆ. ನಾಗಲಾಪುರ ಎಂದು ಹೇಳುವದಕ್ಕೆ ಒಂದು ಶಾಸನ ದೊರೆತಿದೆ. ಸಂಕ್ಲಾಪುರ[೧] ದಿಂದ ಪಶ್ಚಿಮಕ್ಕೆ ಇರುವ ಹೊಸಪೇಟೆಯ ಹಳೆಯ ವಸತಿ ಪ್ರದೇಶ ಇಂದಿನ ವಡಕರಾಯ ಸ್ವಾಮಿ ದೇವಾಲಯದ ಪ್ರದೇಶ ನಾಗಲಾಪುರವೆಂದು ಸೃಷ್ಟಿಮಾಡುತ್ತಾರೆ (ರೆಡ್ಡಿ, ೧೯೯೭:೧೪೬).



ಒಡಕರಾಯ ದೇವಾಲಯ



ಹೆಚ್ಚು ಶಾಸನಗಳು ತಿರುಮಲಾದೇವಿಯ ಪಟ್ಟಣವನ್ನು ಉಲ್ಲೇಖಿಸುತ್ತವೆ. ಆದರೆ ನಾಗಲಾಪುರವನ್ನು ಕುರಿತು ಸಂಕಲಾಪುರ ಒಂದೇ ಶಾಸನ ಗಡಿ ಕುರಿತು ಹೇಳುವಾಗ ಮಾತ್ರ ಪ್ರಸ್ತಾಪಿಸುತ್ತಾರೆ. ಸಂಕಲಾಪುರ ಇಂದಿನ ಹೊಸಪೇಟೆಯ ಪೂರ್ವಕ್ಕಿದ್ದು ಬಳ್ಳಾರಿ ರಸ್ತೆಗೆ ಸಮೀಪದಲ್ಲಿದೆ.

ರಾಬರ್ಟ್ ಸಿವೆಲ್ ಹೊಸಪೇಟೆ ಇತಿಹಾಸ ಹೇಳುವ ಸಂದರ್ಭದಲ್ಲಿ ವಿದೇಶಿ ಬರಹಗಳನ್ನು ಮಾತ್ರ ಆಧರಿಸಿದ ನಾಗಲಾಪುರವೇ ಇಂದಿನ ಹೊಸಪೇಟೆ ಎಂದು ತಿಳಿಸುತ್ತಾನೆ. ಪ್ಯಾಯಸ್ ತಿರುಮಲದೇವಿಯ ಪಟ್ಟಣವನ್ನು ವರ್ಣಿಸಿದ್ದು ಅದನ್ನು ತನ್ನ ಪ್ರೀತಿಯ ವಾರಾಂಗನೆ ಪತ್ನಿಯ ಹೆಸರಿನಲ್ಲಿ ಕಟ್ಟಿಸಿದ್ದನೆಂದು ಮಾತ್ರ ತಪ್ಪುಗ್ರಹಿಕೆ ಮಾಡಿದ್ದಾರೆ (ಸಿವೆಲ್,೨೦೦೫:೨೧೧).

ಕ್ರಿ.ಶ. ೧೫೧೩ರ ವೇಳೆಗಾಗಲೇ ಕೃಷ್ಣದೇವರಾಯನು ತನ್ನ ಇನ್ನೊಬ್ಬಳು ಪತ್ನಿಯಾದ ಚಿನ್ನಾದೇವಿಯ ಹೆಸರಿನಲ್ಲಿ ತಿರುಮಲಾದೇವಿಯವರ ಪಟ್ಟಣದ ಪೂರ್ವಕ್ಕೆ ನಗರವೊಂದನ್ನು ನಿರ್ಮಿಸಿ ನಾಗಲಾಪುರವೆಂಬ ಹೆಸರಿನಲ್ಲಿ ಕರೆಯಲಾಗಿತ್ತು.

ಇದಕ್ಕೆ ಆಧಾರವಾಗಿ ಅನೇಕ ಪ್ರವಾಸಿ ಕಥನಗಳು ಮತ್ತು ಸಿಕ್ಕಂತ ಶಾಸನಗಳು ಸಾಕ್ಷಿಯಾಗಿ ಕಂಡುಬಂದಿವೆ (ರೈ, ೨೦೦೫:೧೦೪).

ಪರ್ನಾಸ್ ನ್ಯೂನಿಜ್ ಪ್ರಾಯಶಃ ಕ್ರಿ.ಶ ೧೫೩೫-೫೭ರಲ್ಲಿ ಬರೆದದ್ದು, ಇತನು ರಾಜ ನಿರ್ಮಿಸಿದ ನಗರವು ಗಚ್ಚುಗಾರೆಗಳಿಂದ ಕಟ್ಟಿದ ಮನೆಗಳು ಉದ್ದ ಮತ್ತು ವಿಶಾಲವಾದ ರಸ್ತೆ ಹಾಗೂ ಈ ಹೊಸ ನಗರದ ಸುತ್ತ ಗೋಡೆಗಳನ್ನು ನಿರ್ಮಿಸಲಾಯಿತೆಂದು ತಿಳಿಸಿತ್ತಾನೆ. ಇಲ್ಲಿ ಅರಮನೆಗಳನ್ನು ಕಟ್ಟಿಕೊಳ್ಳುವಂತೆ ತನ್ನ ರಾಜ್ಯದ ದೊರೆಗಳಿಗೆ ಆಜ್ಞಾಪಿಸುತ್ತಾನೆ. ಇದನ್ನು ಕೃಷ್ಣದೇವರಾಯನು ಪ್ರೀತಿಯ ಪತ್ನಿಯಾದ ಚಿನ್ನಾದೇವಿಯ ಗೌರವಾರ್ಥ ನಿರ್ಮಿಸಿ ಇದನ್ನು ನಾಗಲಾಪುರವೆಂದು ಕರೆದನು (ಸಿವೆಲ್, ೨೦೦೫:೧೦೬).

ನ್ಯೂನಿಜ್‌ನು ಕೃಷ್ಣದೇವರಾಯನ ಪ್ರೀತಿಯ ಹೆಂಡತಿಯ ಹೆಸರು ಚಿನ್ನಾದೇವಿಯೆಂದು, ಆಕೆಯ ಹೆಸರಿನಲ್ಲಿ ನಿರ್ಮಿಸಿದ್ದ ಪಟ್ಟಣದ ಹೆಸರು ನಾಗಲಾಪುರವೆಂದು ವಿಭಿನ್ನ ಹೆಸರುಗಳನ್ನು ನೀಡಿ ಸ್ವಲ್ಪ ಗೊಂದಲವನ್ನುಂಟುಮಾಡುತ್ತಾನೆ (ಸಿವೆಲ್,೧೯೯೨:೫೩).

ವಿದೇಶಿ ಪ್ರವಾಸಿಗರ ಕಥನಗಳ ಹೇಳಿಕೆಯಂತೆ ದ್ವಾರಸಮುದ್ರದ ಅರಸನಾದ ಮೂರನೆಯ ಬಲ್ಲಾನು ತನ್ನ ಕೋಟೆಯ ರಕ್ಷಣೆಗಾಗಿ ಸುತ್ತಲೂ ಕಿರುಪಡೆಗಳನ್ನು ಸ್ಥಾಪಿಸಿದನೆಂದು ಅವೇ ಕಾಲಾನುಕ್ರಮದಲ್ಲಿ ಗ್ರಾಮಗಳಾಗಿವೆಯೆಂದು ತಿಳಿದುಬರುತ್ತದೆ. ಅವು ನಾಗಲಾಪುರ ಮತ್ತು ತಿರುಮಲಾದೇವಿ ಪಟ್ಟಣ

ವಿರಬಹುದು ಮತ್ತು ಹೊಸಪೇಟೆಯ ಹಳೆಯ ವಸತಿ ಸ್ಥಾನಗಳಲ್ಲಿ ಕೋಟೆಯ ಪ್ರದೇಶವಾಗಿದ್ದು ಬಹುಶಃ ಇದು ವಿಜಯನಗರ ಕಾಲದ ನಾಗಲಾಪುರವಿರಬಹುದು (ಶಿವಶಂಕರ,೧೯೯೬:೯೫).

ತಿರುಮಲಾದೇವಿಯರ ಪಟ್ಟಣದ ಪೂರ್ವಕ್ಕೆ ನಿರ್ಮಿಸಿದ ನಾಗಲಾಪುರ ಪಟ್ಟಣ ಇಂದಿನ ಹೊಸಪೇಟೆಯ ಪ್ರಮುಖ ನೆಲೆಯೆಂದು ಗುರುತಿಸುವುದು ಪ್ರಸ್ತುತ ಲೇಖನದ ಉದ್ದೇಶ.

ನಾಗಲಾಪುರ ಎಂಬ ಪಟ್ಟಣವನ್ನು ವಡಕ್ಕರಾಯ ದೇವಾಲಯದ ಹತ್ತಿರ ತನ್ನ ಹೆಂಡತಿಯ ಹೆಸರಿನಲ್ಲಿ ನಿರ್ಮಿಸಿದ್ದಿರಬಹುದು ಎಂದು ಹೇಳಲಾಗಿದೆ (ಮಹದೇವ,೧೯೯೬:೯೪).

ನಾಗಲಾಂಬಿಕೆ ಎಂದು ವಿಜಯನಗರ ಕಾಲದಲ್ಲಿ ತನ್ನ ತಾಯಿ ಹೆಸರಿನಲ್ಲಿ ಒಂದು ಗ್ರಾಮ ನಿರ್ಮಿಸಿದ್ದು ಹೊಸಪೇಟೆಯಿಂದ ಹಂಪೆಗೆ ಹೋಗುವ ದಾರಿಯಲ್ಲಿ ಅನಂತಶಯನ ಗುಡಿಯ ಪೂರ್ವಕ್ಕೆ ನಿರ್ಮಾಣವಾಗಿದ್ದು ಕಂಡುಬರುತ್ತದೆ (ಪೂಜಾರಹಳ್ಳಿ,೨೦೦೫:೯೮).

ಆದರೆ ಲೇಖಕರು ಚಿನ್ನಾದೇವಿಯ ಮೊದಲು ನಾಗಲಾದೇವಿ ಎಂದು ಹೆಸರು ಇರಬಹುದು ಎಂದು ಊಹಿಸಲಾಗಿದೆ.

ವಡಕ್ಕರಾಯನ ದೇವಾಲಯ ಸುತ್ತಮುತ್ತ ನೆಲೆಯಾದ ಗ್ರಾಮವನ್ನು ನಾಗಲಾಪುರ ಎಂದು ಊಹಿಸಲಾಗಿದೆ. ಇದು ಲೇಖಕರ ಅಭಿಪ್ರಾಯವಾಗಿದೆ (ಮಹದೇವ,೧೯೯೬:೯೩).

ಶಾಸನಗಳಿಂದ, ಪ್ರವಾಸಿಗರ ಕಥನಗಳಿಂದ ನಾಗಲಾಪುರ ಇರುವುದು ಖಚಿತವಾಗಿದೆ. ಕೃಷ್ಣದೇವರಾಯನು ಹೆಂಡತಿ ಚಿನ್ನಾದೇವಿ ಹೆಸರಿನಲ್ಲಿ ಒಂದು ಗ್ರಾಮ ನಿರ್ಮಿಸಿದ್ದು ಖಚಿತವಾದರೂ ಚಿನ್ನಾದೇವಿಗೆ ನಾಗಲಾದೇವಿ ಎಂದು ಕರೆಯುತ್ತಿದ್ದು ಊಹೆಯಾಗಿದೆ. ಇದಕ್ಕೆ ಸರಿಯಾದ ಮಾಹಿತಿಗಳು ದೊರೆತಿಲ್ಲ.

ಸಣ್ಣಕ್ಕಿ ವೀರಭದ್ರ ದೇವಾಲಯದ ಪ್ರದೇಶದಲ್ಲಿ ವಿಜಯನಗರದ ಪೂರ್ವಕಾಲದಿಂದಲೂ ಇದ್ದ ಊರು ಆಗಿದ್ದು ವಿಜಯನಗರ ಕಾಲದಲ್ಲಿ ನಿರ್ಮಿಸಿದ ತಿರುಮಲಾದೇವಿಯರ ಪಟ್ಟಣ ಹಾಗೂ ಅದರ ಪೂರ್ವಕ್ಕೆ ನಿರ್ಮಿಸಿದ್ದ ನಾಗಲಾಪುರ ಪಟ್ಟಣಗಳು ಇಂದಿನ ಹೊಸಪೇಟೆಯ ಪ್ರಮುಖ ನೆಲೆಗಳು. ನಂತರದ ಶತಮಾನಗಳಲ್ಲಿ ಕೋಟೆಯಾಚೆಗೆ ಬೆಳೆದ ಪೇಟೆಗೆ ಪ್ರಾಮುಖ್ಯತೆ ಬಂದಿತು ಎಂದು ಹೇಳಬಹುದು. ಅಲ್ಲದೇ ಹೊಸದಾದ ಪೇಟೆಯನ್ನು ಹೊಸಪೇಟೆ ಎಂದು ಕರೆಯಲಾಗಿದೆ. ಈ ಮೇಲಿನ ಅಂಶವನ್ನು ಹೇಳುವುದಾದರೆ ಕೋಟೆಯಾಚೆಗೆ ಬೆಳೆದ ಪೇಟೆಯು ಪ್ರಾಮುಖ್ಯತೆ ಪಡೆಯಿತು ಎಂದು ಅಪ್ರಕಟಿತ ಲೇಖನದಲ್ಲಿ ವಿವರಿಸಲಾಗಿದೆ (ಹನುಮಂತಪ್ಪ,೨೦೦೧:೩೭).

[illegible]

ಸ್ಥಳೀಯ ಮಾಹಿತಿ ಪ್ರಕಾರ ದ್ವಾರಸಮುದ್ರದ ಅರಸನಾದ ೨ನೆಯ ಬಲ್ಲಾಳನು ತನ್ನ ಕೋಟೆಯ ರಕ್ಷಣೆಗಾಗಿ ಸುತ್ತಲೂ ಕಿರಾತಪಡೆಗಳನ್ನು ಸ್ಥಾಪಿಸಿದನೆಂದು, ಕಾಲಾನುಕ್ರಮದಲ್ಲಿ ಅನೇಕ ಗ್ರಾಮಗಳಾದವೆಂದು ತಿಳಿದು ಬರುತ್ತದೆ. ಅವುಗಳೆಂದರೆ ಜಗಳಿಕಟ್ಟೆರಾಯನೆಂಬ ಆಂಜನೇಯ ಗುಡಿಯ ಹತ್ತಿರ ಜಗಳಿಕಟ್ಟೆ ಬೈಲು, ಹನುಮಂತಪ್ಪನ ಗುಡಿಯ ಹತ್ತಿರ ಹಂದಿಗನೂರು, ಉತ್ತಾರಾದಿಮಠದ ಹತ್ತಿರ ವಿರುಪಾಕ್ಷಪುರ, ಸಣ್ಣಕ್ಕಿ ವೀರಭದ್ರನ ಹತ್ತಿರ ತಿರುಮಲಾಪುರ ಮತ್ತು ಶ್ರೀ ವೇಣುಗೋಪಾಲಕೃಷ್ಣ ದೇವಾಲಯದ ಹತ್ತಿರ ವಿಜಯಪುರ ನಾಗಲಾಪುರ ಮತ್ತು ಹಂದಿಗನೂರ ಗ್ರಾಮಗಳನ್ನು ಒಂದು ಗೂಡಿಸಿ ಹೊಸಪೇಟೆಯನ್ನಾಗಿ ಪರಿವರ್ತಿಸಲಾಯಿತೆಂದು ತಿಳಿದುಬರುತ್ತದೆ (ಮಹದೇವ,೧೯೯೬:೫೬).

ಇದರ ಮೇರೆಗಳು ಪೂರ್ವಕ್ಕೆ ಮರಿಯಪ್ಪನಗುಡಿ, ಉತ್ತರಕ್ಕೆ ಬಳ್ಳಾರಿ ದುರ್ಗಮ್ಮನಗುಡಿ ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೋಟೆಯ ಪ್ರಾಕಾರ ಗೋಡೆಯಿದ್ದು ಉತ್ತರದಲ್ಲಿ ಗೋಡೆಯ ಹೊರಗೆ ಕಟ್ಟಿದ ಅಗಸ ಮತ್ತು ಕುರುಬರಕೇರಿಗಳಿವೆಯೆಂದು ಹೇಳಲಾಗುತ್ತದೆ. ಇಲ್ಲಿನ ದೇಸಾಯಿ ಮನೆತನದ ನರಸಪ್ಪನಿಗೆ ಸಹಾಯಕರಾಗಿದ್ದ ಏಳು ಸಾವಿರ ಬೇಡರಿಗೆ ಹೊಸಪೇಟೆಯ ಕೋಟೆ ಸುತ್ತಲೂ ವಾಸಿಸಲು ನಿವಾಸಗಳನ್ನು ಏರ್ಪಡಿಸಲಾಯಿತು ನಂತರದ ಕಾಲದಲ್ಲಿ ಸಂಭವಿಸಿದ ಮಲೇರಿಯಾ ಕಾಯಿಲೆ ಪರಿಣಾಮವಾಗಿ ಸಮೀಪದ ಗ್ರಾಮಗಳಿಂದ ಹತ್ತಿರದ ಹೊಸಪೇಟೆಗೆ ಜನರ ವಲಸೆ ಬಂದಿತು. ಪ್ಲೇಗ್‌ನಂತಹ ಕಾಯಿಲೆ ನಿಯಂತ್ರಣಕ್ಕೆ ಇಲ್ಲಿನ ಕೋಟೆಗಳನ್ನು ಕೆಡವಿ ಹಳ್ಳಕೊಳ್ಳಗಳನ್ನು ಮುಚ್ಚಲಾಯಿತು. ಇದರಿಂದಾಗಿ ಊರು ವಿಶಾಲವಾಗಿ ಬೆಳೆಯಲು ಅವಕಾಶವಾಯಿತು. ನಂತರ ವಿಜಯನಗರ ಕಾಲದ ಕೋಟೆಕೊತ್ತಲಗಳು ನೆಲಸಮಗೊಂಡವು.

ಸಣ್ಣಕ್ಕಿ ವೀರಭದ್ರ ದೇವಾಲಯದ ಪ್ರದೇಶದಲ್ಲಿ ವಿಜಯನಗರ ಪೂರ್ವದಿಂದಲೂ ಇದ್ದ ಗ್ರಾಮ ನೆಲೆಯಲ್ಲಿ ಕೃಷ್ಣದೇವರಾಯನು ತಮ್ಮ ಇಬ್ಬರು ರಾಣಿಯರ ಹೆಸರಿನಲ್ಲಿ ನಿರ್ಮಿಸಿದ ತಿರುಮಲಾದೇವಿಯ ಪಟ್ಟಣ ಹಾಗೂ ಅದರ ಪೂರ್ವಕ್ಕೆ ನಿರ್ಮಿಸಿದ ನಾಗಲಾಪುರ ಪಟ್ಟಣಗಳು ಇಂದಿನ ಹೊಸಪೇಟೆಯ ಪ್ರಮುಖ ನೆಲೆಗಳೆಂದು ಗುರುತಿಸುವುದು ಪ್ರಸ್ತುತ ಅಧ್ಯಯನವಾದರೆ, ನಂತರದ ಶತಮಾನದಲ್ಲಿ ಕೋಟೆಯಾಚೆಗೆ ಬೆಳೆದ ಪೇಟೆಯು ಪ್ರಾಮುಖ್ಯತೆ ಪಡೆಯಲಾಗಿ ಹೊಸದಾದ ಪೇಟೆಯನ್ನು ಹೊಸಪೇಟೆಯೆಂದು ಕರೆಯಲಾಯಿತು. ಮುಂದೆ ಇದೇ ಇಡೀ ಊರಿಗೆ ಅನ್ವಯಿಸಿತು. ಇಂದಿನ ಹೊಸಪೇಟೆಯಲ್ಲಿ ಸಮೀಪದ ಮುದ್ದುಲಾಪುರ ಚಿತ್ತಮಡ್ಲಿ ಹಾಗೂ ಅಮರಾವತಿ ಪ್ರವೇಶ ಸೇರಿಕೊಂಡಿದೆ.

ಹರಪನಹಳ್ಳಿ ಪಾಳೆಯಗಾರ ಸೋಮಶೇಖರ ನಾಯಕನ ಕಾಲದಲ್ಲಿ (ಕ್ರಿ.ಶ.೧೭೪೨-೧೭೬೬) ನಾಗಲಾಪುರ, ವಿರೂಪಾಕ್ಷಪುರ, ಜಗಳಿಕಟ್ಟೆ, ಹಂದಿಗನೂರು, ವಿಜಯಪುರ ಗ್ರಾಮಗಳನ್ನು ಸೇರಿಸಿ ಇಂದಿನ

ಹೊಸಪೇಟೆಯಾಗಿ ಪರಿವರ್ತಿಸಲಾಯಿತೆಂದು ತಿಳಿದು ಬರುತ್ತದೆ. ಕೆಲವು ದಶಕಗಳ ಹಿಂದಿನವರೆಗೆ ಪ್ರಾಮುಖ್ಯತೆ ಗಳಿಸಿದ ಹೊಸೂರು ಮತ್ತು ಚಿತ್ತವಾಡಿಗೆ ಗ್ರಾಮಗಳು ಮಲೇರಿಯಾ ಜಾಡ್ಯದಿಂದಾಗಿ ಮಹತ್ವ ಕಳೆದುಕೊಳ್ಳಲಾಯಿತು. ಆಗ ಹೊಸದಾಗಿ ಬೆಳೆಯತೊಡಗಿದ ಪೇಟೆ ಹೊಸಪೇಟೆ ಯಾಯಿತು.

ಕಾಲಾನುಕ್ರಮದಲ್ಲಿ ಕೋಟೆಯ ಭಾಗಗಳು ಹಾಳಾಗಿ ಪಟ್ಟಣ ವಿಸ್ತೃತವಾಗಿ ಬೆಳೆದು ವಿಶಾಲ ರಸ್ತೆಯುಳ್ಳ ಪೇಟೆ ರಚನೆಗೊಂಡಿತು. ಬಹುಶಃ ಈ ಪೇಟೆಯೇ ಹೊಸಪೇಟೆ ಎಂಬ ಹೆಸರನ್ನು ಪಡೆದಿರಬಹುದು. ಹಳೆಯ ಗ್ರಾಮಗಳಾದ ನಾಗಲಾಪುರ, ವಿರೂಪಾಕ್ಷಪುರ, ಜಗಳಿಕಟ್ಟೆ, ಹಂದಿಗನೂರು ಮತ್ತು ವಿಜಯಪುರಗಳು ಅದರಲ್ಲಿ ಸೇರಿ ತಮ್ಮ ಹಳೆಯ ಹೆಸರುಗಳನ್ನು ಕಳೆದುಕೊಂಡವು. ವಿಸ್ತೃತವಾಗಿ ಬೆಳೆದ ಹೊಸಪೇಟೆಯು ಇಂದು ಚಿತ್ತವಾಡಿಗಿ, ಅನಂತಶಯನಗುಡಿ, ಮುದ್ದಲಾಪುರ ಗ್ರಾಮಗಳನ್ನು ಸಹ ಒಳಗೊಂಡಿದೆ (ಮಹದೇವ. ೨೦೦೨:೬೮-೬೯).

ಅಡಿಟಿಪ್ಪಣಿ

೦೧. ಮಲಪನಗುಡಿ : ಹಂಪೆ ಮತ್ತು ಹೊಸಪೇಟೆ ನಡುವೆ ಬರುತ್ತದೆ.

೦೨. ಮಾತಂಗ : ಮಾತಂಗ ಋಷಿಯು ಹಂಪೆ ಸಮೀಪದಲ್ಲಿ ಇರುವ ಪರ್ವತದಲ್ಲಿ ತಪಸ್ಸು ಮಾಡಿದ್ದರಿಂದ ಈ ವರ್ಪತಕ್ಕೆ ಮಾತಂಗ ಹೆಸರು ಬಂದಿದೆ.

೦೩. ಸಂಕ್ಲಾಪುರ : ಇಂದಿನ ಹೊಸಪೇಟೆಯ ಪೂರ್ವಕ್ಕಿದ್ದು ಬಳ್ಳಾರಿ ರಸ್ತೆಗೆ ಸಮೀಪದಲ್ಲಿದೆ.


೦೪. ಹೇಮಕೂಟ : ಕಾಳಿದಾಸ ಹಾಗೂ ಬಾಣರು ತಮ್ಮ ಕೃತಿಗಳಲ್ಲಿ ಹೇಳಿರುವ ಹೇಮಕೂಟವಾಗಿದೆ ಎಂದು ತಿಳಿಯಲಾಗಿದೆ. ಕನ್ನಡ ನಾಡಿನಲ್ಲಿ ಆಳಿದ ವಿಧ್ಯಾಧರ ವಂಶಿಕರಾದ ರಾಜರು ಅವರು ಮೂಲ ಪುರುಷ ಜೀಮೂತವಾಹನನು ಹಂಪೆಯ ಹೇಮಕೂಟ ರಾಜಧಾನಿಯಲ್ಲಿ ಆಳಿದವರೆಂದು ಹೇಳಲಾಗಿದೆ. ಹರಿಹರ, ರಾಘವಾಂಕ ಮತ್ತು ವಾದಿರಾಜರು ಹೇಮಕೂಟವನ್ನು ಕುರಿತು ಹೇಳಿದ್ದಾರೆ. ಜೈನರಿಗೂ ಹಂಪೆಯ ಹೇಮಕೂಟ ಪ್ರದೇಶ ಪುಣ್ಯಸ್ಥಳವಾಗಿದೆ ಎಂದು ವಡ್ಡಾರಾಧನೆಯಿಂದ ತಿಳಿದು ಬರುತ್ತದೆ. ಹೇಮಕೂಟದ ಚರಿತ್ರೆಯನ್ನು ಶೋದಿಸಲು ಪ್ರಯತ್ನಪಟ್ಟಿದ್ದಾರೆ. ಪ್ರಾಚೀನ ಕನ್ನಡ ನಾಡಿನ ಚರಿತ್ರೆಯೂ ಬೆಳಕಿಗೆ ಬರುವುದೆಂದು ಭಾವಿಸಲಾಗಿದೆ.

* * * * *

ಅಧ್ಯಾಯ ಮೂರು

ಮಧ್ಯಕಾಲೀನಯುಗದ ಹೊಸಪೇಟೆ

ಮಧ್ಯಕಾಲೀನ ಯುಗದಲ್ಲಿ ತಿರುಮಲಾದೇವಿ ಪಟ್ಟಣ (ಹೊಸಪೇಟೆ)



ಮಧ್ಯಕಾಲೀನ ಯುಗದ ಹೊಸಪೇಟೆಯು ವಿಜಯನಗರದ ಸ್ಥಾಪನೆಯಿಂದ ಪ್ರಾರಂಭವಾಗುತ್ತದೆ. ವಿಜಯನಗರ ೧೩೩೬ರಲ್ಲಿ ಪ್ರಾರಂಭವಾದಾಗ ಅನೇಕ ರಾಜರುಗಳು ಆಳ್ವಿಕೆ ನಡೆಸಿದರು. ಕೃಷ್ಣದೇವರಾಯನು ಹಳೇ ಗ್ರಾಮವಾಗಿದ್ದ ಹೊಸಪೇಟೆಯನ್ನು ತನ್ನ ಪ್ರೀತಿಯ ಹೆಂಡತಿಯಾದ ತಿರುಮಲದೇವಿಯ ಹೆಸರಿನಲ್ಲಿ ತಿರುಮಲಾದೇವಿ ಪಟ್ಟಣವನ್ನು ನಿರ್ಮಿಸಿದ್ದ ಎಂದು ಸಣ್ಣಕ್ಕಿ ವೀರಭದ್ರದೇವಾಲಯದ ಶಾಸನದಿಂದ ತಿಳಿದುಬರುತ್ತವೆ. ಈ ತಿರುಮಲಾದೇವಿಯರ ಪಟ್ಟಣದಲ್ಲಿ ವರ್ತಕರಿಗೆ ಮನೆಯನ್ನು ನಿರ್ಮಿಸಿದ್ದು ಕಂಡು ಬರುತ್ತದೆ. ಇಂದಿನ ಹೊಸಪೇಟೆಯಲ್ಲಿ ವಿಜಯನಗರ ಕಾಲದ ಅವಶೇಷಗಳು ದೊರೆತಿದ್ದು, ಕೆಲವೊಂದು ಮಧ್ಯಕಾಲೀನ ಯುಗದಲ್ಲಿ ಕೆರೆಗಳ ದೇವಾಲಯಗಳು, ಕಾಲುವೆಗಳು, ಕೆಲವೊಂದು ಶಾಸನಗಳು ದೊರೆತಿವೆ. ಮಧ್ಯಕಾಲೀನಲ್ಲಿ ಹೊಸಪೇಟೆಯೂ ಸಾಕಷ್ಟು ಮುಂದುವರೆದಿರುವುದು ಕಾಣಬಹುದಾಗಿದೆ. ಹೊಸಪೇಟೆಯಲ್ಲಿ ದೊರೆತಿರುವ ಕೆರೆಗಳು ಯಲ್ಲಪ್ಪಣ ಕೆರೆ, ರಾಯರ ಕೆರೆಗಳು ದೊರೆತಿದ್ದು ಶಾಸನಗಳಲ್ಲಿ ಉಲ್ಲೇಖಿತವಾಗಿರುವುದನ್ನು ಕಾಣಬಹುದು. ದೇವಾಲಯಗಳಾದ ಒಡಕರಾಯ ದೇವಾಲಯ, ಸಣ್ಣಕ್ಕಿ ವೀರಭದ್ರ ದೇವಾಲಯ, ಜಂಬುನಾಥ ದೇವಾಲಯಗಳು ಇರುವುದನ್ನು ಕಾಣಬಹುದು. ಅಷ್ಟೇ ಅಲ್ಲದೆ ಹೊಸಪೇಟೆಯಲ್ಲಿ ವರ್ತಕರು ಹೆಚ್ಚಾಗಿದ್ದು ಇವರಿಗೆ ಕೃಷ್ಣದೇವರಾಯನು ಮನೆಗಳನ್ನು ನಿರ್ಮಿಸಿದ್ದನು. ವಿಜಯನಗರ ಪತನ ನಂತರ ತಿರುಮಲಾದೇವಿಯರ ಪಟ್ಟಣ ತನ್ನ ಹಳೆಯ ಹೆಸರನ್ನು ಕಳೆದುಕೊಂಡಿದ್ದು, ಹೊಸದಾಗಿ ನಿರ್ಮಾವಾಗುತ್ತಿದ್ದ ಹೊಸ ಪಟ್ಟಣವನ್ನು ಸುತ್ತಮುತ್ತಲಿನ ಗ್ರಾಮಗಳು ಸೇರಿಕೊಂಡು ಆಧುನಿಕ ಕಾಲಕ್ಕೆ ಕಾಲಿಟ್ಟಿತು. ಪಾಳೆಯಗಾರರ ಕಾಲದಲ್ಲಿ ಹೊಸಪೇಟೆಯಾಗಲು ಪ್ರಾರಂಭವಾಯಿತು.

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಕರ್ನಾಟಕದ ಚರಿತ್ರೆಯಲ್ಲಿ ಮಧ್ಯಕಾಲದ ಚರಿತ್ರೆ ಬಹಳ ಮಹತ್ವದ ಭಾಗವಾಗಿದೆ. ಕುಮ್ಮಟದುರ್ಗವು ದೆಹಲಿ ಸುಲ್ತಾನನಾದ ಮಹಮದ್ ಬಿನ್ ತುಗಲಕನ ವಶವಾದ ಮೇಲೆ ಈ ಪ್ರದೇಶವನ್ನು ನೋಡಿಕೊಳ್ಳಲು ಮಲ್ಲಿಕ್ ಮಹಮ್ಮದ್ ಎಂಬುವವನು ನೇಮಿತನಾಗುತ್ತಾನೆ. ಆದರೆ ಇವನು, ಸ್ಥಳೀಯರ ಅಸಹಕಾರದಿಂದಾಗಿ ಮತ್ತು ದೆಹಲಿಯ ರಾಜಕೀಯ ಅಸ್ಥಿರತೆಯಿಂದಾಗಿ ಇಲ್ಲಿಂದ ನಿರ್ಗಮಿಸುತ್ತಾನೆ. ಈ ಮುನ್ನ ಕ್ರಿ. ಶ. ೧೩೨೦ರಲ್ಲಿ ಮೂರನೆಯ ಬಲ್ಲಾಳನು ಕುಮ್ಮಟದ ಮೇಲೆ ಯುದ್ಧ ಮಾಡಿ ದೊರೆವಾಡಿ (ದರೋಜಿ) ಮತ್ತು ಹಂಪೆ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡನೆಂದು ಹೇಳಲಾಗಿದೆ. ಕ್ರಿ.ಶ. ೧೩೨೫ರ ನಂತರದ ಕೆಲವು ಶಾಸನಗಳು ಮುಮ್ಮಡಿ ಬಲ್ಲಾಳನು ''ಹೊಸಪಟ್ಟಣ'' ''ವಿರೂಪಾಕ್ಷಪಟ್ಟಣ'' ''ವಿರೂಪಾದ '' ''ಹೊಸದುರ್ಗ'' ''ವಿರೂಪಾಕ್ಷಪುರ'' ಮುಂತಾದ ಹೆಸರುಗಳಿಂದ ಕರೆಯಲಾಗುವ ಹೊಸ ರಾಜಧಾನಿಯಲ್ಲಿ ನೆಲೆಯಾಗಿ ಆಳುತ್ತಿದ್ದನೆಂದು ತಿಳಿಸುತ್ತದೆ (ಬಡಿಗೇರ,೨೦೦೬:೨೬).

ರಕ್ಷಣೆಗಾಗಿ ಮೂರನೆಯ ಬಲ್ಲಾಳನು ಹಂಪೆಯಲ್ಲಿ ಹೊಸಪಟ್ಟಣವೊಂದನ್ನು ನಿರ್ಮಿಸಿ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಪರಕೀಯರ ದಾಳಿಯಿಂದ ರಕ್ಷಣೆ ಪಡೆಯಲು ಬಲ್ಲಾಳನಿಗೆ ಈ ಪ್ರದೇಶವು ತುಂಬಾ ಆಯಕಟ್ಟಿನ ಪ್ರದೇಶವಾಗಿ ಗೋಚರಿಸಿದ್ದು ಪರಕೀಯರ ದಾಳಿಗಳನ್ನು ಎದುರಿಸಲು ಮತ್ತು ಈ ಪ್ರದೇಶಗಳ ಸೂಕ್ತ ರಕ್ಷಣೆಗಾಗಿ ಹೊಸ ಉಪರಾಜಧಾನಿಯನ್ನು ಸ್ಥಾಪಿಸುವುದು ಅನಿವಾರ್ಯವಾಯಿತು. ಅದಕ್ಕಾಗಿ ದುರ್ಗಮ ಪ್ರದೇಶವಾದ ಹಂಪಿಯನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಹೊಸಪಟ್ಟಣವೊಂದರ ನಿರ್ಮಾಣ ಮಾಡಲಾಯಿತು.

ಶಾಸನಗಳಲ್ಲಿ ವಿರೂಪಾಕ್ಷ ಮತ್ತು ಹೊಸಪಟ್ಟಣ ಇವೆರಡನ್ನು ಜೊತೆ ಜೊತೆಯಾಗಿ ಬಳಸಿರುವುದು ಕಂಡು ಬರುತ್ತದೆ. ಹೀಗೆ ರಾಜದಾನಿಯು ಆ ಕಾಲದ ಶಾಸನಗಳಲ್ಲಿ ಆನೆಗುಂದಿ, ಕುಂಜರ, ಕೋಣ, ವಿರೂಪಾಕ್ಷಪುರ, ಹೊಸಪಟ್ಟಣ, ಹೊಸ-ಹಂಪೆಯ ಪಟ್ಟಣ, ಹಸ್ತಿನಾವತಿ, ವಿದ್ಯಾನಗರ ಮತ್ತು ವಿಜಯನಗರವೆಂದು ಕರೆಯಲ್ಪಟ್ಟಿದೆ (ಸೋಮಶೇಖರ್,೨೦೦೬:೩೮).

ಇದರಿಂದ ಹಂಪೆಯಲ್ಲಿ ಮೂರನೆಯ ಬಲ್ಲಾಳ ನಿರ್ಮಿಸಿದ ರಾಜಧಾನಿ ಹೊಸಪಟ್ಟಣ ಮತ್ತು ಕೋಟೆ ಇತ್ತೆಂಬುದು ಸುಸ್ಪಷ್ಟ. ಸಂಗಮ ವಂಶದ ಹರಿಹರನ ನೇಮಕವೇ ಮುಂದೆ ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ಕಾರಣವಾಯಿತು. ಸುಮಾರು ಕ್ರಿ.ಶ ೧೩೩೬ರಲ್ಲಿ ಮೂರನೆಯ ಬಲ್ಲಾಳನು ಹರಿಹರನನ್ನು ಮಹಾಮಂಡಲೇಶ್ವರನನ್ನಾಗಿ ನೇಮಿಸಿರಬೇಕೆಂದು ಶ್ರೀಕಂಠಯ್ಯನವರು ಅಭಿಪ್ರಾಯಪಡುತ್ತಾರೆ.

[illegible]

[illegible]

[illegible]

[illegible]

ವಿಜಯನಗರದ ಮೊದಲ ಅರಸರಿಗೆ ಪಾಶುಪತ ಪಂಥದ ಕ್ರಿಯಾಶಕ್ತಿ ರಾಜಗುರುವಾಗಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ವಿದ್ಯಾರಣ್ಯರು ವಿದ್ಯಾನಗರ (ವಿಜಯನಗರ)ದಲ್ಲಿ ಕರ್ನಾಟಕ ಸಿಂಹಾಸನವನ್ನು ಪ್ರತಿಷ್ಠಾಪಿಸಿದರೆಂದು ಐಗೂರಿನ ಅರಸುಗಳಾದ ವೆಂಕಟಾದ್ರಿ ನಾಯಕ ಶೃಂಗೇರಿ ಮಠದ ಶ್ರೀ ಅಭಿನವ ಸಚ್ಚಿದಾನಂದ ಭಾರತಿಗಳಿಗೆ ಅರ್ಪಿಸಿದ ಭಿನ್ನವತ್ತಳೆಯಲ್ಲಿದೆ. ವಿದ್ಯಾನಗರ ಮಹಾರಾಜದಾನಿ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಎಂದು ನಮೂದಿಸುವ ಇನ್ನೂ ಅನೇಕ ದಾಖಲೆಗಳಿವೆ. ವಿದ್ಯಾರಣ್ಯರು ಕ್ರಿ.ಶ. ೧೩೫೬ರಿಂದ ವಿಜಯನಗರ ಅರಸರ ಜೊತೆ ನಿಕಟ ಸಂಪರ್ಕ ಹೊಂದಿದ್ದರೆಂಬುದಂತು ಸ್ಪಷ್ಟವಾದ ಸಂಗತಿಯಾಗಿದೆ (ಮಹದೇವ,೨೦೦೩:೩೪).

ತಿರುಮಲಾದೇವಿ ಪಟ್ಟಣವನ್ನು ಆಳ್ವಿಕೆ ಮಾಡಿದ ರಾಜರು

ವಿಜಯನಗರದಲ್ಲಿ ನಾಲ್ಕು ವಂಶಗಳು ಆಳ್ವಿಕೆ ನಡೆಸಿದವು. ವಿಜಯನಗರದ ಅರಸರು ಹಂಪೆಯ ವಿರೂಪಾಕ್ಷನನ್ನು ಸಾಮ್ರಾಜ್ಯದ ಅಧಿದೇವತೆಯಾಗಿ ಸ್ವೀಕರಿಸಿ ಇವರ ರಾಜಲಾಂಛನವು ಪ್ರಾರಂಭದಲ್ಲಿ ಗಂಡಭೇರುಂಡ ಪಕ್ಷಿಯಾಗಿದ್ದು ನಂತರ ವರಾಹ, ಸೂರ್ಯ, ಚಂದ್ರ, ಕಠಾರಿಯನ್ನು ಒಳಗೊಂಡಿತು. ಇವರು ಸಾಮಾನ್ಯವಾಗಿ ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಾಧಿಪತಿ ಎಂಬ ಬಿರುದನ್ನು ಹೊಂದಿದ್ದು (ಕಿನ್ನಾಳ, ೨೦೦೩:೧೦೬) ರಾಜಧಾನಿ ನಗರವು ವಿವಿಧ ಹೆಸರುಗಳಿಂದ ಉಲ್ಲೇಖಿಸಲ್ಪಟ್ಟಿದೆ. ಅವುಗಳೆಂದರೆ ಆನೆಗೊಂದಿ, ಕುಂಜರಕೋಣ, ವಿರೂಪಾಕ್ಷಪುರ, ಹೊಸಪಟ್ಟಣ, ಹಂಪೆ-ಹಸ್ತಿನಾವತಿ, ವಿದ್ಯಾನಗರ ಮತ್ತು ವಿಜಯನಗರ (ಲಿಂಗಯ್ಯ,೧೯೬೭:೧೦೮) ಈ ರೀತಿಯಾಗಿ ನಾಲ್ಕು ವಂಶಗಳು ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ಹೊಸಪಟ್ಟಣದಲ್ಲಿ ಈ ಕೆಳಕಂಡ ರಾಜವಂಶಗಳ ಅರಸರು ಆಳ್ವಿಕೆ ನಡೆಸಿರುವುದು ಕಂಡುಬರುತ್ತದೆ.

೧. ಸಂಗಮ ವಂಶ (ಕ್ರಿ.ಶ ೧೩೩೬-೧೪೮೫)

ಹರಿಹರ (೧೩೩೬-೧೩೫೬)

ಹರಿಹರನು ಸಂಗಮನ ಹಿರಿಯಮಗ. ಸಹೋದರರಾದ ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪರ ಸಹಕಾರದಿಂದ ಹೊಸ ಸಾಮ್ರಾಜ್ಯವನ್ನು ಕಟ್ಟಿಸುತ್ತಾನೆ. ಬಾರ್ಕೂರಿನಲ್ಲಿ ಕ್ರಿ.ಶ.೧೩೩೬ರಲ್ಲಿ ಕೋಟೆಯೊಂದನ್ನು ನಿರ್ಮಿಸುತ್ತಾನೆ. ಮೂರನೆಯ ಬಲ್ಲಾಳ ಕ್ರಿ.ಶ. ೧೩೩೮ರಲ್ಲಿ ಇದನ್ನು ಪರಿಶೀಲಿಸಲು ಅಲ್ಲಿಗೆ ಹೋಗಿದ್ದನು ಮಹಾಮಂಡಲೇಶ್ವರನಾಗಿದ್ದ ಹರಿಹರನು ಮೂರನೆಯ ಬಲ್ಲಾಳನಿಗೆ ವಿಧೇಯನಾಗಿದ್ದ. ನಂತರ ಬಂದ ನಾಲ್ಕನೆಯ ಬಲ್ಲಾಳ ಅಸಮರ್ಥನಾಗಿದ್ದನು. ಇದು ಹರಿಹರನು ಸ್ವತಂತ್ರವಾಗಿ ಬೆಳೆಯಲು ಸಹಾಯಕವಾಯಿತು.

[illegible]

[illegible]

[illegible]

[illegible]

[illegible]

ಕ್ರಿ.ಶ. ೧೩೪೬ರಲ್ಲಿ ನಾಲ್ಕನೆಯ ಬಲ್ಲಾಳ ಮರಣ ಹೊಂದಿದ ಮೇಲೆ ಹರಿಹರನು ಸಂಪೂರ್ಣ ಸ್ವತಂತ್ರನಾಗಿ ರಾಜ್ಯವಾಳುತ್ತಾನೆ. ಈ ಮಧ್ಯದಲ್ಲಿ ಕ್ರಿ.ಶ ೧೩೪೭ರಲ್ಲಿ ಗುಲ್ಬರ್ಗದಲ್ಲಿ ಬಹಮನಿ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಅಲ್ಲಾವುದ್ದೀನ್ ಹಸನ್ ಬಹಮನಿ ಷಾ ಎಂಬುವನು ಇದರ ಸಂಸ್ಥಾಪಕ. ಈತನ ಮೊದಲ ಹೆಸರು ಜಫರ್‌ಖಾನ್. ದಕ್ಷಿಣ ಭಾರತದ ಚರಿತ್ರೆಯಲ್ಲಿ ಇದೊಂದು ವಿಶೇಷವಾದ ಘಟನೆ. ನಂತರದ ಶತಮಾನಗಳಲ್ಲಿ ಬಹಮನಿ ಮತ್ತು ವಿಜಯನಗರ ಅರಸರು ನಿರಂತರವಾಗಿ ಯುದ್ಧದಲ್ಲಿ ತೊಡಗಿದರು (ರವೀಂದ್ರನಾಥ,೨೦೦೫:೮).

ಕ್ರಿ.ಶ. ೧೩೫೬ರಲ್ಲಿ ಹರಿಹರನು ಮೃತನಾದನು. ನಂತರ ಬುಕ್ಕನು ಉತ್ತರಾಧಿಕಾರಿಯಾಗಿ ಪಟ್ಟಾಭಿಷಿಕ್ತನಾದನು.

ಒಂದನೆಯ ಬುಕ್ಕ

ಕ್ರಿ.ಶ.೧೩೫೬ರಲ್ಲಿ ಬುಕ್ಕನು ಅಧಿಕಾರ ವಹಿಸಿಕೊಳ್ಳುತ್ತಾನೆ. ಇವನು ಎರಡು ದಶಕಗಳ ಆಳ್ವಿಕೆಯಲ್ಲಿ ರಾಜ್ಯವನ್ನು ವಿಸ್ತರಿಸುತ್ತಾನೆ. ಬುಕ್ಕನನ್ನು ಶೌರ್ಯದಲ್ಲಿ ಅರ್ಜುನನೆಂದು ಕೊಪ್ಪಳದ ೨೫ ನೆಯ ಶಾಸನ ಕೊಂಡಾಡಿದೆ. (ರಾಮಕೃಷ್ಣ,೨೦೦೧:೧೧೫) ಕ್ರಿ.ಶ ೧೩೫೬ರಲ್ಲಿ ವಿದ್ಯಾರಣ್ಯರು ಬುಕ್ಕರಾಯನ ಮಂತ್ರಿಗಳಾಗಿದ್ದರು. ಇದನ್ನು ಫಾದರ್ ಹೆರಾಸರು ಒಪ್ಪಿದ್ದಾರೆ.

ಕ್ರಿ.ಶ.೧೩೫೬ರ ವೇಳೆಗೆ ಹೊಯ್ಸಳ ಮೂರನೆಯ ಬಲ್ಲಾಳನು ನಿರ್ಮಿಸಿದ್ದ ಹೊಸಪಟ್ಟಣ(ಹಂಪೆ)ದಲ್ಲಿ ಬುಕ್ಕನು ರಾಜ್ಯವಾಳುತ್ತಿದ್ದನು. ಹೊಯ್ಸಳರ ಹೊಸಪಟ್ಟಣವೆ ಬೇರೆ, ಬುಕ್ಕನ ವಿಜಯನಗರವೇ ಬೇರೆ ಎಂದು ಬಿನ್ನಾಭಿಪ್ರಾಯವಿತ್ತು. ಆದರೆ ಸಕ್ಕರೆ ಪಟ್ಟಣದ ಶಾಸನವು ಸ್ಪಷ್ಟವಾಗಿ ಬುಕ್ಕನು ಹೊಸಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನೆಂದು ತಿಳಿಸುತ್ತದೆ. ನಂತರದ ವರ್ಷಗಳಲ್ಲಿ ಹೊಸಪಟ್ಟಣದ ಬದಲು ವಿಜಯನಗರದ ಹೆಸರು ಕಾಣಿಸಿಕೊಳ್ಳುತ್ತವೆ. ಅಂದರೆ ಹೊಸಪಟ್ಟಣವನ್ನು ವಿಜಯನಗರವೆಂದು ಕರೆದು ಅಭಿವೃದ್ಧಿ ಪಡೆಸಿದನೆಂದು ಗ್ರಹಿಸಿಬಹುದು (ಕೃಷ್ಣರಾವ್,೧೯೨೦:೧೧೮).

ಬುಕ್ಕನ ಕಾಲದಲ್ಲಿ ಬಹುಮನಿ ರಾಜ್ಯದೊಡನೆ ಕದನಗಳು ಆರಂಭವಾಗಿ ತೀವ್ರ ಸ್ವರೂಪವನ್ನು ತಾಳಿದವು. ತುಂಗಭದ್ರಾ ಮತ್ತು ಕೃಷ್ಣಾನದಿಗಳ ನಡುವಿನ ಫಲವತ್ತಾದ ಭೂಮಿಗಾಗಿ ಈ ಯುದ್ಧಗಳು ನಡೆದವು. (ಕೃಷ್ಣರಾವ್,೧೯೭೦:೧೧೯) ಬುಕ್ಕನು ಹಂಪೆಯ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿ ಪ್ರಜೆಗಳ ವಾಸಕ್ಕೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿದ. ವ್ಯವಸಾಯ ವ್ಯಾಪಾರಗಳಿಗೆ ಉತ್ತೇಜನ ನೀಡಿದ. ಸಿಂಹಳದ ಅರಸರು ಮತ್ತು ಮಲೆಬಾರಿನ ನಾಯಕರು ಅರಸನ ಆಸ್ಥಾನಕ್ಕೆ ರಾಜ ಪ್ರತಿನಿಧಿಗಳನ್ನು

ಕಳುಹಿಸಲಾಯಿತು. ಚೀನಾ ದೇಶದ ಮಿಂಗ್ ರಾಜನ ಆಸ್ಥಾನಕ್ಕೆ ಬುಕ್ಕನು ಕ್ರಿ.ಶ. ೧೩೭೪ರಲ್ಲಿ ಒಂದು ನಿಯೋಗವನ್ನು ಕಳುಹಿಸಿದನು. ವಿಜಯನಗರ ಮತ್ತು ಚೀನಾ ನಡುವೆ ವ್ಯಾಪಾರ ವಾಣಿಜ್ಯ ಸಂಬಂಧಗಳಿದ್ದವು ಎಂದು ತಿಳಿಯುತ್ತದೆ. ಹಂಪಿ ಉತ್ಖನನದಲ್ಲಿ ಅಧಿಕ ಸಂಖ್ಯೆಯ ಚೀನಿ ಲಿಪಿ, ಇರುವ ಪಿಂಗಾಣಿ ಪಾತ್ರೆಯ ಚೂರುಗಳು ದೊರಕಿವೆ (ವಸಂತ ಮಾಧವ,೨೧೦೪:೨೦೦).

ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ಸಂಘಟನೆಯಲ್ಲಿ ಅಪಾರವಾಗಿ ಶ್ರಮಿಸಿದ ಒಂದನೆಯ ಬುಕ್ಕನು ಕ್ರಿ.ಶ. ೧೩೭೭ರಲ್ಲಿ ಮೃತನಾದನು. ಕಾಶಿವಿಲಾಸ ಕ್ರಿಯಾಶಕ್ತಿ ಈತನ ರಾಜ ಗುರುವಾಗಿದ್ದರು (ಕೃಷ್ಣರಾವ್, ೧೯೨೦:೧೧೯).

ಇಮ್ಮಡಿ ಹರಿಹರ

ಇಮ್ಮಡಿ ಹರಿಹರನು ತಂದೆಯ ಉತ್ತರಾಧಿಕಾರಿಯಾಗಿ ಆಡಳಿತ ವಹಿಸಿಕೊಂಡನು. ಈತನ ಆಳ್ವಿಕೆಯು ಬಹುಕಾಲ ಶಾಂತಿಯಿಂದ ಕೂಡಿದ್ದು ವ್ಯಾಪಾರ ವಾಣಿಜ್ಯಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತನು. ದ್ವಾರಸಮುದ್ರ, ಪೆನುಗೊಂಡೆ, ಬಂಕಾಪುರ, ಉದಯಗಿರಿ ಪ್ರಮುಖ ನಗರಗಳಾಗಿದ್ದವು. ವಿದ್ಯೆ ಕಲಿಕೆಗೂ ಉದಾರವಾದ ಪ್ರೋತ್ಸಾಹ ದೊರೆಯಿತು. ಮುದ್ದನೆಂಬ ಮಂತ್ರಿಯು ಸಮರ್ಥ ಆಡಳಿತಗಾರನಾಗಿದ್ದನು.

ವೇದಗಳಿಗೆ ಭಾಷ್ಯ ಬರೆಯಿಸುವ ಯೋಜನೆ ಇಮ್ಮಡಿ ಹರಿಹರನ ಕಾಲದಲ್ಲಿ ಪೂರ್ಣಗೊಂಡಿತು. ಅರಸನು ವೈದಿಕ ಮಾರ್ಗ ಸ್ಥಾಪನಾಚಾರ್ಯನೆನಿಸಿದ. ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡಿದ. ಈತನ ಕಾಲದಲ್ಲಿ ಜೈನ ಹಾಗೂ ವೀರಶೈವ ಕೃತಿಗಳು ರಚನೆಗೊಂಡವು.

ಕ್ರಿಶ. ೧೪೦೪ರಲ್ಲಿ ಹರಿಹರನು ತೀರಿಕೊಂಡನು. ಮಕ್ಕಳಾದ ಎರಡನೆಯ ಬುಕ್ಕ, ಎರಡನೆಯ ವಿರೂಪಾಕ್ಷ, ಒಂದನೆಯ ದೇವರಾಯರ ನಡುವೆ ಸಿಂಹಾಸನಕ್ಕಾಗಿ ವಿವಾದ ಉಂಟಾಯಿತು. ಮೊದಲಿಗೆ ಎರಡನೆಯ ವಿರೂಪಾಕ್ಷ ಸ್ವತಃ ರಾಜನೆಂದು ಕರೆದುಕೊಂಡು, ಸಿಂಹಾಸನವೇರಿದರೂ ಇಮ್ಮಡಿ ಬುಕ್ಕನಿಂದ ಪದಚ್ಯುತಗೊಳ್ಳುತ್ತಾನೆ. ಆದರೆ ಬುಕ್ಕ ಬಹುಕಾಲ ಬಾಳಲಿಲ್ಲ. ಅಂತಿಮವಾಗಿ ಕ್ರಿ.ಶ. ೧೪೦೬ರಲ್ಲಿ ಒಂದನೆಯ ದೇವರಾಯ ಅಧಿಕಾರ ವಹಿಸುತ್ತಾನೆ (ಕಾಮತ್,೧೯೭೩:೨೦).

ಒಂದನೆಯ ದೇವರಾಯ ಕ್ರಿ.ಶ (೧೪೦೬-೧೪೨೨)

ಇವನು ಪಟ್ಟಕ್ಕೆ ಬಂದ ತಕ್ಷಣ ಫಿರೋಜ್ ಶಹ ವಿಜಯನಗರದ ಮೇಲೆ ದಾಳಿ ಮಾಡುತ್ತಾನೆ. ಈ ಯುದ್ಧದಲ್ಲಿ ಬಹಮನಿ ಸೈನ್ಯವು ಅಪಾರವಾದ ಹಾನಿಯನ್ನು ಅನುಭವಿಸುತ್ತದೆ. ಒಂದನೆಯ ದೇವರಾಯ ರಾಯಚೂರು ದೋ ಅಬ್ ಪ್ರದೇಶದ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿದನು.

ಒಂದನೆಯ ದೇವರಾಯ ಉತ್ತಮ ಸೈನ್ಯ ನಿರ್ಮಿಸಿದನು. ಸಾಮ್ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಅನುಭವವಿತ್ತು. ರಾಜಧಾನಿ ಬಲಪಡಿಸಲು ಹೊಸದಾಗಿ ಕೋಟೆಯನ್ನು ನಿರ್ಮಿಸಿದನು. ನಗರವನ್ನು ಅಭಿವೃದ್ಧಿ ಪಡಿಸಿದನು. ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ತುಂಗಭದ್ರಾ ನದಿಗೆ ದೊಡ್ಡದಾದ ಅಣೆಯೊಂದನ್ನು ಕಟ್ಟಿಸಿ, ನದಿಯಿಂದ ನಗರದವರೆಗೆ ಸುಮಾರು ೧೫ ಮೈಲುಗಳ ಉದ್ದದ ಕಲ್ಲಿನ ಕಾಲುವೆಯನ್ನು ನಿರ್ಮಿಸಿದನು.

ಈ ನೀರನ್ನು ನಗರಕ್ಕೆ ಮತ್ತು ವ್ಯವಸಾಯಕ್ಕೆ ಪೂರ್ಣವಾಗಿ ಬಳಸಲಾಯಿತು. ಈ ನೀರಾವರಿ ಕೆಲಸಗಳು ಇಡೀ ಭಾರತದಲ್ಲೇ ಆ ಕಾಲಕ್ಕೆ ಮಹತ್ವದ ನಿರ್ಮಾಣಗಳೆಂದು ಸಿವೆಲ್ ತಿಳಿಸುತ್ತಾನೆ. ದೇವರಾಯನು ಯುದ್ಧಕ್ಕೆ ಅರೇಬಿಯಾ ಮತ್ತು ಪರ್ಷಿಯಾಗಳಿಂದ ಉತ್ತಮ ಕುದುರೆಗಳನ್ನು ತರಿಸಿದನು. ಸೈನಿಕ ಹುದ್ದೆಗಳಿಗೆ ಯೋಗ್ಯರಾದವರನ್ನು ಭರ್ತಿಮಾಡಿ ಸೈನ್ಯದ ದಕ್ಷತೆಯನ್ನು ಹೆಚ್ಚಿಸಿದನು. ಮೊದಲ ಬಾರಿಗೆ ತನ್ನ ಸೇವೆಯಲ್ಲಿ ಟರ್ಕಿ ಬಿಲ್ಲುಗಾರರನನ್ನು ನೇಮಕ ಮಾಡಿಕೊಳ್ಳುತ್ತಾನೆ ಮತ್ತು ಸೈನಿಕರುಗಳಿಗೆ ಕಿರು ಸೇನಾಪಡೆಗಳನ್ನು ಸ್ಥಾಪಿಸಿದನು. ಅವು ಕಾಲಾನುಕ್ರಮಗಳಲ್ಲಿ ಗ್ರಾಮಗಳಾದವು. ಈ ಗ್ರಾಮಗಳು ತಿರುಮಲಾ ದೇವಿಪಟ್ಟಣದ ಸುತ್ತಮುತ್ತ ನಿರ್ಮಾಣಗೊಂಡವು. ನಂತರ ದೇವರಾಯನು ಸಮ್ರಾಜ್ಯದ ವಿಸ್ತರಣೆ ಮಾಡಿ ಸ್ರಾಮ್ರಾಜ್ಯವನ್ನು ಸುಂದರಗೊಳಿಸಿದನು (ಕಾಮತ್,೧೯೮೭:೨೨).

ನ್ಯೂನಿಜ್, ಈತನ ಕಾಲದಲ್ಲಿ ಪಟ್ಟಣ ವಿಸ್ತಾರಗೊಂಡು ಹೊಸ ಕೋಟೆಗಳನ್ನು ಹೊಂದಿದ ಬಗ್ಗೆ ತಿಳಿಸುತ್ತಾನೆ. ಈತನ ಕೊನೆಗಾಲದಲ್ಲಿ ಇಟಲಿಯ ಪ್ರವಾಸಿ ನಿಕೋಲೋ ಕೊಂಟಿಯು ವಿಜಯನಗರಕ್ಕೆ ಬೇಟಿ ನಿಡಿದ್ದನು. ಒಂದನೆಯ ದೇವರಾಯನು ಕ್ರಿ.ಶ. ೧೪೨೨ರಲ್ಲಿ ಮರಣ ಹೊಂದುತ್ತಾನೆ (ಕನವಳ್ಳಿ,೨೦೦೬:೧೦೪).

ನಂತರ ಕಿರಿಯ ಮಗ ರಾಮಚಂದ್ರನು (ಉದಯಗಿರಿಯ ರಾಜ್ಯಪಾಲ) ಅಧಿಕಾರಕ್ಕೆ ಬರುತ್ತಾನೆ. ಈತನು ಸ್ವಲ್ಪಕಾಲ ಆಳಿ, ತನ್ನ ಹಿರಿಯ ಸಹೋದರನಾದ, ವೀರವಿಜಯರಾಯನಿಗೆ ಸಿಂಹಾಸನ ವಹಿಸುತ್ತಾನೆ. (ಕಾಮತ್,೧೯೮೭:೨೩).

ವೀರ ವಿಜಯರಾಯ (ಕ್ರಿ.ಶ. ೧೪೨೨ - ೧೪೨೪)

ಈತನನ್ನು ವಿಜಯಭೂಪತಿ ಮತ್ತು ವಿಜಯಬುಕ್ಕ ಎಂದು ಸಹ ಕರೆಯಲಾಗುತ್ತದೆ. ದುರ್ಬಲನಾದ ಈತನು ಸ್ವಲ್ಪಕಾಲವೇ ರಾಜ್ಯವಾಳಿದನು. ಕ್ರಿ.ಶ. ೧೪೨೪ರ ವೇಳೆಗೆ ಇವನ ಆಡಳಿತವು ಕೊನೆಗೊಂಡು ಮಗನಾದ ಯುವರಾಜ ಎರಡನೆಯ ದೇವರಾಯ ಸಮರ್ಥನಾಗಿದ್ದು ಎಲ್ಲ ಆಡಳಿತವನ್ನು ವಹಿಸಿಕೊಳ್ಳುತ್ತಾನೆ.

ವಿಜಯನಗರ ಸೈನ್ಯವು ಕ್ರಿ.ಶ ೧೪೨೨-೨೩ರಲ್ಲಿ ಒಂದನೆಯ ಬಹಮನಿ ಅಹಮದ್ ಶಹನ ದಾಳಿಯನ್ನು ಸಮರ್ಥವಾಗಿ ಎದುರಿಸಿ ಗುಲ್ಬರ್ಗ ಜಿಲ್ಲೆಯ ಯಾದಗಿರಿಗೆ ನುಗ್ಗಿತು. ಇದರಿಂದಾಗಿ ಬಹಮನಿಗಳು ತಮ್ಮ ರಾಜಧಾನಿಯನ್ನು ಕ್ರಿ.ಶ. ೧೪೨೩ರಲ್ಲಿ ಗುಲ್ಬರ್ಗದಿಂದ ಬೀದರ್‌ಗೆ ವರ್ಗಾಯಿಸಿದರು (ರಾಮಕೃಷ್ಣ, ೨೦೦೧:೧೨೨).

ಇಮ್ಮಡಿ ದೇವರಾಯ (ಕ್ರಿ.ಶ. ೧೪೨೪ - ೧೪೪೬)

ಇಮ್ಮಡಿ ದೇವರಾಯನು ಪ್ರೌಢದೇವರಾಯ, ಪ್ರತಾಪದೇವರಾಯ ಮತ್ತು ಅಭಿನವ ವೀರ ದೇವರಾಯ ಎಂಬ ಹೆಸರುಗಳನ್ನು ಸಹ ಹೊಂದಿದ್ದನು. ಗಜಬೇಂಟೆಕಾರ ಎಂಬುದು ಈತನಿಗೆ ವಿಶಿಷ್ಟವಾದ ಬಿರುದಾಗಿತ್ತು.

ಕ್ರಿ.ಶ. ೧೪೪೩-೪೪ರಲ್ಲಿ ಮತ್ತೊಮ್ಮೆ ಅಲಾಉದ್ದಿನ್ ಮತ್ತು ಇಮ್ಮಡಿ ದೇವರಾಯನ ನಡುವೆ ಯುದ್ಧ ನಡೆಯುತ್ತದೆ. ಅಬ್ದುಲ್ ರಜಾಕ್ ಮತ್ತು ಇಟಲಿ ಪ್ರವಾಸಿ ನಿಕೋಲೊ ಕೊಂಟಿ ಇವರು ವಿಜಯನಗರಕ್ಕೆ ಕ್ರಿ.ಶ. ೧೪೨೦-೨೧ರಲ್ಲಿ ಭೇಟಿ ಕೊಟ್ಟಿದ್ದನು. ೧೪೪೦ರಲ್ಲಿ ವೆನಿಸ್‌ಗೆ ಹಿಂದುರಿಗಿದ ನಂತರ ಪೋಪನ ಆದೇಶದ ಮೇರೆಗೆ ತನ್ನ ಪ್ರವಾಸ ಕಥನವನ್ನು ಲ್ಯಾಟಿನ್ ಭಾಷೆಯಲ್ಲಿ ಬರೆಸಿದನು. ನಂತರ ಅದು ಪೋರ್ಚುಗೀಸ್ ಭಾಷೆಗೆ, ನಂತರ ದುಮೋಸಿಯೋ ಎಂಬುವನಿಂದ ಇಟಾಲಿಯನ್‌ಗೆ ಭಾಷಾಂತರಗೊಂಡು, ಮೇಜರ್ ಎಂಬಾತನಿಂದ ಆಂಗ್ಲ ಭಾಷಾಂತರವನ್ನು ಕಂಡಿತು. ಈ ಗ್ರಂಥದಲ್ಲಿ ಹೊಸಪೇಟೆಗೆ ಹೊಂದಿಕೊಂಡಿದ್ದ ದಾರಿಗಳ ಬಗ್ಗೆ ಹೇಳಿದ್ದಾನೆ.

ನಿಕೋಲೋ ಕೊಂಟಿಯು ಉಪನಗರದ ಸುತ್ತಳತೆಯು ೬೦ ಮೈಲಿಗಳೆಂದು, ಕೋಟೆಗಳು ಪರ್ವತಗಳಷ್ಟು ಎತ್ತರವಾಗಿವೆ ಎನ್ನುತ್ತಾನೆ. ಅಬ್ದುಲ್ ರಜಾಕ್ ೧೪೪೩ರಲ್ಲಿ ಏಪ್ರಿಲ್‌ನಿಂದ ಡಿಸೆಂಬರ್ ೫ರವರೆಗೆ ವಿಜಯನಗರದಲ್ಲಿದ್ದನು. ಈತನು ಪರ್ಷಿಯಾದ ರಾಯಭಾರಿಯಾಗಿದ್ದು ತನ್ನ ''ಮತ್ಲ ಅಸ್ ಸದೈನ್'' ಗ್ರಂಥದಲ್ಲಿ ಈ ರೀತಿ ತಿಳಿಸುತ್ತಾನೆ.

ವಿಜಯನಗರ ದೊಡ್ಡ ಜನಸಂಖ್ಯೆಯ ಊರು. ಮುನ್ನೂರು ಬಂದರುಗಳಿವೆ. ಸೈನ್ಯದಲ್ಲಿ ೧೧ ಲಕ್ಷ ಯೋಧರಿದ್ದಾರೆ. ಇವರಿಗೆ ತಿರುಮಲಾದೇವಿ ಪಟ್ಟಣದ ಸುತ್ತ ಸೈನ್ಯ ಪಡೆಗಳಿಗೆ ಗೃಹಗಳನ್ನು ನಿರ್ಮಾಣ ಮಾಡಿದ್ದರು. ಈ ನಗರವನ್ನು ಏಳುಕೋಟೆಗಳು ಆವರಿಸಿವೆ. ಒಂದೊಂದು ಕೋಟೆಯ ಸುತ್ತಿನಲ್ಲೂ ಪಟ್ಟಣಗಳ ಬಗ್ಗೆ ಉಲ್ಲೇಖವಿದೆ. ತಿಮಲಾದೇವಿ ಪಟ್ಟಣವು ಒಂದು ವ್ಯಾಪಾರಕೇಂದ್ರವಾಗಿದ್ದು ಈ ಪಟ್ಟಣದಲ್ಲಿ ಅಂಗಡಿ ಬೀದಿಗಳು ಉದ್ದವಾಗಿಯೂ ಅಗಲವಾಗಿಯೂ ಇದ್ದವು. ಬೀದಿಯಲ್ಲಿ ಗುಲಾಬಿ

ಹೂವಿನವಾಸನೆ ಕಂಡುಬರುತ್ತದೆ. ರತ್ನ ವ್ಯಾಪಾರಿಗಳು ಅಂಗಡಿ ಬೀದಿಗಳಲ್ಲಿ ಬಹಿರಂಗವಾಗಿ ವಜ್ರವೈಡೂರ್ಯಗಳನ್ನು, ಮುತ್ತುಗಳನ್ನು ಮಾರುತ್ತಾರೆ. ರಾಜನನ್ನು ಸ್ವತಃ ಕಂಡ ರಜಾಕ್ ಆತನ ವರ್ಣನೆ ಮಾಡಿದ್ದಾನೆ. ಆಗ ಅರಮನೆಯಲ್ಲಿ ಅರಸನ ಹತ್ಯೆಗಾಗಿ ನಡೆಯಿತೆನ್ನಲಾದ ಘಟನೆಯ ವಿವರಗಳನ್ನು ನೀಡಿದ್ದಾನೆ. ಮಹಾನವಮಿಯಂದು ನಡೆಯುವ ರಾಜನ ದರ್ಬಾರಿನ ವರ್ಣನೆಯಿಂದೆ. ಇಮ್ಮಡಿ ದೇವರಾಯನು ಕ್ರಿ.ಶ ೧೪೪೬ರಲ್ಲಿ ತೀರಿಕೊಳ್ಳುತ್ತಾನೆ (ರಾವ್,೧೯೪೮:೬೪).

ಮಲ್ಲಿಕಾರ್ಜುನ (ಕ್ರಿ.ಶ ೧೪೪೬ - ೬೫)

ಇಮ್ಮಡಿ ದೇವರಾಯನ ಮಗ ಮಲ್ಲಿಕಾರ್ಜುನನು ಅಸಮರ್ಥ ದೊರೆಯಾಗಿದ್ದು ಈತನನ್ನು ಮೂರನೆಯ ದೇವರಾಯ ಮತ್ತು ಮೂರನೆಯ ಪ್ರೌಢದೇವರಾಯ ಎಂದು ಸಹ ಕರೆಯುತ್ತಾರೆ. ಕ್ರಿ.ಶ ೧೪೬೩ರಲ್ಲಿ ಕಪಿಲೇಂದ್ರನ ಮಗ ಹಮ್ಮೀರನು ದಾಳಿ ಮಾಡಿ, ಉದಯಗಿರಿ ಮತ್ತು ಕೊಂಡವೀಡುಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ವಿಜಯನಗರದಲ್ಲಿ ಅರಾಜಕತೆವುಂಟಾಯಿತು. ಮಲ್ಲಿಕಾರ್ಜುನ ತನ್ನ ಸ್ಥಾನಮಾನ ಕಳೆದುಕೊಳ್ಳುತ್ತಾನೆ. ಪ್ರತಾಪದೇವನ ಮಗನಾದ ಮೂರನೆಯ ವಿರೂಪಾಕ್ಷನು ಮಲ್ಲಿಕಾರ್ಜುನನ ಮಗನಾದ ರಾಜಶೇಖರನನ್ನು ಸೋಲಿಸಿ. ತಾನೇ ಸಿಂಹಾಸನವೇರುತ್ತಾನೆ. ಈ ಘಟನೆಯಿಂದ ಅಸಮರ್ಥನಾದ ಮಲ್ಲಿಕಾರ್ಜುನ ದಕ್ಷಿಣದೆಡೆಗೆ ಬಂದು (ಕ್ರಿ.ಶ.೧೪೮೭) ನೆಲೆಸುತ್ತಾನೆ (ರಾಮಕೃಷ್ಣ,೧೯೯೮:೧೨೪).

ಮೂರನೆಯ ವಿರೂಪಾಕ್ಷ (ಕ್ರಿ.ಶ. ೧೪೬೫ - ೮೫)

ಅವ್ಯವಸ್ಥಿತವಾದ ಆಡಳಿತವನ್ನು ಹತೋಟಿಗೆ ತರುವಲ್ಲಿ ಮೂರನೆಯ ವಿರೂಪಾಕ್ಷನು ವಿಫಲನಾಗುತ್ತಾನೆ. ಸಾಮಂತರ ಮೇಲೆ ಅಧಿಕಾರ ಸ್ಥಾಪಿಸುವಲ್ಲಿ ಅಸಹಾಯಕನಾದನು. ಸುಲ್ತಾನ ಮೂರನೆಯ ಮಹಮದ್ ಶಹನ ಪ್ರಧಾನಿ ಮಹಮ್ಮದ್ ಗವಾನನು ದಾಳಿ ಮಾಡಿ ಪಶ್ಚಿಮ ಪ್ರಾಂತ್ಯ ಮತ್ತು ಉತ್ತರಕೊಂಕಣ ಮತ್ತು ಗೋವಾಗಳನ್ನು ವಶಪಡಿಸಿಕೊಳ್ಳುತ್ತಾನೆ. ಗೋವಾ ವಿಜಯನಗರದ ಪ್ರಮುಖ ಬಂದರಾಗಿತ್ತು (ಕಾಮತ್,೧೯೮೭:೨೭).

ಇಂದರಿಂದ ವಿಜಯನಗರದ ವ್ಯಾಪಾರ ವ್ಯವಹಾರಗಳಿಗೆ ಆಘಾತವುಂಟಾಯಿತು. ಸೈನ್ಯಕ್ಕೆ ಬೇಕಾದ ಕುದುರೆಗಳು ವಿದೇಶದಿಂದ ಬರುತ್ತಿದ್ದವು. ಇದು ವಿಜಯನಗರದ ಸೈನ್ಯ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುವಂತಾಯಿತು. ಬೆಳಗಾಂ ಸೇರಿದಂತೆ ಉತ್ತರ ಕರ್ನಾಟಕದ ಬಹುಭಾಗಗಳು ಬಹಮನಿಗಳ ವಶವಾಯಿತು. ಇಲ್ಲಿಗೆ ಸಂಗಮವಂಶದ ಆಳ್ವಿಕೆ ಕೊನೆಗೊಂಡಿತು (ತೆಲಗಾವಿ,೧೯೮೭:೨೮).

ಸಾಳುವ ವಂಶ

ಒಂದನೆಯ ನರಸಿಂಹ (ಕ್ರಿ.ಶ ೧೪೮೫ -೯೧)

ನರಸಿಂಹನಿಂದ ವಿಜಯನಗರ ಎರಡನೆಯ ವಂಶವಾದ ಸಾಳುವರ ಆಳ್ವಿಕೆಯು ಆರಂಭಗೊಂಡಿತು. ಈತನು ರಾಜ್ಯದ ಪದವಿಯನ್ನು ಬಲವಂತವಾಗಿ ಪಡೆಯಬೇಕಾಯಿತು. ಕ್ರಿ.ಶ.೧೪೭೧ರ ವೇಳೆಗೆ ದಕ್ಷಿಣದ ಪ್ರಾಂತ್ಯಗಳಲ್ಲಿ ವಿಜಯನಗರದ ಪರಮಾಧಿಕಾರವನ್ನು ಪುನರ್ ಸ್ಥಾಪಿಸಿದನು. ಕ್ರಿ.ಶ.೧೪೮೦ರಲ್ಲಿ ಕೊಂಡವೀಡು ಕೋಟೆಯನ್ನು ಮತ್ತು ಮಚಲಿಪಟ್ಟಣ ಬಂದರನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಈ ಪ್ರದೇಶದಿಂದ ಬಹಮನಿಗಳನ್ನು ಹೊರದೂಡಿಸುತ್ತಾನೆ.

ಆರು ವರುಷ ನರಸಿಂಹನು ಶಾಂತಿಯುತ ಆಳ್ವಿಕೆಯನ್ನು ಮಾಡಿದನು. ಈತನು ೧೪೯೧ರಲ್ಲಿ ತೀರಿಕೊಂಡನು (ರಾವ್,೧೯೮೩:೪೮).

ಆತನ ಅಪ್ರಾಪ್ತ ವಯಸ್ಸಿನ ಮಕ್ಕಳ ಪ್ರತಿನಿಧಿಯಾಗಿ ತುಳುವ ನರಸನಾಯಕ ಆಡಳಿತ ಸೂತ್ರವನ್ನು ವಹಿಸುತ್ತಾನೆ. ನರಸಿಂಹನ ಹಿರಿಯ ಮಗ ತಿಮ್ಮನನ್ನು ಸಿಂಹಾಸನದ ಮೇಲೆ ಕೂರಿಸಿದನು. ಅನಂತರ ಎರಡನೆಯ ಮಗ ಎರಡನೆಯ ನರಸಿಂಹನು ಸಿಂಹಾಸನಕ್ಕೆ ಬಂದ. ನರಸನಾಯಕನು ತಿಮ್ಮನನ್ನು ಪೆನುಗೊಂಡೆಯಲ್ಲಿ ಬಂಧನದಲ್ಲಿಡುತ್ತಾನೆ.ಇವನು ಕ್ರಿ.ಶ.೧೫೦೩ರಲ್ಲಿ ಮೃತನಾದನು. ನಂತರ ಈತನ ಮಗ ವೀರನರಸಿಂಹ ಅಧಿಕಾರಕ್ಕೆ ಬರುತ್ತಾನೆ.

ಸಾಳುವ ಇಮ್ಮಡಿ ನರಸಿಂಹನು ಅಧಿಕಾರ ಹೊಂದಲು ಪ್ರಯತ್ನಿಸುತ್ತಾನೆ; ಇಲ್ಲಿಗೆ ವಿಜಯನಗರವನ್ನಾಳಿದ ಸಾಳುವ ಮನೆತನ ಕೊನೆಗೊಂಡು ತುಳುವ ಮನೆತನದ ಆಳ್ವಿಕೆ ಆರಂಭವಾಗುತ್ತದೆ (ರಾಮಕೃಷ್ಣ,೨೦೦೧:೧೨೬).

ತುಳುವ ವಂಶ

ತುಳುವರು ತಮ್ಮ ವಂಶ ಯಾದವ ಮೂಲದ್ದೆಂದು ಹೇಳಿಕೊಂಡಿದ್ದಾರೆ. ಈ ಕುಟುಂಬದ ಮೂಲ ಪುರುಷ ಈಶ್ವರನಾಯಕ ಎಂದು ತಿಳಿಯಲಾಗಿದೆ. ಈತನ ಮಗನೇ ನರಸನಾಯಕ. ನಂತರ ಬಂದವನು ವೀರನರಸಿಂಹ. ಈತನು ಕ್ರಿ.ಶ. ೧೫೦೩ರಿಂದ ೧೫೦೯ರವರೆಗೆ ವಿಜಯನಗರದ ರಾಜನಾಗಿ ಆಡಳಿತ ನಡೆಸಿದನು. ನಂತರ ತುಳುವ ವಂಶದ ಸ್ಥಾಪಕನಾಗಿಯೂ ಮತ್ತು ಮೊದಲ ಅರಸನಾಗಿಯೂ ೧೫೦೫ ರಲ್ಲಿ ಸಿಂಹಾಸನವೇರುತ್ತಾನೆ.

ವೀರನರಸಿಂಹ (ಕ್ರಿ.ಶ. ೧೫೦೫ - ೧೫೦೯)

ವೀರನರಸಿಂಹನು ಸುಮಾರು ಐದು ವರ್ಷಗಳ ಕಾಲ ರಾಜ್ಯಭಾರ ಮಾಡುತ್ತಾನೆ. ಅಲ್ಲಲ್ಲಿ ದಂಗೆಯೆದ್ದವರನ್ನು ಅಡಗಿಸುವುದರಲ್ಲಿ ಹೆಚ್ಚಿನ ಸಮಯ ಕಳೆದನು. ಈತನು ಬಹಮನಿಯ ಮುಸೆಫ್ ಆದಿಲ್‌ಖಾನನೊಡನೆ ಹೋರಾಡಿ ರಾಯಚೂರು ಮತ್ತು ಮುದಗಲ್ಲುಗಳನ್ನು ವಶಪಡಿಸಿಕೊಂಡನು. ನಂತರ ತುಳುನಾಡು ಮತ್ತು ಪಶ್ಚಿಮತೀರದ ಬಂದರುಗಳನ್ನು ಸಹ ವಶಪಡಿಸಿಕೊಂಡನು. ಉತ್ತಮವಾದ ಕುದುರೆಗಳನ್ನು ತರಿಸಿ, ಒಳ್ಳೆಯ ತರಬೇತಿ ಹೊಂದಿದ ಮತ್ತು ದಕ್ಷತೆಯಿಂದ ಕೂಡಿದ ಸೈನ್ಯವನ್ನು ನಿರ್ಮಿಸಿ ಪೋರ್ಚುಗೀಸರೊಡನೆ ಉತ್ತಮ ಸ್ನೇಹ ಸಂಬಂಧವಿರಿಸಿಕೊಂಡನು. ಕೃಷಿ ಮತ್ತು ರೈತರ ಕಡೆಗೆ ಗಮನ ನೀಡಿದನು ಇವನು ಮದುವೆ ಮೇಲಿನ ತೆರಿಗೆಯನ್ನು ರದ್ದುಮಾಡುತ್ತಾನೆ (ರಾವ್,೧೯೪೮:೧೨೭).

ಕೃಷ್ಣದೇವರಾಯ (ಕ್ರಿ.ಶ. ೧೫೧೦ - ೨೯)

ವೀರನರಸಿಂಹನ ಮರಣಾನಂತರ ಮಲಸಹೋದರನಾದ ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವೇರುತ್ತಾನೆ. ಇವನು ವಿಜಯನಗರದ ಅರಸರಲ್ಲಿ ಅತ್ಯಂತ ಶ್ರೇಷ್ಠ ಮತ್ತು ಭಾರತದ ಇತಿಹಾಸದಲ್ಲಿ ಪ್ರಸಿದ್ಧನಾದವನು. ಈತನು ಸುಮಾರು ೨೦ ವರ್ಷ ಆಳಿದರೂ ಸಾಮ್ರಾಜ್ಯದ ಕೀರ್ತಿಯನ್ನು ಉತ್ತುಂಗ ಶಿಖರಕ್ಕೇರಿಸಿದನು. ಈ ಮೊದಲು ಕೃಷ್ಣದೇವರಾಯನು ಕ್ರಿ.ಶ. ೧೫೦೯ರ ಆಗಸ್ಟ್ ೮ರ ಕೃಷ್ಣಜಯಂತಿಯಂದು ಸಿಂಹಾಸನವೇರಿದನೆಂದು ತಿಳಿಯಲಾಗುತ್ತದೆ.

ಇತ್ತೀಚೆಗೆ ಬೆಳಕಿಗೆ ಬಂದ ಸಿಂಗನಾಯಕನಳ್ಳಿ ಶಾಸನವು ಕ್ರಿ.ಶ. ೧೫೧೦, ಜನವರಿ ೨೪ರಲ್ಲಿ ಪಟ್ಟಾಭಿಷೇಕವಾಯಿತೆಂದು ತಿಳಿಸುತ್ತದೆ (ದೀಕ್ಷಿತ್,೧೯೯೭:೬೦).

ಕೃಷ್ಣದೇವರಾಯನು ಮೊದಲಿಗೆ ಸೈನ್ಯವನ್ನು ಬಲಗೊಳಿಸುತ್ತಾನೆ. ಸಾಮ್ರಾಜ್ಯದಲ್ಲೆಡೆ ಕೆಲವು ತೆರಿಗೆಗಳನ್ನು ಮನ್ನಾ ಮಾಡುತ್ತಾನೆ. ಈತನು ಸಾಮ್ರಾಜ್ಯದ ಒಳಗೆ ಮತ್ತು ಹೊರಗೆ ಶತ್ರುಗಳ ವಿರೋಧವನ್ನು ಎದುರಿಸಬೇಕಾಯಿತು.

ಈತನ ಸೈನ್ಯವು ಒರಿಸ್ಸಾದ ಕಟಕನ್ನು ತಲುಪಿ ಗಜಪತಿ ಪ್ರತಾಪರುದ್ರನನ್ನು ಸೋಲಿಸಿತು. ಅವನು ತನ್ನ ಮಗಳಾದ ಜಗನ್ಮೋಹಿನಿಯನ್ನು ಕೃಷ್ಣದೇವರಾಯನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇದರ ಫಲವಾಗಿ ಕೃಷ್ಣಾನದಿಯ ಉತ್ತರದ ಪ್ರಾಂತ್ಯದವನ್ನೆಲ್ಲಾ ಗಜಪತಿಗೆ ವಹಿಸಿದನು.

ರಾಯಚೂರು ಮತ್ತು ಮುದಗಲ್ ಕೋಟೆಗಳು ಬಿಜಾಪುರದ ಸುಲ್ತಾನದ ವಶದಲ್ಲಿತ್ತು ಇದನ್ನು ಪಡೆಯಲು ಕ್ರಿ.ಶ. ೧೫೨೦ರಲ್ಲಿ ಇಸ್ಮಾಯಿಲ್ ಆದಿಲ್ ಷಾ ಮತ್ತು ಕೃಷ್ಣದೇವರಾಯನಿಗೂ ಭೀಕರ ಯುದ್ಧ

ನಡೆಯಿತು. ಸೋತ ಸುಲ್ತಾನನು ರಣರಂಗದಿಂದ ಓಡಿಹೋದನು. ಅಂತಿಮವಾಗಿ ರಾಯನು ಕೋಟೆಗಳನ್ನು ವಶಪಡಿಸಿಕೊಂಡನು.

ಕೃಷ್ಣದೇವರಾಯನ ಇಬ್ಬರು ಪ್ರಮುಖ ರಾಣಿಯರು ಚಿನ್ನಾದೇವಿ ಮತ್ತು ತಿರುಮಲಾದೇವಿ, ಒಬ್ಬ ತಿರುಮಲರಾಯ ತಿರುಮಲಾಂಬ ಮತ್ತು ವೆಂಗಲಾಂಬ ಇಬ್ಬರು ಹೆಣ್ಣುಮಕ್ಕಳನ್ನು ಅರವೀಡು ಮನೆತನದ ರಾಮರಾಯನನ್ನು ಮತ್ತು ಆತನ ಸಹೋದರ ತಿರುಮಲನನ್ನ ಮದುವೆ ಮಾಡಿದ್ದನು (ರಾಮಕೃಷ್ಣ, ೨೦೦೧ :೨೪೮).

ಈತನ ಕಾಲದಲ್ಲಿ ಭೇಟಿ ನೀಡಿದ ಪ್ರವಾಸಿಗಳಾದ ಪೋರ್ಚುಗೀಸ ಬಾರ್ಬೋಸ್ ಮತ್ತು ಡೊಂಮಿಂಗೊ ಪಾಯಸ್ ಅವರ ಬರವಣಿಗೆಗಳು ಅಮೂಲ್ಯವಾದವು. ಪಾಯಸ್ ಕೃಷ್ಣದೇವರಾಯನನ್ನು ಕುರಿತು ವರ್ಣನೆ ಮಾಡುತ್ತಾನೆ.

ಈತನು ಕನ್ನಡ, ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಸ್ವತಃ ವಿದ್ವಾಂಸನಾಗಿದ್ದು "ಅಮುಕ್ತಮಾಲ್ಯದಾ" ಎಂಬ ಸಾಹಿತ್ಯ ಕೃತಿಯನ್ನು ರಚಿಸಿದನು. ಇವನ ಆಸ್ಥಾನದಲ್ಲಿ ಎಂಟು ಜನ ಪ್ರಸಿದ್ಧ ತೆಲುಗು ವಿದ್ವಾಂಸರಿದ್ದರು. ಕನ್ನಡದ ಕವಿ ತಿಮ್ಮಣನು ಕುಮಾರ ವ್ಯಾಸನ ಭಾರತವನ್ನು ಪೂರ್ಣಗೊಳಿಸಿ ರಾಜನಿಗೆ ಅರ್ಪಿಸಿದನು. ಇದನ್ನು ಕರ್ನಾಟಕ ಕೃಷ್ಣದೇವರಾಯ ಭಾರತ ಕಥಾಮಂಜರಿ ಎಂಬ ಹೆಸರಿನಿಂದ ಕರೆಯಲಾಯಿತು. ಈ ಕಾಲದಲ್ಲಿ ಪ್ರಸಿದ್ಧ ಯತಿಗಳಾದ ವ್ಯಾಸ ತೀರ್ಥರು ಮತ್ತು ಅವರ ಶಿಷ್ಯರಾದ ಪುರಂದರದಾಸರು ಇದ್ದರು (ಶ್ರೀಕಂಠಯ್ಯ, ೧೯೭೮:೧೮).

ರಾಯನು ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಟ್ಟು ಕೆರೆಕಟ್ಟೆಗಳನ್ನು ನಾಲೆಗಳನ್ನು ನಿರ್ಮಿಸಿದನು. ತನ್ನ ತಾಯಿಯ ಹೆಸರಿನಲ್ಲಿ ನಾಗಲಾಪುರವನ್ನು (ನಾಗೇನಹಳ್ಳಿ) ದೇವಾಲಯವನ್ನು, ಕೆರೆಯನ್ನು ಮತ್ತು ಹೆಂಡತಿಯ ನೆನಪಿಗಾಗಿ ತಿರುಮಲದೇವಿಯರ ಪಟ್ಟಣವನ್ನು (ಇಂದಿನ ಹೊಸಪೇಟೆ) ನಿರ್ಮಿಸಿದನು. ವಿರೂಪಾಕ್ಷದೇವಾಲಯದ ರಂಗ ಮಂಟಪ ಮತ್ತು ಗೋಪುರವನ್ನು ತನ್ನ ಪಟ್ಟಾಭಿಷೇಕದ ಸಮಯದಲ್ಲಿ ಕಟ್ಟಿಸಿದನು. ಕ್ರಿ.ಶ.೧೫೧೩ರಲ್ಲಿ ಕೃಷ್ಣದೇವಾಲಯ ಕಟ್ಟಿಸಿ, ಉದಯಗಿರಿಯಿಂದ ತಂದ ಕೃಷ್ಣದೇವರನ್ನು ಅಲ್ಲಿ ಪ್ರತಿಷ್ಠಾಪಿಸಿದನು. ಈತನ ಉತ್ಸಾಹದಿಂದ ಮಂಟಪಗಳು ನಿರ್ಮಾಣಗೊಂಡವು. ಪ್ರಸಿದ್ಧ ಲಕ್ಷ್ಮಿನರಸಿಂಹನ ಅಖಂಡ ಶಿಲಾವಿಗ್ರಹವು ಈತನ ಕಾಲದಲ್ಲಿ ಪ್ರತಿಷ್ಠಾಪನಗೊಂಡಿತು. ಈ ಕಾಲದಲ್ಲಿ ನಿರ್ಮಿತಗೊಂಡ ಮಹಾಗೋಪುರಗಳು ರಾಯಗೋಪುರಗಳೆಂದೇ ಹೆಸರು ಪಡೆದವು. (ಮಹದೇವ,೨೦೦೨ :೯೧). ಕೃಷ್ಣದೇವರಾಯನು ಸಮರ್ಥ ದೊರೆಯಾಗಿದ್ದು ಹೊಸಪೇಟೆಯ ನಿರ್ಮಾಣಕ್ಕೆ ಕಾರಣನಾದನು.

ಕನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಈತನ ಮೊದಲೆ ಇದ್ದ ಗ್ರಾಮಕ್ಕೆ ತನ್ನ ಹಂಡತಿಯ ಹೆಸರನ್ನು ಇಟ್ಟು ಒಂದು ಆಯಾಮವನ್ನು ನೀಡಿದನು. ತಿರುಮಲದೇವಿ ಪಟ್ಟಣವು, ವಿಜಯನಗರದ ಉಪನಗರವಾಗಿತ್ತು. ಈತನ ಕಾಲದಲ್ಲಿ ಇದು ಒಂದು ವ್ಯಾಪಾರ ಕೇಂದ್ರವಾಗಿತ್ತು.

ಅಚ್ಯುತರಾಯ (ಕ್ರಿ.ಶ. ೧೫೨೯-೪೨)

ನಂತರ ಪಟ್ಟಕ್ಕೆ ಬಂದ ಅಚ್ಯುತರಾಯನು ದಾಯಾದಿಗಳ ವಿರೋಧವನ್ನು ಎದುರಿಸಬೇಕಾಯಿತು. ಈತನು ಬಿಜಾಪುರದ ಇಸ್ಮಾಯಿಲ್ ಮೇಲೆ ಎರಡು ಬಾರಿ ದಾಳಿ ಮಾಡಿದನು. ರಾಯಚೂರು, ಮುದಗಲ್ ಕೋಟೆಗಳನ್ನು ವಶಪಡಿಸಿಕೊಂಡನು. ಎರಡನೆಯ ಬಾರಿ ನಾಗಲಾಪುರವನ್ನು ಲೂಟಿ ಮಾಡಿದನೆಂದು ತಿಳಿದು ಬರುತ್ತದೆ (ಸಿವೆಲ್,೨೦೦೬:೧೦೫).

ಕ್ರಿ.ಶ ೧೫೪೨ರಲ್ಲಿ ಅಚ್ಯುತರಾಯನು ಮರಣ ಹೊಂದಿದ ಮೇಲೆ, ಆತನ ಮಗ ಬಾಲಕನಾದ ಒಂದನೆಯ ವೆಂಕಟ ಅಧಿಕಾರ ವಹಿಸಿದನು. ನಂತರ ತಿರುಮಲ ಒಂದನೆಯ ವೆಂಕಟನನ್ನು ಮತ್ತು ಕುಟುಂಬದವರನ್ನು ಕೊಲೆ ಮಾಡಿಸಿದನು. ರಾಮರಾಯನು ಸದಾಶಿವರಾಯನ ಹೆಸರಿನಲ್ಲಿ ರಾಜ್ಯವನ್ನು ಆಕ್ರಮಿಸಿ ಯುದ್ಧದಲ್ಲಿ ತಿರುಮಲನನ್ನು ಕೊಂದನು (ಕಾಮತ್,೧೯೮೭: ೮೫).

ರಾಮರಾಯ (ಕ್ರಿ.ಶ. ೧೫೪೩-೬೫)

129782

ರಾಮರಾಯನು ಅರವೀಡು ವಂಶಕ್ಕೆ ಸೇರಿದವನು. ಕರ್ನೂಲು ಜಿಲ್ಲೆಯ ಅರವೀಡು ಎಂಬ ಗ್ರಾಮದಿಂದ ಬಂದ ಇವರು ತಮ್ಮ ಊರಿನ ಹೆಸರನ್ನೇ ವಂಶಕ್ಕೂ ಬಳಸಿದರು.

ಕೃಷ್ಣದೇವರಾಯನ ಅಳಿಯನಾದ ಈತನು ಅಳಿಯ ರಾಮರಾಯನೆಂದು ಪ್ರಸಿದ್ಧನಾದ. ರಾಮರಾಯನು ಕ್ರಿ.ಶ ೧೫೫೧ರಿಂದ ಎಲ್ಲ ಅಧಿಕಾರವನ್ನು ಹೊಂದಿ ೧೫ ವರ್ಷಗಳ ಕಾಲ ವಿಜಯನಗರ ಸಾಮ್ರಾಜ್ಯವನ್ನು ಆಳಿದನು. ಈತನ ಕಾಲದಲ್ಲಿ ಅನೇಕ ಮುಸ್ಲಿಮರನ್ನು ಸೈನ್ಯದ ಉನ್ನತ ಹುದ್ದೆಗಳಿಗೆ ನೇಮಿಸಲಾಯಿತು.

ದಖನ್ನಿನ ಮುಸ್ಲಿಂ ರಾಜ್ಯಗಳ ನಡುವೆ ಕಲಹವನ್ನುಂಟು ಮಾಡಿ ಲಾಭವನ್ನು ಪಡೆಯಲು ಮುಂದಾದನು. ಈತನು ದಕ್ಷಿಣದ ತಿರುಪತಿ ಮೇಲೆ ದಂಡಯಾತ್ರೆ ಕೈಗೊಂಡನು ಈ ದಂಡಯಾತ್ರೆಯು ಅನಂತಶಯನ (ತಿರುವನಂತಪುರ)ದಲ್ಲಿ ಪ್ರಾರಂಭಗೊಂಡು ಉತ್ತರದ ಮುದಗಲ್ಲಿನಲ್ಲಿ ಕೊನೆಗೊಂಡಿತು. ಪೋರ್ಚುಗೀಸರಿಗೂ ಮತ್ತು ವಿಜಯನಗರದ ಅರಸರಿಗೂ ಆಗಾಗ್ಗೆ ಮನಸ್ತಾಪ ಮತ್ತು ಸ್ನೇಹಗಳು ಉಂಟಾಗುತ್ತಿದ್ದವು. ಕ್ರಿ.ಶ. ೧೫೪೭ರ ವೇಳೆಗೆ ಈ ಸಂಬಂಧ ಸುಧಾರಿಸಿತು. (ಕೃಷ್ಣರಾವ್, ೧೯೭೦ :

[illegible]

೧೮೬) ರಾಮರಾಯನು ಕೃಷ್ಣದೇವರಾಯನ ನಂತರ ಶತ್ರುಗಳ ವಶವಾಗಿದ್ದ ಅನೇಕ ಕೋಟೆಗಳನ್ನು ಪುನಃ ವಶಪಡಿಸಿಕೊಂಡನು. ಅಲ್ಲದೆ ಯಾದಗಿರಿ ಮುಂತಾದ ಪ್ರಮುಖ ಕೋಟೆಗಳನ್ನು ಹಿಡಿದು ಸಾಮ್ರಾಜ್ಯವನ್ನು ವಿಸ್ತರಿಸಿದನು. ಇವನ ಆಕ್ರಮಣ ನೀತಿ ಹೊಸದಾಗಿತ್ತು. ಇಂತಹ ನೀತಿ ಶತ್ರುಗಳ ಕಣ್ಣು ತೆರೆಯಿಸಿತು. ನಾಲ್ವರು ಸುಲ್ತಾನರು (ಅಹಮದನಗರ, ಬಿಜಾಪುರ, ಬೀದರ್ ಮತ್ತು ಗೋಲ್ಗೊಂಡ) ತಮ್ಮ ನಿಜ ಪರಿಸ್ಥಿಯನ್ನು ಅರಿತು ಎಲ್ಲರೂ ಕೂಡಿಕೊಂಡು ತಾಳಿಕೋಟೆ ಸಮೀಪದ ರಕ್ಕಸಗಿ - ತಂಗಡಗಿ ಎಂಬ ಎರಡು ಗ್ರಾಮಗಳ ನಡುವಿನ ಬಯಲಿನಲ್ಲಿ ವಿಜಯನಗರದ ಸೈನ್ಯವನ್ನು ಎದುರಿಸಿತು. ಕ್ರಿ.ಶ ೧೫೬೫ ಜನವರಿ ೨೩ರಂದು ನಡೆದ ಬೀಕರ ಕದನದಲ್ಲಿ ರಾಮರಾಯನ ತಲೆಯನ್ನು ಹುಸೇನ್ ನಿಜಾಮ್ ಷಾ ಕತ್ತರಿಸಿ ನಂತರ ಉದ್ದವಾದ ಭರ್ಜಿಗೆ ಸಿಕ್ಕಿಸಿ ರಣರಂಗದಲ್ಲಿ ಪ್ರದರ್ಶಿಸಿದನು. ವಿಜಯನಗರದ ಸೈನ್ಯವು ಹಿಮ್ಮೆಟ್ಟಿತು. ತಿರುಮಲನು ತೀವ್ರವಾಗಿ ರಾಜಧಾನಿ ವಿಜಯನಗರಕ್ಕೆ ಹಿಂದಿರುಗಿ ಬಂದು ಅರಮನೆಯ ಸ್ತ್ರೀಯರನ್ನು, ಸಂಬಂಧಿಕರನ್ನು ಮತ್ತು ಸಾಧ್ಯವಿದ್ದಷ್ಟು ಸಂಪತ್ತನ್ನು ಸುಮಾರು ೧೫೫೦ ಆನೆಗಳ ಮೇಲೆ ಹೇರಿಸಿ ಚಂದ್ರಗಿರಿಗೆ ಸಾಗಿಸಿದನು.

ವಿಜಯನಗರ ಪ್ರವೇಶಿಸಿದ ಶತ್ರು ಸೇನೆಯ ಸುಮಾರು ಐದು ತಿಂಗಳ ಕಾಲ ನಿರಂತರವಾಗಿ ಲೂಟಿ ಮಾಡಿ, ವ್ಯಾಪಾರಕೇಂದ್ರವಾಗಿದ್ದ ತಿರುಮಲಾದೇವಿ ಪಟ್ಟಣ ಸೇರಿದಂತೆ ಸಂಪೂರ್ಣ ಭಾಗವನ್ನು ನಾಶಮಾಡಿ ಜನರು ವಲಸೆ ಹೋಗುವಂತೆ ಮಾಡಿದರು. ಇದರಿಂದ ತಿರುಮಲಾದೇವಿ ಪಟ್ಟಣ್ಣದ ಊರು ಕಣ್ಮರೆಯಾಯಿತು. ವಿಶ್ವದ ಇತಿಹಾಸದಲ್ಲಿ ಇಂತಹ ಅತ್ಯಾಚಾರ ಬೇರೆಲ್ಲೂ ನಡೆದಿಲ್ಲವೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ (ಸಿವೆಲ್,೨೦೦೬:೨೦೩).

ಈ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯವು ಕಣ್ಮರೆಯಾಯಿತು. ಇಲ್ಲಿಗೆ ಬಳ್ಳಾರಿ ಪ್ರದೇಶದ ಹೊಸಪೇಟೆ ಪರಿಸರದಲ್ಲಿ ವಿಜಯನಗರದರಸರ ಆಳ್ವಿಕೆಯು ಅಂತ್ಯಗೊಂಡಿತು. ಈ ರೀತಿ ವಿಜಯನಗರ ಹಾಳುಹಂಪೆ ಎನಿಸಿಕೊಂಡಿತು. ನಂತರ ಪಾಳೆಯಗಾರರು ತಲೆ ಎತ್ತಿದರು.

ಈ ರೀತಿ ಹೊಸಪೇಟೆ ಪರಿಸರದಲ್ಲಿ ಮಧ್ಯಕಾಲೀನ ಯುಗದಲ್ಲಿ ೪ ವಂಶಗಳು ಆಳ್ವಿಕೆ ನಡೆಸಿದ್ದು. ಅನೇಕ ರಾಜರು ವಿಜಯನಗರವನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಿದರು. ಈ ರಾಜರು ಮಧ್ಯಕಾಲೀನದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದು ಕಂಡುಬರುತ್ತದೆ.

ತಿರುಮಲಾದೇವಿ ಪಟ್ಟಣದ ಆಡಳಿತ

ವಿಜಯನಗರ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವವಿದ್ದು ಕೇಂದ್ರೀಯ ಆಡಳಿತ ರಾಜನಲ್ಲಿತ್ತು. ಇದಕ್ಕೆ ಅಧೀನ ರಾಜರು, ಜನಸಾಮಾನ್ಯರ ಮುಖಂಡರು ಹಾಜರಿದ್ದು, ಕಪ್ಪಕಾಣಿಕೆಗಳನ್ನು ಸಲ್ಲಿಸಿ ತಮ್ಮ ನಿಷ್ಠೆ ತೋರುತ್ತಿದ್ದರು. ರಾಜತ್ವವು ಧರ್ಮದ ಆಳ್ವಿಕೆ ಒಳಪಟ್ಟಿತ್ತು. ಕೃಷ್ಣದೇವರಾಯನು ತನ್ನ ''ಅಮುಕ್ತ ಮೂಲ್ಯದ''ದಲ್ಲಿ ರಾಜನು ರಾಜತಂತ್ರದಲ್ಲಿ ನಿಪುಣರಾದವರ ಮೂಲಕ ಆಳಬೇಕು. ಪ್ರಜೆಗಳ ಮೇಲೆ ತೆರಿಗೆ ಸಾಧಾರಣವಾಗಿರಬೇಕು. ಶತ್ರುಗಳನ್ನು ಬಲ ಪ್ರಯೋಗದಿಂದ ಅಡಗಿಸಬೇಕು ಎಂದು ತಿಳಿಸುತ್ತಾನೆ (ಶ್ರೀಕಂಠಯ್ಯ,೧೯೮೨:೨೨).

ಗ್ರಾಮಗಳ ಆಡಳಿತ

ಗ್ರಾಮವು ಪ್ರಾಂತ್ಯ ವ್ಯವಸ್ಥೆಯ ಏಕಾಂಶವಾಗಿತ್ತು. ಪ್ರತಿ ಗ್ರಾಮವೂ ಒಂದು ಆಡಳಿತ ಭಾಗವಾಗಿತ್ತು ಪ್ರತಿಗ್ರಾಮದಲ್ಲೂ ಒಂದು ಅಥವಾ ಹೆಚ್ಚಿನ ಪಾಳೆಯಗಳಿದ್ದವು. ಹಲವು ಗ್ರಾಮಗಳನ್ನು ಸೇರಿಸಿ ಸ್ಥಳ ಎಂದು ಕರೆಯಲಾಗುತಿತ್ತು ಹಲವು ಸ್ಥಳಗಳನ್ನು ಒಟ್ಟುಗೂಡಿಸಿ ಸೀಮೆ ಅಥವಾ ನಾಡು ಎಂದು ಕರೆಯಲಾಗುತಿತ್ತು.

ಗ್ರಾಮಗಳಲ್ಲಿ ವಿದ್ಯೆಗಳ ಅಧ್ಯಯನ ಹೆಚ್ಚಿನ ಪ್ರಾಧ್ಯಾನತೆ ನೀಡಿದ್ದಾರೆ. ಡಾ ಮಹಾಲಿಂಗಂ ಅಭಿಪ್ರಾಯ ಪಟ್ಟಿದ್ದಾರೆ (ವೆಂಕಟರತ್ನಂ,೧೯೭೪:೨೨).

ಉಪನಗರ ಆಡಳಿತ

ಗ್ರಾಮ ಎಂಬ ಪದವನ್ನು ಹಳ್ಳಿಗಳನ್ನು ಸೂಚಿಸಲು ಬರೆಯುತ್ತಿದ್ದರು. ಪುರ, ನಗರ, ಮತ್ತು ಪಟ್ಟಣಗಳೆಂಬ ಪದಗಳು ನಗರ ಅಥವಾ ಪಟ್ಟಣವನ್ನು ಸೂಚಿಸುತ್ತಿದ್ದಿತು. ಪಟ್ಟಣದಲ್ಲಿ ಜನಸಂಖ್ಯೆಯು ಹೆಚ್ಚಾಗಿತ್ತು. ಗ್ರಾಮಗಳಿಗಿಂತ ಪಟ್ಟಣಗಳಲ್ಲಿ ಜೀವನ ಸೌಕರ್ಯಗಳು ಹೆಚ್ಚಾಗಿದ್ದವು ವಿಜಯನಗರಕ್ಕೆ ಭೇಟಿ ಕೊಟ್ಟ ಮತ್ತೊಬ್ಬ ಪೋರ್ಚುಗೀಸ್ ಪ್ರಯಾಣಿಕ ನ್ಯೂನಿಜ್ ಹೊಸಪೇಟೆಯ ವಿಚಾರ ಬರೆದಿದ್ದಾನೆ.

ಕೃಷ್ಣದೇವರಾಯನು ಅಲ್ಲಿ ಕಲ್ಲು ಕಟ್ಟಡದ ಮನೆಗಳುಳ್ಳ ಬಹಳ ಉದ್ದವಾದ ರಸ್ತೆಯನ್ನು ಮಾಡಿಸಿದ್ದನೆಂದು, ಅದರ ಉದ್ದ ೪೭೦೦ ಮತ್ತು ಅಗಲ ೪೦ ಹೆಜ್ಜೆಗಳಿದ್ದುವೆಂದು ತಿಳಿಸುತ್ತಾನೆ. ಅಲ್ಲದೆ ಅದು ನೋಡಲು ಅತ್ಯಂತ ಸುಂದರವಾದ ಬೀದಿಯಾಗಿದ್ದಿತು (ಸಿವೆಲ್,೨೦೦೬:೧೦೬).

ಸಾಲುಸಾಲಾಗಿ ಅನೇಕ ಮನೆಗಳು ಮತ್ತು ಬೀದಿಗಳಿದ್ದವೆಂದು ತಿಳಿಸುತ್ತಾನೆ. ವಿಜಯನಗರಕ್ಕೆ ಹೇರಳವಾದ ನೀರು ಸರಬರಾಜಿದ್ದಿತು. ತುಂಗಭದ್ರಾ ನದಿಯಿಂದೆ ಹಂಪೆಗೆ ನೀರು ಸರಬರಾಜು ಮಾಡಲು

ನಾಲೆಗಳನ್ನು ನಿರ್ಮಾಣ ಮಾಡುತ್ತಿದ್ದರು. ಅಲ್ಲದೇ ಪಟ್ಟಣ ವ್ಯಾಪಾರ ಕೇಂದ್ರವಾಗಿತ್ತು. ವಿಜಯನಗರ ರಾಜಧಾನಿಯು ಏಳು ಕೋಟೆಗಳಿಂದ ಆವರಿಸಿಕೊಂಡಿತು. ರಾಜನು ರಾಜಧಾನಿಯಲ್ಲಿ ಇರುತ್ತಿದ್ದು ಕಂಡುಬರುತ್ತದೆ ಎಂದು ಶಾಯಸ್ ಹೇಳುತ್ತಾನೆ. ವಿಜಯನಗರದಲಲಿ ಅನೇಕ ಉಪನಗರಗಳಿದ್ದವು.[೩] ಪ್ರತಿಯೊಂದು ಉಪನಗರಕ್ಕೂ ಒಂದೊಂದು ದೇವಾಲಯವನ್ನು ನಿರ್ಮಿಸುತ್ತಿದ್ದರು. ಈ ದೇವಾಲಯದ ಮುಂದೆ ಪೇಟೆ ಬೀದಿಯನ್ನು ಹೊಂದಿರುತ್ತಿದ್ದು ಕಂಡುಬರುತ್ತದೆ.

ಕೃಷ್ಣದೇವರಾಯನ ಮಗ ತಿರುಮಲನ ಹೆಸರಿನಲ್ಲಿ ತಿರುಮಲಾಪುರವೆಂಬ ಉಪನಗರವಿದ್ದು ಅಲ್ಲಿ ಸೊಗಸಾದ ವಿಠಲ ದೇವಾಲಯವಿದ್ದಿತು.

ಈಗಿನ ಹೊಸಪೇಟೆಯಲ್ಲಿ ಕೃಷ್ಣದೇವರಾಯ ಕಟ್ಟಿದ ಎರಡು ಉಪನಗರಗಳಿವೆ. ಒಂದು ತನ್ನ ಪತ್ನಿಯ ಗೌರವಾರ್ಥವಾಗಿ ಕಟ್ಟಿದ ತಿರುಮಲದೇವಿಯರ ಪಟ್ಟಣ ಮತ್ತೊಂದು ತನ್ನ ತಾಯಿಯನ್ನು ಗೌರವಿಸಲು ಕಟ್ಟಿದ ನಾಗಲಾಪುರ. ಈ ರೀತಿ ಕೃಷ್ಣದೇವರಾಯನ ಕಾಲದಿಂದ ತಿರುಮಲ ದೇವಿಯರ ಪಟ್ಟಣ ಒಂದು ಉಪನಗರವಾಗಿ ಕಾರ್ಯ ನಿರ್ವಹಿಸಿತು (ವಾಸುದೇವನ್,೨೦೦೬:೨೦೦).

ಈ ಉಪನಗರಗಳನ್ನು ೩ ವಲಯಗಳಲ್ಲಿ ವಿಂಗಡಿಸಿದ್ದರು.

೧. ಕೇಂದ್ರವಲಯ.

೨. ವ್ಯವಸಾಯ ಅಥವಾ ಕೃಷಿವಲಯ.

೩. ಹೊರ ವಲಯ.

ರಾಜಧಾನಿಯಲ್ಲಿ ಅರಮನೆ ರಾಜರು, ವಾಸಸ್ಥಾನ ಅಧಿಕಾರಿಗಳು, ಮಂತ್ರಿಗಳು, ಪ್ರಮುಖರು ವಾಸಿಸುವ ಸ್ಥಳವನ್ನು ಕೇಂದ್ರ ವಲಯವೆಂದು ಗುರುತಿಸಲಾಗಿದೆ. ಕೇಂದ್ರ ವಲಯಕ್ಕೆ ಸೇರುವ ಉಪನಗರಗಳು ೧. ಅಚ್ಚುತಾಪುರ ೨. ಕೃಷ್ಣಾಪುರ ೩. ವಿಠ್ಠಲಾಪುರ ೪. ವಿಜಯನಗರ ಪಟ್ಟಣ ಹಂಪೆ ಈ ಉಪನಗರಗಳು ರಾಜಧಾನಿಯ ಒಳಗಿವೆ. ಆದರೆ ಕೆಲವು ಉಪನಗರಗಳಾದ ತಿರುಮಲದೇವಿ ಪಟ್ಟಣ, ನಾಗಲಾಪುರ, ತಿರುಮಲರಾಯ ಪಟ್ಟಣ, ವರದರಾಜಮ್ಮನ ಪಟ್ಟಣ, ರಾಜಧಾನಿ ಪಟ್ಟಣದ ಹೊರವಲಯಗಳಾಗಿವೆ.

ಎರಡನೆಯ ವಲಯದಲ್ಲಿ ಕಾಮಲಾಪುರ, ಮಲಪನಗುಡಿ, ವರದರಾಜಮ್ಮನ ಪಟ್ಟಣ, ಇವು ವ್ಯವಸಾಯ ಉತ್ಪನ್ನಗಳನ್ನು ಉತ್ಪಾದಿಸುವ ಕ್ಷೇತ್ರವಾಗಿರುವುದು ಸ್ಪಷ್ಟವಾಗಿದೆ. ಇಲ್ಲಿ ಉತ್ಪನ್ನವಾಗುವ ಕೃಷಿ ಪದಾರ್ಥಗಳು ಬಹುತೇಕ ವಿಜಯನಗರ ಪಟ್ಟಣದ ಅಗತ್ಯಗಳನ್ನು ಪೂರೈಸುತ್ತಿದ್ದುದು ಕಂಡುಬರುತ್ತದೆ.

[illegible]

ಉಪನಗರಗಳಲ್ಲಿ ತುಂಗಭದ್ರಾ ನದಿಯ ಕೆಲವು ಮುಖ್ಯಕಾಲುವೆಗಳು ಹಾದು ಹೋಗುತ್ತವೆ. ಇವು ವ್ಯವಸಾಯಕ್ಕೆ ಮತ್ತು ಕುಡಿಯುವುದಕ್ಕೆ ಸಹ ನೀರನ್ನು ಪೂರೈಸುತ್ತಿದ್ದವು.

ಮೂರನೇ ವಲಯಕ್ಕೆ ತಿಮ್ಮಲಾಪುರ, ದರೋಜಿ, ಮುಂತಾದ ಪ್ರದೇಶಗಳು ಈ ವಲಯ ವ್ಯಾಪ್ತಿಗೆ ಬರುತ್ತದೆ. ಈ ಪ್ರದೇಶಗಳು ಕೋಟೆ ಗೋಡೆಯ ಹೊರಗೆ ಇದ್ದವು. ಇವು ವಿಜಯನಗರ ಪಟ್ಟಣಕ್ಕೆ ಬೇಕಾದ ಎಲ್ಲ ಅಗತ್ಯ ವಸ್ತುಗಳನ್ನು ಕಾಲಕಾಲಕ್ಕೆ ಪೂರೈಸುತ್ತದ್ದವು (ನಾಗರಾಜ್,೧೯೯೪:೯೯).

ವಿಜಯನಗರದ ಪಟ್ಟಣದ ಎಲ್ಲ ಉಪನಗರಗಳಲ್ಲಿಯೂ ಒಂದೊಂದು ಕೆರೆಯಿರುವುದನ್ನು ಕಾಣಬಹುದಾಗಿದೆ. ರಾಜಧಾನಿ ಪಟ್ಟಣಕ್ಕೆ ಹೊಂದಿಕೊಂಡಂತಹ ಉಪನಗರಗಳು ರಾಜಧಾನಿಯ ಬೇಡಿಕೆಯನ್ನು ಪೂರೈಸುತ್ತಿದ್ದವು. ರಾಜಧಾನಿಯ ಉಪನಗರಗಳಿಗೆ ಪೂರಕವಾಗಿ ಕೆಲಸವನ್ನು ಮಾಡುತ್ತಿದ್ದವು.

ಈ ಉಪನಗರಗಳನ್ನು ನೋಡಿಕೊಳ್ಳಲು ಪಟ್ಟಣಸ್ವಾಮಿ ನೇಮಕ ಮಾಡಲಾಗುತಿತ್ತು ಇವರು ವ್ಯಾಪಾರದ ತೆರಿಗೆ ವಸೂಲಿ ಮಾಡುತ್ತಿದ್ದರು. ಹೊರಗಿನಿಂದ ಬಂದವರನ್ನು ಇವರು ಪರಿಶೀಲಿಸುತ್ತಿದ್ದುದನ್ನು ಕಾಣಬಹುದಾಗಿದೆ (ವೆಂಕಟರತ್ನಂ,೧೯೭೪:೧೨೯).

ದೇವಾಲಯಗಳು

ವಿಜಯನಗರ ಆಳ್ವಿಕೆಯ ಕಾಲದಲ್ಲಿ ಇತರ ಬದಲಾವಣೆಗಳಂತೆ, ಸಾಮಾಜಿಕ ಕ್ಷೇತ್ರದಲ್ಲಿಯೂ ಬದಲಾವಣೆಯನ್ನು ಕಾಣಬಹುದು. ಮಧ್ಯಕಾಲೀನ ವಿಜಯನಗರ ಉಪನಗರವಾದ ತಿರುಮಲದೇವಿ ಪಟ್ಟಣ ಅಂದರೆ ಈಗಿನ ಹೊಸಪೇಟೆಯಲ್ಲಿಯೂ ಸಾಮಾಜಿಕವಾಗಿ ಅನೇಕ ಬದಲಾವಣೆಗಳು ಕಂಡುಬರುತ್ತವೆ. ವಿಜಯನಗರ ಕಾಲದಲ್ಲಿ ಜನರ ಹಿತ ದೃಷ್ಟಿಯಿಂದ ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಇತರ ಕಾಲದಲ್ಲಿ ಅನೇಕ ದೇವಾಲಯಗಳನ್ನು ನಿರ್ಮಾಣ ಮಾಡಿದರು, ಕೆರೆಗಳನ್ನು ಕಟ್ಟಲಾಗುತ್ತಿತ್ತು, ಶಿಕ್ಷಣಗಳನ್ನು ನೀಡುತ್ತಿದ್ದರು, ಕೃಷಿಗೆ ಬೇಕಾದ ಸಹಾಯವನ್ನು ಮಾಡುತ್ತಿದ್ದರು. ತುಂಗಭದ್ರ ಅಣೆಕಟ್ಟೆಯಿಂದ ಕಾಲುವೆಗಳನ್ನು ಮತ್ತು ನಾಲೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದುದು ಕಂಡುಬರುತ್ತದೆ. ವ್ಯಾಪಾರಗಳಿಗೆ ತಿರುಮಲದೇವಿಯವರ ಪಟ್ಟಣದಲ್ಲಿ ಮನೆಗಳನ್ನು ನಿರ್ಮಾಣ ಮಾಡಲಾಗಿತ್ತೆಂದು, ಆಧುನಿಕವಾಗಿ ಒಳಚರಂಡಿಗಳನ್ನು ಮಧ್ಯಕಾಲದಲ್ಲಿಯೇ ನಿರ್ಮಿಸಲಾಗಿತ್ತು. ಸ್ತ್ರೀಯರಿಗೆ ಗೌರವವನ್ನು ನೀಡುತ್ತಿದ್ದರು. ಅಲ್ಲದೆ ಜನ ಜೀವನದ ಯೋಗಕ್ಷೇಮಗಳನ್ನು ಇವರ ವಿಚಾರಿಸುತ್ತಿದ್ದರು.

[illegible]

[illegible]

ಹೊಸಪೇಟೆ ಪಟ್ಟಣದ ನೆಹರೂ ಕಾಲೋನಿ ಪ್ರದೇಶದಲ್ಲಿದ್ದ ವಿಜಯನಗರ ಕಾಲದ ತಿರುವೆಂಗಳನಾಥ ಮತ್ತು ಗೌರೇಶ್ವರ ದೇವಾಲಯಗಳು ಈಗಿಲ್ಲ. ಈಗಿನ ಸಣ್ಣಕ್ಕಿ ವೀರಭದ್ರ ದೇವಾಲಯವಿರುವಲ್ಲಿ ಈ ಮೇಲಿನ ದೇವಾಲಯಗಳಿದ್ದವು.



ಸಣ್ಣಕ್ಕಿ ವೀರಭದ್ರ ದೇವಾಲಯ

ಹಳೆಯ ಪೇಟೆ ಪ್ರದೇಶದಲ್ಲಿರುವ ವಡಕರಾಯಸ್ವಾಮಿ ದೇವಾಲಯ ವಿಜಯನಗರ ಕಾಲದ್ದು. ಉಳಿದಂತೆ ಪಟ್ಟಣದಲ್ಲಿರುವ ಸಣ್ಣಪುಟ್ಟ ದೇವಾಲಯಗಳು ವಿಜಯನಗರೋತ್ತರ ಕಾಲದ ವಿವಿಧ ಪಟ್ಟಣಗಳಲ್ಲಿ ನಿರ್ಮಾಣವಾಗಿವೆ (ಮಹದೇವ,೨೦೦೨:೧೪೨).

ಹೊಸಪೇಟೆ ಪ್ರದೇಶದಲ್ಲಿ ವಿಜಯನಗರದಲ್ಲಿ ನಿರ್ಮಾಣವಾದ ಬಸವನ ದುರ್ಗ ಅಥವಾ ಧರ್ಮದ ಗುಡ್ಡ. ಈ ಗುಡ್ಡದಲ್ಲಿ ಅನೇಕ ಗುಹೆಗಳಿವೆ. ಇಲ್ಲಿ ಚೆನ್ನ ಬಸವಣ್ಣ ಮತ್ತು ನಿಜಲಿಂಗಮ್ಮ ದೇವತೆಗಳು ಇದ್ದು ಈ ಮೂರ್ತಿಗಳು ವಿಜಯನಗರ ಕಾಲದಲ್ಲಿ ಸ್ಥಾಪಿತವಾಗಿವೆ.

ಜನ ವಸತಿ ಇಲ್ಲದ ನಿಸರ್ಗ ಪ್ರದೇಶವಾದ ಧರ್ಮ ಗುಡ್ಡಗಳಲ್ಲಿ ಪೂಜೆಗಳು ನಡೆಯುತ್ತಿದ್ದು ಇದು ಜನಪದಕ್ಕೆ ಒಂದು ಮಾದರಿಯಾಗಿದೆ (ತಾರೀಹಳ್ಳಿ,ಲೇಖನ,೨೦೦೬).

ಜಂಬುನಾಥ ದೇವಾಲಯಕ್ಕೆ ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ದೊರೆ ಶ್ರೀಕೃಷ್ಣದೇವರಾಯ ಸೋಮವಾರ ಭೇಟಿ ನೀಡುತ್ತಿದ್ದ. ಇದು ಇಲ್ಲಿನ ಏಳು ಪರ್ವತಗಳಲ್ಲಿ ಒಂದು. ಇದು ವಿಜಯನಗರದ



(ಹಂಪೆ) ದಕ್ಷಿಣದ್ವಾರವೆಂದೇ ಪ್ರಸಿದ್ಧವಾಗಿದೆ. ಇದು ಬೈರ, ತ್ರಿಶಂಕು, ಮವರಹು ಎಂಬ ಮೂರು ಜನರ ಪ್ರಯತ್ನದ ಫಲವಾಗಿದೆ. ಈ ದೇವಸ್ಥಾನವು ೧೩೧೦ರಲ್ಲಿ ನಿರ್ಮಾಣವಾಗಿದೆ. ಅನಂತಶಯನ ಗುಡಿಯ ಮೇಲಿರುವ ಶಾಸನ ಜಂಬುನಾಥನ ಪೂಜಾ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತದೆ. ಜಂಬುನಾಥ ದೇವಾಲಯವು ವಿಜಯನಗರ ಪೂರ್ವದಲ್ಲಿ ನಿರ್ಮಾಣವಾಗಿದೆ (ತಾರೀಹಳ್ಳಿ,ಲೇಖನ,೨೦೦೬).

ವಿಶೇಷ ಪೂಜೆಗಳು ನಡೆಯುತ್ತವೆ. ಈ ದೇವಾಲಯದ ಹೊರ ಒಳಭಾಗದಲ್ಲಿ ಕಾಂಚನ ತೀರ್ಥವೆಂಬ ಬಾವಿ ಇದ್ದು ಅದರ ಪಕ್ಕದಲ್ಲಿ ವೀರಭದ್ರ, ನಾಗರ ಮತ್ತು ಭರಮಪ್ಪ ದೇವರ ಶಿಲ್ಪಗಳಿವೆ. ದೇವಸ್ಥಾನದ ಪಕ್ಕದಲ್ಲಿ ಕಬ್ಬಿಣ ಅದಿರಿನ ಬೆಟ್ಟಗಳಿವೆ. ದೇವರ ಉತ್ಸವ ನಡೆಯುತ್ತಲೆ ಮಹಿಳೆಯರಿಗೆ ಉಡಿತುಂಬುವ ಧಾರ್ಮಿಕ ಕಾರ್ಯಕ್ರಮಗಳು ಪ್ರಾಚೀನ ಕಾಲದಿಂದ ನಡೆದು ಬಂದಿವೆ (ರಾವ್,೧೯೮೩:೬೮).

ವಿಜಯನಗರದ ಕಾಲದಲ್ಲಿ ಶ್ರಾವಣ ಮಾಸದಲ್ಲಿ ೫ನೇ ಸೋಮವಾರದಂದು ತಿರುಮಲದೇವಿಯ ಪಟ್ಟಣಕ್ಕೆ (ಹೊಸಪೇಟೆ) ಜಂಬುನಾಥನನ್ನು ಕರೆದುಕೊಂಡು ಬರುವ ಸಂಪ್ರದಾಯವಿತ್ತು. ಅಂದು ನಗರದ ತುಂಬಾ ಮೆರವಣಿಗೆಯ ಮೂಲಕ ಪ್ರದಕ್ಷಿಣೆ ಹಾಕಲಾಗುತ್ತಿತ್ತು. ದಸರಾ ಹಬ್ಬದ ವಿಶಿಷ್ಟ ಪೂಜೆಗಳು ಮತ್ತು ಜಾತ್ರೆಗಳು ದೇವಾಲಯಗಳಲ್ಲಿ ನಡೆಯುತ್ತಿದ್ದವು (ತಾರಿಹಳ್ಳಿ,ಲೇಖನ ಸಂಗ್ರಹ,೨೦೦೬).

ವಿಜಯನಗರದ ದೇವಸ್ಥಾನಗಳಲ್ಲಿ ನಿತ್ಯೋತ್ಸವ, ಮಕರ ಸಂಕ್ರಾಂತಿ, ಶಿವರಾತ್ರಿ, ಗೋಕುಲಾಷ್ಟಮಿ, ಮೊದಲಾದ ಪರ್ವದಿನಗಳಲ್ಲಿ ನಡೆಯುತ್ತಿದ್ದವು. ಹೋಳಿ ಹಬ್ಬವು ಹೆಚ್ಚಿನ ಆಕರ್ಷಣೆಗೆ ಗುರಿಯಾಗಿದ್ದ ಹಬ್ಬಗಳಲ್ಲಿ ಒಂದು.

ಕಾರ್ತಿಕ ಮಾಸ ಪ್ರಾರಂಭದ ದೀಪಾವಳಿ ಹಬ್ಬವು ತಿರುಮಲಾದೇವಿ ಪಟ್ಟಣದ ಮನೆಮನೆಗಳಲ್ಲಿ ಪ್ರತಿ ದೇವಾಲಯಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತೆಂಬುದಕ್ಕೆ ವಿದೇಶಿ ಪ್ರವಾಸಿಗರ ವರದಿ ವಿವರಗಳಿವೆ. ಕೃಷ್ಣದೇವರಾಯನು ಪ್ರತಿ ವರ್ಷವೂ ವಸಂತೋತ್ಸವವನ್ನು ನಡೆಸುತ್ತಿದ್ದನು. ರಾಯನ ಕಾಲದಲ್ಲಿ ಆಚರಣೆಯಲ್ಲಿದ್ದ ಹಬ್ಬಗಳಲ್ಲಿ ಮಹಾನವಮಿ, ವಿಜಯದಶಮಿಗಳಿಂದ ಕೂಡಿದ ನವರಾತ್ರಿ ಹಬ್ಬಕ್ಕೆ ವಿಶೇಷವಾದ ಪ್ರಾಮುಖ್ಯತೆ ಇದೆ. ನವರಾತ್ರಿ ಹಬ್ಬವನ್ನು ಮಳೆಗಾಲ ಬಂದುಹೋದ ಸಡಗರದಿಂದ ಆಚರಿಸುತ್ತಿದ್ದರು. ಈ ರೀತಿಯಲ್ಲಿ ಕಾಲಕ್ಕೆ ತಕ್ಕಂತೆ ಹಬ್ಬಗಳನ್ನು ಆಚರಿಸುತ್ತಿದ್ದರು. ಅಷ್ಟೆ ಅಲ್ಲದೆ ಹಬ್ಬಗಳನ್ನು ಜನರು ಪ್ರತ್ಯೇಕವಾಗಿ ಆಚರಿಸುತ್ತಿದ್ದುದು ಕಂಡುಬರುತ್ತದೆ (ದೀಕ್ಷಿತ,೧೯೯೭:೭೪).

ಹೊಸಪೇಟೆ ಮಧ್ಯಕಾಲದ ದೇವಾಲಯಗಳು ದ್ರಾವಿಡ ಶೈಲಿಯಲ್ಲಿದ್ದು ಶೈವ ಮತ್ತು ವೈಷ್ಣವ ಪಂಥವನ್ನು ಪ್ರತಿಬಿಂಬಿಸುತ್ತಿದ್ದವು. ಇವರು ದೇವಾಲಯವನ್ನು ಪ್ರತ್ಯೇಕವಾಗಿ ತಮ್ಮದೇ ಆದ ಶೈಲಿಯಲ್ಲಿ ನಿರ್ಮಿಸುತ್ತಿದ್ದರು.

ದೇವಾಲಯವನ್ನು ನಿರ್ಮಿಸಿದ್ದಕ್ಕೆ ಶಾಸನಗಳಲ್ಲಿ ದಾಖಲೆಗಳು ಇವೆ. ಅನಂತಶಯನ ಗುಡಿಯ ಮುಂದೆ ಶಾಸನವಿದ್ದು ದೇವಾಲಯಕ್ಕೆ ಕೊಡುವ ದತ್ತಿ ಬಗ್ಗೆ ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲದೆ ಸಣ್ಣಕ್ಕಿ ವೀರಭದ್ರ ಗುಡಿಯ ಮುಂಭಾಗದಲ್ಲಿರುವ ೧೫೩೧ರ ವಿಜಯನಗರ ಅರಸರ ಶಿಲಾ ಶಾಸನವಿದೆ. ಈ ಶಾಸನದಿಂದ ಈ ಪ್ರದೇಶವನ್ನು ಇಂದಿನ ಹೊಸಪೇಟೆ ವಿಜಯನಗರದ ತಿರುಮಲದೇವಿ ಪಟ್ಟಣವೆಂದು ತಿಳಿಯಲಾಗಿದೆ.

ವಿಜಯನಗರ ಕಾಲದಲ್ಲಿ ಕೃಷ್ಣದೇವರಾಯ ತಿರುಮಲೆ ಮಹಾರಾಯಪುರ ಪಟ್ಟಣ ನಿರ್ಮಿಸಿದ ಅನಂತಶಯನಗುಡಿ ನಿರ್ಮಿಸಿದ್ದ ಈ ಕಟ್ಟಡ ೧೫೨೪ರಲ್ಲಿ ಕೆಲಸ ಮುಗಿಸಿದ್ದು ತಿಳಿಯುತ್ತದೆ. ಈ ದೇವಸ್ಥಾನಕ್ಕೆ ಅನೇಕ ದಾನಗಳನ್ನು ಬಿಟ್ಟ. ಈ ದೇವಾಲಯ ಈಗಿಲ್ಲ. ವೈಷ್ಣವ ಗುಡಿಗಿಂತ ಬೇರೆಯಾಗಿದೆ.



ಅನಂತಶಯನ ಗುಡಿ

ರಂಗಮಂಟಪ ಅಥವಾ ಗರ್ಭಗೃಹ, ಗರ್ಭಗೃಹದ ಮೇಲ್ಛಾವಣಿ ಯೂರೋಪಿಯನ್‌ರ ಚರ್ಚಿನಂತೆ ಗುಮ್ಮಟ ಛಾವಣಿ ವಿಶಿಷ್ಟ ಸ್ಥಾನವಾಗಿದೆ (ಫಿಲಿಯೋಜಾ,೧೯೯೨:೧೦೧).

ವಿಜಯನಗರ ಕಾಲದ ಸುಂದರ ವೈಷ್ಣವಮೂರ್ತಿ ನೋಡಲು ಸಿಗುವುದಿಲ್ಲ. ಲಕ್ಷ್ಮೀದೇವಿಯರ ಗುಡಿ ಅನಂತಶಯನ ದೇವಸ್ಥಾನದಷ್ಟು ದೊಡ್ಡದಿಲ್ಲದಿದ್ದರೂ, ಚಿಕ್ಕದೂ ಸುಂದರವೂ ಇದೆ. ಬಹುಶಃ ತೆರೆದಿದ್ದ ಮಂಟಪ ಬಿದ್ದು ಹಾಳಾಗಿದೆ. ರಂಗಮಂಟಪ ಹಾಗೂ ಉಳಿದ ಭಾಗಗಳಿವೆ. ಈ ಮಂದಿರಗಳಿಗೆ, ಅಚ್ಯುತರಾಯ ಸದಾಶಿವರಾಯರು ಹೇರಳವಾದ ದಾನ ಬಿಟ್ಟಿದ್ದಾರೆ. ಈ ದೇವಸ್ಥಾನದ ಶಾಖಶಿಖರ



ಗಚ್ಚುಗಾರೆಗಳಿಂದ ಕಟ್ಟಿದ್ದು ಇದು ವಿಜಯನಗರದ ಶಿಲ್ಪ ಕಲೆಯ ಕುರುಹು ಎಂದೇ ಹೇಳಬಹುದು. ಪೂರ್ವಕ್ಕೆ ಉತ್ಸವಕ್ಕೆಂದು ಕಟ್ಟಿದ ಮಂಟಪ ಇದೆ (ಪಿಲಿಯೋಜಾ, ೧೯೯೨:೧೦೨).

ಕೆರೆಗಳು

ತಿರುಮಲಾದೇವಿ ಪಟ್ಟಣದಲ್ಲಿ ಎರಡು ಕೆರೆಗಳು ನಿರ್ಮಾಣಗೊಂಡಿರುವುದು ಕಂಡುಬರುತ್ತದೆ. ವಿಜಯನಗರ ಕಾಲದಲ್ಲಿ ರಾಜರು ತಮ್ಮ ಜನರ ಅನುಕೂಲಕ್ಕೆ ಮತ್ತು ಕೃಷಿ ಉತ್ಪಾದನೆಗೆ ಸಹಾಯವಾಗುವುದಕ್ಕೆ ಒಂದೊಂದು ಉಪನಗರಗಳಿಗೆ ಕೆರೆಗಳನ್ನು ನಿರ್ಮಿಸುತ್ತಿದ್ದರು. ಅದೇ ರೀತಿಯಲ್ಲಿ ತಿರುಮಲದೇವಿಯರ ಪಟ್ಟಣದಲ್ಲಿಯೂ ಕೂಡ ಕೆರೆಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ.

ರಾಯರ ಕೆರೆ

ಹೊಸಪೇಟೆ ನಗರದ ಹೊರಭಾಗದಲ್ಲಿರುವ ಬೆಂಗಳೂರು ಮರಿಯಮ್ಮನ ಹಳ್ಳಿ ರಸ್ತೆಯಲ್ಲಿ ಈ ಕೆರೆಯಿದೆ. ಇದನ್ನು ಕೃಷ್ಣದೇವರಾಯನು (ಕ್ರಿ.ಶ.೧೫೨೯-೨೦) ಕಟ್ಟಿಸಿದನೆಂದು ವಿವಿಧ ಮೂಲಗಳಿಂದ ತಿಳಿದು ಬರುತ್ತದೆ. ಈ ಕೆರೆಗಳಿಗೆ ತೂಬುಗಳನ್ನು ನಿರ್ಮಾಣ ಮಾಡುತ್ತಿದ್ದರು. ರಾಯರ ಕೆರೆ ತೂಬಿನಲ್ಲಿ ವಿಶಿಷ್ಟವಾದ ಶಿಲ್ಪ ಕೆತ್ತನೆಗಳನ್ನು ಮಾಡಿರುವುದು ಕಂಡುಬರುತ್ತದೆ. ಈ ಕೆರೆ ನೀರು ಬತ್ತಿ ಹೋಗುತ್ತಿರುತ್ತದೆ, ಫೆರ್ನಾವ್ಲೆ ನ್ಯೂನಿಜ್ ಎಂಬುವನು ಜೋಟಿಲ ಪೊಂಟೆಯನ್ನು ಆಹ್ವಾನಿಸಿ ಕೆರೆಯನ್ನು ಕಟ್ಟಿಸುತ್ತಾನೆ. ಮುಂದೆ



ರಾಯರ ಕೆರೆ ತೂಬು



ಈ ಕೆರೆಯು ಒಡೆಯಲಾಗಿ ಅದಕ್ಕೆ ತನ್ನ ಖೈದಿಗಳನ್ನು ಮತ್ತು ಕೋಣಗಳನ್ನು ಬಲಿ ಕೊಡುತ್ತಿದ್ದರು ಎಂದುದಾಖಲಿಸಿದ್ದಾನೆ. ಈ ಕೆರೆಯಿಂದ ಅನೇಕ ಸುಧಾರಣೆಗಳನ್ನು ಮಾಡಲಾಯಿತೆಂದು ಸಹ ಹೇಳಲಾಗಿದೆ. ಭತ್ತ, ಹೊಲ ಮತ್ತು ತೋಟಗಳಿಗೆ ನೀರು ಪೂರೈಸಲು ಇದರಿಂದ ಹೊರಡುವಂತ ಹಲವು ಕಾಲುವೆಗಳನ್ನು ನಿರ್ಮಿಸಲಾಯಿತೆಂದು ರಾಬರ್ಟ್ ಸಿವೆಲ್ ಅಭಿಪ್ರಾಯ ಪಡುತ್ತಾರೆ. ಆದರೆ ರಾಯರ ಕೆರೆ ಅತ್ಯಂತ ದೊಡ್ಡದಾಗಿದ್ದು ಅದರಲ್ಲಿ ನೀರು ತುಂಬಿರುವುದೂ ಇಲ್ಲಿಯವರೆಗೆ ಯಾರು ನೋಡಿಲ್ಲವೆಂದು ಸ್ಥಳೀಯರು ತಿಳಿಸುತ್ತಾರೆ (ವಾಸುದೇವನ್, ೨೦೦೧:೮೪).

ಯಲ್ಲಪ್ಪಣ ಕೆರೆ

ಈವರೆಗೆ ಬೆಳಕಿಗೆ ಬಂದಿರುವ ಕೃಷ್ಣದೇವರಾಯನ ಕಾಲದ ಹಲವಾರು ಶಾಸನಗಳ ಸಾಲಿಗೆ ಹೊಸಪೇಟೆ ಪಟ್ಟಣ ಪ್ರದೇಶದಲ್ಲಿ ಈಗ ಹೊಸದಾಗಿ ಪತ್ತೆಯಾಗಿರುವ ಇನ್ನೊಂದು ಶಾಸನವಾಗಿದೆ. ಈ ಶಾಸನದಲ್ಲಿ ೨೦ ಸಾಲುಗಳಿರುವುದು ಕಂಡುಬರುತ್ತದೆ. ಕೃಷ್ಣದೇವರಾಯನ ನೂತನ ಶಾಸನ ದೊರೆತಿರುವುದು



ಯಲ್ಲಪ್ಪಣ ಕೆರೆ

ಹೊಸಪೇಟೆಯಿಂದ ತುಂಗಭದ್ರಾ ಡ್ಯಾಂಗೆ ಹೋಗುವ ಮುಖ್ಯ ಮಾರ್ಗ (ಕೊಪ್ಪಳ ಮಾರ್ಗ)ದಲ್ಲಿರುವ ಇಂದಿರಾನಗರ ಬಡಾವಣೆಯಲ್ಲಿ ದೊರೆತಿದೆ. ಈ ಶಾಸನದಿಂದ ಹೊಸಪೇಟೆ ಪಟ್ಟಣದ ಹಳೆಯ ಕೆರೆಯೊಂದನ್ನು ಸ್ಪಷ್ಟವಾಗಿ ಗುರುತಿಸಲು ಇದು ಸಾಧ್ಯವಾಗಿದೆ. ಈವರೆಗೆ ಹೊಸಪೇಟೆ ಪಟ್ಟಣದಲ್ಲಿ ಕೆರೆಗಳ ಪೈಕಿ ಯಲ್ಲಪ್ಪಣನ ಕೆರೆ ಇರುವುದು ಕಂಡು ಬಂದಿಲ್ಲ ಶಾಸನದ ಪಾಠವನ್ನು ಗಮನಿಸಿದರೆ, ಕೃಷ್ಣದೇವರಾಯ ಕಾಶಿ ವಿಶ್ವನಾಥದೇವರನ್ನು ಪ್ರತಿಷ್ಠಾಪಿಸುವುದಕ್ಕೆ ಮೊದಲೇ ಯಲ್ಲಪ್ಪಣನ ಕೆರೆ ಇದ್ದಂತೆ ಕಂಡುಬರುತ್ತದೆ.



ಈ ಕೆರೆಯ ಏರಿಯನ್ನು ಈಗಿನ ಇಂದಿರಾನಗರ ಬಡಾವಣೆಯಿಂದ ಡ್ಯಾಂ ರಸ್ತೆಯಲ್ಲಿರುವ ವಿಜಯನಗರ ಕಾಲೇಜಿನವರೆಗೆ ಅಂದರೆ ಬಸವೇಶ್ವರ ನಗರವೂ ಸೇರಿದಂತೆ ವಿಸ್ತಾರವಾಗಿ ಗುರುತಿಸಬಹುದು. ಈ ಏರಿಯ ಮೇಲೆ ಮನೆಗಳು ಮೊದಲಾದವು ನಿರ್ಮಾಣಗೊಂಡಿರುವ ಪ್ರಯುಕ್ತ ಹಾಗೂ ಬಹು ಹಿಂದಿನಿಂದಲೂ ಕೆರೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೂಳು ತುಂಬಿರುವುದರಿಂದ ಏರಿಯ ಎತ್ತರವಾಗಲೀ ಕೆರೆಯ ಆಳವಾಗಲೀ ನಿರ್ದಿಷ್ಟವಾಗಲಿ ತಿಳಿದುಬರಲು ಸಾಧ್ಯವಾಗದೇ ಇರಬಹುದು.

ಇದು ಪೂರ್ತಿ ಹಾಳಾದ ಕೆರೆ ಆದರೂ ಕಾಲೇಜಿನ ಸಮೀಪದಲ್ಲಿ ಈ ಕೆರೆಯ ತೂಬಿನ ಅವಶೇಷಗಳು ಅಂದರೆ ಕಲ್ಲು ಮಂಟಪದ ಅವಶೇಷಗಳು ಇಂದಿಗೂ ಕಂಡು ಬರುತ್ತವೆ. ನೀರು ಹೋಗಲು ನಿರ್ಮಿಸಲಾದ ಗಾರೆಗಚ್ಚಿನ ತೂಬು ಕಾಲುವೆಯ ಕುರುಹು ಸಹ ಇಲ್ಲಿದೆ. ಕೆರೆಯ ಮುಂಭಾಗದ ಬಯಲು ಪರಿಸರದಲ್ಲಿ ಗದ್ದೆ, ತೋಟಗಳು ಸಾಕಷ್ಟು ಇದ್ದವು ಎನ್ನುವುದಕ್ಕೆ ಈಗಲೂ ಇಲ್ಲಿ ಉಳಿಬಂದಿರುವ ತೋಟಗಳೇ ಸಾಕ್ಷಿ. ಈ ಕೆರೆಯ ಸುತ್ತಮುತ್ತಲೂ ಮೇರೆಗಳನ್ನು ಗಮನಿಸಿದರೆ ಶಾಸನದಲ್ಲಿ ಪ್ರಸ್ತಾವಗೊಂಡಿರುವ ಗ್ರಾಮಗಳನ್ನು, ಕಾಲುವೆಗಳನ್ನು ಈಗಲೂ ಗುರುತಿಸಬಹುದು. ಈ ಶಾಸನ ಪ್ರಕಾರ ಈ ಕೆರೆಯ ದಕ್ಷಿಣ ದಿಕ್ಕಿನ ಕೆರೆಯ ಹಿಂಬದಿಯಲ್ಲಿ ಕೋಟೆ ಇದುದು ಕಂಡುಬರುತ್ತದೆ.

ಎಂಬುವನು ಒಂದು ಕೆರೆಯನ್ನು ಕಟ್ಟಿಸಿದ ಬಗ್ಗೆ ಶಾಸನದಲ್ಲಿ ಉಲ್ಲೇಖನಗಳಿವೆ. ಈ ಕೆರೆ ಇಂದು ಬಸವೇಶ್ವರ ಬಡಾವಣೆಯಾಗಿದೆ. ಈ ಕೆರೆಗಳಿಂದ ಕಾಲುವೆಗಳನ್ನು ನಿರ್ಮಿಸಲಾಗುತಿತ್ತು ಎಂದು ಲಕ್ಷ್ಮಣ್ ತೆಲಗಾವಿಯವರು ಸಂಶೋಧಿಸಿದ್ದಾರೆ (ತೆಲಗಾವಿ,೨೦೦೦:೩೫).

ಸಿವೆಲ್ ಕೆರೆಯ ಕಾಲುವೆಯನ್ನು ಕುರಿತು ತಿಳಿಸುತ್ತಾನೆ. ಆ ಕೆರೆಗಳಿಗೆ ಅನೇಕ ಕಾಲುವೆಗಳು ಏರಿಯಿಂದ ಹೊರ ಭಾಗದಲ್ಲಿ ಇರುತ್ತಿದ್ದವು. ಅವುಗಳಿಂದ ನೀರನ್ನು ಹಾಯಿಸಿ ಬೇಸಾಯಕ್ಕೆ ಮತ್ತು ಕೃಷಿಗೆ ಬಳಸುತ್ತಿದ್ದರು. ಅಲ್ಲಿ ಮುಖ್ಯವಾಗಿ ಭತ್ತದ ಗದ್ದೆ ಮತ್ತು ತೋಟಗಳು ಇದ್ದವು. ಆ ಕೆರೆಯು ಆಯಕಟ್ಟಿನ ಪ್ರದೇಶದ ಕೃಷಿಕರಿಗೆ ಒಂಬತ್ತು ವರ್ಷಗಳ ಕಾಲ ತೆರಿಗೆಯನ್ನು ನೀಡುತ್ತಿರಬೇಕಾಯಿತು (ಕೊಟ್ರಯ್ಯ,೨೦೦೧:೪೮).

ತುರ್ತಾ ಅಣೆಕಟ್ಟುಗಳು

ಈ ಅಣೆಕಟ್ಟು ಹಂಪೆಯ ಬಳಿಯಿಂದ ಪ್ರಾರಂಭವಾಗುತ್ತವೆ. ಇದರ ಒಟ್ಟು ಕಟ್ಟಲ್ಪಟ್ಟ ಭಾಗದ ಉದ್ದವು ಸುಮಾರು ೧,೧೦೦ ಅಡಿಗಳಷ್ಟು ಮಾತ್ರ. ಇದು ಒಟ್ಟು ಹದಿನೈದು ಭಾಗಗಳಲ್ಲಿದೆ. ನೈಸರ್ಗಿಕ ಬಂಡೆ ಕಲ್ಲು ಮತ್ತು ನದಿ ಪಾತ್ರದ ಕಲ್ಲುಗಳನ್ನು ಬಳಸಿಕೊಂಡು ಕಟ್ಟಲಾಗಿದೆ. ಈ ಅಣೆಕಟ್ಟು ನೇರವಾಗಿರದೆ

ಅಂಕುಡೊಂಕಾಗಿದ್ದು ಇದರ ಬಲದಂಡೆಯಿಂದ ಒಂದು ಕಾಲುವೆ ಪ್ರಾರಂಭವಾಗುತ್ತದೆ. ಇದನ್ನು ತುರ್ತಾಕಾಲುವೆಯೆಂದು ಕರೆಯುತ್ತಾರೆ (ವಾಸುದೇವನ್,೨೦೦೧:೯೮).

ಉಪನಗರದ ಮೇಲೆ ಹಾದುಕೊಂಡು ಹೋಗುವಂತ ತುರ್ತಾಕಾಲುವೆಗಳನ್ನು ನಿರ್ಮಿಸುತ್ತಿದ್ದರು. ತುಂಗಭದ್ರ ನದಿಗೆ ವಿಜಯನಗರದ ಅರಸರು ಅನೇಕ ಅಣೆಕಟ್ಟುಗಳನ್ನು ಕಟ್ಟಿದರು. ಅವುಗಳಲ್ಲಿ ಹಂಪಿಯ ಉತ್ತರಕ್ಕಿರುವ ವಲ್ಲಭಪುರದ ಹತ್ತಿರ ರಾಯನು ಒಂದು ಅಣೆಕಟ್ಟನ್ನು ಕಟ್ಟಿದನು. ರಾಯನು ೧೫೨೧ರಲ್ಲಿ ಇದನ್ನು ಸ್ಥಾಪಿಸಿದಯ ಉಪನಗರಗಳಿಗೆ ನೀರು ಪೂರೈಸಲು ವಲ್ಲಭಪುರದ ಅಣೆಕಟ್ಟಿಗೆ ಬಸವಣ್ಣ ಕಾಲುವೆಯನ್ನು ಕಟ್ಟಿ ಅದರ ಮುಖಾಂತರ ಹೊಸ ಉಪನಗರಗಳಿಗೆ ನೀರನ್ನು ಒದಗಿಸಲಾಯಿತು. ಈ ಕಾಲುವೆಯಿಂದ ಮತ್ತು ಬುಕ್ಕನ ಕಾಲದಲ್ಲಿ ಕಟ್ಟಿದ ತುರ್ತಾ ಕಾಲುವೆಯಿಂದ ವಿಜಯನಗರದ ಎಲ್ಲ ಉಪನಗರಗಳಿಗೂ ನೀರಿನ ಪೂರೈಕೆ ತಕ್ಕ ಮಟ್ಟಿಗೆ ಆಯಿತು. ಇವೆರಡು ಕಾಲುವೆಗಳು ಇವತ್ತಿಗೂ ಕೆಲಸ ಮಾಡುತ್ತಿವೆ (ಕೊಟ್ರಯ್ಯ,೨೦೦೧:೧೦೮).

ಕೆಲವೊಂದು ಕಾಲುವೆಗಳನ್ನು ಕೃಷ್ಣದೇವರಾಯನು ಪ್ರಾರಂಭಿಸಿ ರಾಮರಾಯನು ಮುಗಿಸಿದನು. ಸಾಮ್ರಾಜ್ಯವು ಇದರಿಂದ ಸಂಪದ್ಭರಿತವಾಯಿತು. ಇವರ ಕಾಲದಲ್ಲಿ ೭೦ ಕಾಲುವೆಗಳಿದ್ದು ಕಾಲುವೆಗಳ ಮೂಲಕ ರಾಜಧಾನಿ ಮತ್ತು ಉಪನಗರಗಳಿಗೆ ನೀರು ಸರಬರಾಜು ಮಾಡಲಾಗುತ್ತಿತ್ತು. ಹೀಗೆ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ವಿಜಯನಗರದ ಅರಸರು ಕೆರೆಗಳನ್ನು ಎಲ್ಲೆಲ್ಲಿ ಕಟ್ಟಲು ಸಾಧ್ಯವೋ ಅಲ್ಲೆಲ್ಲ ಕಟ್ಟಿದ್ದಾರೆ. ಹೊಸದಾಗಿ ಕಟ್ಟಲು ಅವಕಾಶವೇ ಇಲ್ಲವೆಂದು ಥಾಮಸ್ ಮನ್ರೋ ಹೇಳಿದ್ದಾನೆ (ದಿಕ್ಷಿತ್, ೧೯೯೭:೯೧).

ತಿರುಮಲಾದೇವಿಯ ಪಟ್ಟಣ ಗ್ರಾಮಾದಿಗಳು ಜನನಿ ಬಿಡವಾಗಿದ್ದವು. ದಾರಿಯುದ್ದಕ್ಕೂ ಸಾಲು ಮರಗಳಿದ್ದವು. ಅಲ್ಲಲ್ಲಿ ಕಟ್ಟಿದ ನೀರು ತುಂಬಿದ ಕೆರೆಗಳು ಕಂಡುಬಂದವು. ಹರಿದು ಬರುವ ನೀರಿನಿಂದ ಬೆಳೆದು ನಿಂತ ಭತ್ತದ ಗದ್ದೆ ಕಬ್ಬಿನ ತೋಟಗಳು, ಮನೋಹರವಾಗಿರುತ್ತಿದ್ದವು. ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಶಿವ, ವಿಷ್ಣು ದೇವಾಲಯಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಜನರ ಅನುಕೂಲಕ್ಕೆ ಕೆರೆ, ಬಾವಿಗಳನ್ನು ನಿರ್ಮಿಸುತ್ತಿದ್ದು, ಪ್ರಯಾಣಿಕರಿಗೆ ತಣ್ಣನೆಯ ನೀರುಳ್ಳ ಅರವಟ್ಟಿಗೆಗಳನ್ನು ದಾರಿಯಲ್ಲಿ ಕೆಲವೆಡೆಗಳಲ್ಲಿ ಗುಡಾರಗಳನ್ನು ಹಾಕಿ ಗಡಿಗೆಯಲ್ಲಿಟ್ಟಿರುತ್ತಿದ್ದರು (ಮಹದೇವ, ೧೯೯೭:೧೪೦).

ಹೊಸಪೇಟೆ ಸುತ್ತಲೂ ಕೋಟೆ ಕೊತ್ತಲಗಳನ್ನು ನಿರ್ಮಿಸಲಾಗಿತ್ತು. ಊರಿನಲ್ಲಿ ಅಚ್ಚುಕಟ್ಟಾದ ನೆಲಗಟ್ಟಿರುವ ಬೀದಿಗಳು, ಬೀದಿಗಳ ಇಕ್ಕೆಲಗಳಲ್ಲೂ ಮನೆಗಳಲ್ಲಿ ವಿಜಯನಗರ ಕಾಲದಲ್ಲಿ ಚಾತುರ್ವರ್ಣ

ವ್ಯವಸ್ಥೆ ಇತ್ತು. ಈ ಕಾಲದಲ್ಲಿ ಬ್ರಾಹ್ಮಣರಿಗೆ ಗಣ್ಯ ಸ್ಥಾನವಿತ್ತು. ಕ್ಷತ್ರಿಯರು ರಾಜನ ಅಂಗರಕ್ಷಕ ಪಡೆಯವರಾಗಿದ್ದು ಶೂರರು ಆಗಿದ್ದರು. ಇವರು ಯುದ್ಧದಲ್ಲಿ ಭಾಗವಹಿಸುತ್ತಿದ್ದರು.

ವೈಶ್ಯರು ವ್ಯಾಪಾರಿಗಳಾಗಿದ್ದರು. ಇವರು ರತ್ನ ರಾಶಿಗಳ ಅಂಗಡಿಗಳನ್ನು ಊರುಗಳಲ್ಲಿ ಹಾಕುತ್ತಿದ್ದರು. ನೇಗಿಲನ್ನು ಕೈಯಲ್ಲಿ ಹಿಡಿದು ಧಾನ್ಯರಾಶಿಗಳನ್ನು ಬೆಳೆದು ಜನರ ಮತ್ತು ಮೇಲ್‌ವರ್ಗದ ಸೇವೆ ಮಾಡುವವರು ಕೃಷಿಕರು. ಇವರು ಭೂಮಿಯನ್ನು ಸಾಗುವಳಿ ಮಾಡುವರಾಗಿದ್ದರು (ರಾಮಸ್ವಾಮಿ, ೧೯೯೭:೨೯).

ಪರಂಪರಾಗತವಾದ ಈ ನಾಲ್ಕು ವರ್ಣದವರಲ್ಲದೆ ವಿವಿಧ ರೀತಿಯ ಉದ್ಯೋಗಗಳಲ್ಲಿ ತೊಡಗಿ ಜೀವನ ನಿರ್ವಹಣೆ ಮಾಡಿಕೊಳ್ಳುತ್ತ ರಾಜ್ಯದ ಸಾಮಾಜಿಕ ಜೀವನದಲ್ಲಿ ಭಾಗಿಗಳಾಗಿ ರಾಜ್ಯದ ಅಭಿವೃದ್ಧಿಯಲ್ಲಿಯೂ, ಜನತೆಯ ದಿನನಿತ್ಯದ ಬಳಕೆಗೆ ಅಗತ್ಯವಾಗಿ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದರಲ್ಲಿಯೂ ನಿರತವಾಗಿರುತ್ತಿದ್ದ ಹಲವು ವಿಧದ ಕರ್ಮಚಾರಿಗಳಿರುತ್ತಿದ್ದರು (ದೀಕ್ಷಿತ, ೧೯೯೭:೮೦).

ಮಹಿಳೆ ಸ್ಥಾನಮಾನ

ವಿಜಯನಗರದ ಮಹಿಳೆಯರು ಸೌಂದರ್ಯವತಿಯರು, ನರ್ತನಕುಶಲರು, ಅಲಂಕೃತರಾಗಿ, ಸುಗಂಧ ದ್ರವ್ಯಗಳನ್ನು ಬಳಸುತ್ತಿದ್ದರು. ಮಹಿಳೆಯರು ಅರಮನೆಗಳಲ್ಲಿ ಅತ್ಯಧಿಕವಾಗಿರುತ್ತಿದ್ದರು. ಅಲ್ಲಿನ ದೇವದಾಸಿಯರು ದೇವಾಲಯಗಳಲ್ಲಿ, ಪೂಜಾಸಮಯಗಳಲ್ಲಿ ಸೇವೆಸಲ್ಲಿಸುತ್ತಿದ್ದರು. ತಿರುಮಲಾದೇವಿ ಪಟ್ಟಣದಲ್ಲಿ ದೇವದಾಸಿಗಳು ಹೆಚ್ಚಾಗಿ ಇದ್ದರು. ಇಂದು ಕೂಡ ದೇವದಾಸಿಯರು ಹೊಸಪೇಟೆಯಲ್ಲಿ ಇದ್ದಾರೆ ಎನ್ನುವುದು ಗಮನಾರ್ಹ. ಅವರು ಹಾಡುಗಾರಿಕೆಯಲ್ಲಿಯೂ ವೀಣಾವಾದನದಲ್ಲಿಯೂ ನಿಪುಣರು. ದೇವದಾಸಿಯರ ನೈಪುಣ್ಯವನ್ನು ಮೆಚ್ಚಿ ಅವರಿಗೆ ರಾಜರು ಬಹುಮಾನವನ್ನಿತ್ತು ಗೌರವಿಸುತ್ತಿದ್ದುದುಂಟು. ವಿಜಯನಗರ ಕಾಲದಲ್ಲಿ ದೇವದಾಸಿಯರಿಗೆ ಸಮಾಜದಲ್ಲಿ ಗೌರವದ ಸ್ಥಾನವಿತ್ತು ಎಂದು ರಾಮಕೃಷ್ಣರಾವ್ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಕೃಷ್ಣದೇವರಾಯನ ರಾಜದಾನಿಯಲ್ಲಿ ಬೀದಿಯೊಂದರಲ್ಲಿ ವಾರಾಂಗನೆಯರ ಮನೆಗಳು ಶೋಭಿಸುತ್ತಿದ್ದವು (ರಾವ್, ೨೦೦೩:೯೪).

ಸಾಮಾನ್ಯ ಸ್ತ್ರೀಯರು ನೃತ್ಯಗಳನ್ನು ನಾನಾತರದ ವಾದ್ಯಗಳನ್ನು ನುಡಿಸುತ್ತ ಹಾಡುತ್ತಿದ್ದರು. ವಿವಿಧ ಜನಪದ ಆಟಗಳನ್ನು ಇವರು ಬಲ್ಲವರಾಗಿದ್ದುರು ಸಮಾಜದ ಸಂಪ್ರದಾಯಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರು. ಇವರು ಮದುವೆಗಳಿಗೆ ಹೆಚ್ಚಿನ ಮಾನ್ಯತೆ ನೀಡುತ್ತಿದ್ದರು. ತಮ್ಮ ಕೆಲಸಗಳನ್ನು ನಿಷ್ಠೆಯಿಂದ ಮಾಡುತ್ತಿದ್ದರು ಎಂದು ಬಾರ್ಬೋಸನ ವರ್ಣನೆಯಾಗಿದೆ. ರಾಬರ್ಟ್ ಸಿವೆಲ್ ಅವರು ಸ್ತ್ರೀಯರನ್ನು ಈ ರೀತಿ ವರ್ಣಿಸಿದ್ದಾರೆ.

[illegible]

[illegible]

[illegible]

[illegible]

[illegible]

[illegible]

ಅನೇಕ ಮಂದಿ ಸ್ತ್ರೀಯರು ಅರಮನೆ ಕೆಲಸಗಳನ್ನು ನಿರ್ವಹಿಸುತ್ತಿದ್ದು ಇವರು ರಾಜನನ್ನು ಆನಂದವಾಗಿಟ್ಟುಕೊಳ್ಳುತ್ತಿದ್ದರು. ಇವರ ವಾಸಕ್ಕೆ ಮನೆಗಳನ್ನು ಕಟ್ಟಿಕೊಡುತ್ತಿದ್ದರು. ರಾಯರ ಕಾಲದಲ್ಲಿ ಸ್ತ್ರೀಯರು ವಿದ್ಯಾವಂತರಾಗಿದ್ದರು. ಶಿಕ್ಷಣವನ್ನು ಪಡೆಯುತ್ತಿದ್ದರು. ವಾಣಿಜ್ಯಕ್ಷೇತ್ರದಲ್ಲಿಯೂ ಸ್ತ್ರೀಯರಿದ್ದಾರೆಂಬುದು ಕನಕದಾಸರ ಹೇಳಿಕೆ. ಈ ಸ್ತ್ರೀಯರು ಅಂಗಡಿಗಳಿಗೆ ಭೂಷಣಪ್ರಾಯ ರಾಗಿದ್ದರೆಂದೂ ಅವರು ಬಿಟ್ಟ ಜಡೆಮುಡಿಯನ್ನು, ಬೆವರಿನ ಬಿಂದುಗಳಿಂದ ಕೂಡಿದ ಅವರ ಮುಖವನ್ನು ಕನಕದಾಸರು ವರ್ಣಿಸಿದ್ದಾರೆ (ಶ್ರೀಕಂಠಯ್ಯ,೧೯೮೨:೨೫೭).

ಗೃಹಿಣಿಯರು ಅತಿಥಿ ಸತ್ಕಾರವನ್ನು ಯಥೇಚ್ಚವಾಗಿ ನಡೆಸುತ್ತಿದ್ದರು. ಇದರಲ್ಲಿ ಮನೆಯೊಡತಿ ಗೃಹಿಣಿರದು ಬಹುಮುಖ್ಯ ಪಾತ್ರ. ಇವರು ಆಭರಣಪ್ರಿಯರಾಗಿದ್ದರು. ಅತಿಥಿಗಳಿಗೆ ಕಾಲಕ್ಕೆ ತಕ್ಕಂತೆ ಆಹಾರಗಳನ್ನು ಬಡಿಸುತ್ತಿದ್ದರು. ವಾತಾವರಣಕ್ಕೆ ತಕ್ಕಂತೆ ಆಹಾರಗಳನ್ನು ಇವರು ಬಳಸುತ್ತಿದ್ದುದನ್ನು ಕಾಣಬಹುದು. ಆಹಾರದ ಬಗ್ಗೆ ಮೂರನೆಯ ಮಂಗರಸನ ಸೂಪಶಾಸ್ತ್ರದಲ್ಲಿರುವ ಹಲವು ಭಕ್ಷ್ಯಭೋಜ್ಯಪಾನೀಯಗಳನ್ನು ತಯಾರಿಸುವ ವಿವರಣೆ ನೀಡಿದ್ದಾರೆ. ತಿಂಡಿಗಳ ಅಂಗಡಿಗಳ ವರ್ಣನೆಯನ್ನು ಗಮನಿಸಬಹುದು. (ದೀಕ್ಷಿತ ೧೯೮೭ : ೮೧)

ಶಿಕ್ಷಣಕ್ಕೆ ಹೆಚ್ಚಾಗಿ ಬ್ರಾಹ್ಮಣರಿಗೆ ಆದ್ಯತೆ ಇತ್ತು. ವಿಜಯನಗರದ ಕಾಲದಲ್ಲಿ ಅಗ್ರಹಾರಗಳನ್ನು ನಿರ್ಮಿಸಿ ಶಿಕ್ಷಣವನ್ನು ನೀಡುತ್ತಿದ್ದರು. ಜನ ಸಾಮಾನ್ಯರಿಗೂ ಶಿಕ್ಷಣ ನೀಡುತ್ತಿದ್ದರು. ಚಿತ್ತವಾಡಿಗಿಯೂ ಒಂದು ಅಗ್ರಹಾರ ಕೇಂದ್ರವಾಗಿದ್ದು ಬೀದಿಯುದ್ದಕ್ಕೂ ಬ್ರಾಹ್ಮಣರ ಮನೆಗಳು ಇದ್ದವು.

ಎಲ್ಲರಿಗೂ ವೇದಗಳು, ದೇವರ ನಾಮಗಳು, ಉಪನಿಷತ್, ಅರ್ಥಶಾಸ್ತ್ರ, ಯುದ್ಧ ಮಾಹಿತಿ, ನೀತಿಶಾಸ್ತ್ರ, ಮತ್ತು ರಾಜರಿಗೆ ವಿಶೇಷ ಅಧ್ಯಯನ ನೀಡಲಾಗುತ್ತಿತ್ತು. ಆಗ್ರಹಾರಗಳಲ್ಲಿ ಶಿಕ್ಷಣ ನೀಡುತ್ತಿದ್ದರು (ಶ್ರೀಕಂಠಯ್ಯ,೧೯೮೨: ೨೨೬).

ವಿಜಯನಗರ ಕಾಲದಲ್ಲಿ ಬಾವಿಗಳನ್ನು ನಿರ್ಮಿಸುತ್ತಿದ್ದರು. ಇಂದಿನ ಹೊಸಪೇಟೆಯಲ್ಲಿ ಇವು ದೊರೆತಿವೆ. ಅಂದರೆ ಪ್ರತಿಯೊಂದು ಉಪನಗರಗಳಲ್ಲಿ ಬಾವಿಗಳನ್ನು ನಿರ್ಮಿಸುತ್ತಿದ್ದರು. ಇವುಗಳನ್ನು ಅಗಲವಾಗಿ ಸುಂದರವಾಗಿ ನಿರ್ಮಿಸುತ್ತಿದ್ದರು. ಜನಸಾಮಾನ್ಯರಿಗೆ ನೀರಿನ ವ್ಯವಸ್ಥೆಯ ಅನುಕೂಲ ಮಾಡಿಕೊಟ್ಟಿದ್ದರು. ಜನರು ಬಾವಿಗಳನ್ನು ಧಾರ್ಮಿಕ ಪೂಜೆಗಳಿಗೆ ಬಳಸುತ್ತಿದ್ದರು. ಹೆಚ್ಚು ಬಾವಿಗಳು ದೇವಾಲಯದ ಪಕ್ಕದಲ್ಲಿ ದೊರೆತಿವೆ. ಮಹಿಳೆಯರು ಗಂಗೆ ಪೂಜೆಗಳನ್ನು ಮಾಡುತ್ತಿದ್ದರು. ಬಾವಿಯಿಂದ ಸೇದಿದ ನೀರನ್ನ ದೇವರ ಅಭಿಷೇಕಕ್ಕೆ ಬಳಸುತ್ತಿದ್ದರು (ರಾಮಸ್ವಾಮಿ,೧೯೯೭:೯೦).

ಹೊಸಪೇಟೆ ಕೋಟೆ

ನಗರದ ದಕ್ಷಿಣ ಭಾಗಕ್ಕೆ ಇರುವ ಹಳೇ ಊರಿನ ಜನವಸತಿ ಪ್ರದೇಶವನ್ನು ಈಗಲೂ ಕ್ಯಾಟೆ (ಕೋಟೆ) ಎಂದು ಕರೆಯುವರು. ಆದರೆ ಕೋಟೆ ಕೊತ್ತಲಗಳ ಯಾವುದೇ ಅವಶೇಷಗಳು ಇಂದು ಅಲ್ಲಿ ಕಾಣುವುದಿಲ್ಲ. ನಗರವು ವೇಗವಾಗಿ ಬೆಳೆಯುತ್ತಿರುವುದರಿಂದ ಇಲ್ಲಿಯ ಕೋಟೆ ಕೊತ್ತಲಾವಶೇಷಗಳು ನಾಶವಾಗಿವೆ. ಇಲ್ಲಿಯ ಭೌಗೋಳಿಕ ಲಕ್ಷಣಗಳು ಹಾಗೂ ಸ್ಥಳೀಯರ ಹೇಳಿಕೆಯಿಂದಾಗಿ ಕೋಟೆಯು ಉತ್ತರಾಭಿಮುಖವಾಗಿದ್ದಂತೆ ತಿಳಿದುಬರುವುದು.

ಹೊಸಪೇಟೆ ಪಟ್ಟಣದ ಇಂದಿರಾನಗರ ಬಡಾವಣೆಯ ಈಶ್ವರನ ಗುಡಿಯಲ್ಲಿರುವ ಶಾಸನದಲ್ಲಿ ಹೊಸಪೇಟೆ ಪ್ರದೇಶದಲ್ಲಿ ಕೋಟೆ ಇತ್ತು. (ಕೊಟ್ರೇಶ್,೨೦೦೬:೨೭೮).

ಈಮೇಲಿನ ವಿಷಯಗಳಿಗೆ ಪೂರಕವಾಗಿ ಇನ್ನೂ ಅನೇಕ ವಿವರಗಳಿವೆ.

ಈಶ್ವರಗುಡಿಯ ಶಾಸನವು ತಿರುಮಲದೇವಿ ಅಮ್ಮನವರ ಪಟ್ಟಣದಲ್ಲಿ ಯಲ್ಲಪಣ್ಣನ ಕೆರೆಯ ದಕ್ಷಿಣಕ್ಕೆ ಕೋಟೆ ಇರುವುದನ್ನು ಸೂಚಿಸುತ್ತದೆ. ಯಲ್ಲಪಣ್ಣನ ಕೆರೆಯು ಇಂದು ಬಸವೇಶ್ವರ ಬಡಾವಣೆಯಾಗಿದೆ. ಈಗ ಕೋಟೆಯೆಂದು ಕರೆಯುವ ಪ್ರದೇಶವು ಬಸವೇಶ್ವರ ಬಡಾವಣೆಯಿಂದ ದಕ್ಷಿಣ ದಿಕ್ಕಿಗೆ ೧ ಕಿ.ಮೀ. ದೂರದಲ್ಲಿದೆ. ಕೋಟೆಯಲ್ಲಿ ವಿಜಯನಗರದ ಕಾಲದ ರಾಮಲಿಂಗೇಶ್ವರ, ಈಶ್ವರ, ವಡಕರಾಯ ಆಂಜನೇಯನ ಗುಡಿಗಳಲ್ಲದೆ ಒಂದೆರಡು ಕಡೆ ಕೋಟೆಗೆ ಬಳಸಿದ್ದ ಮಧ್ಯಮ ಗಾತ್ರದ ಕಲ್ಲುಗಳು ಕಂಡುಬಂದಿವೆ.

ವಾಸ್ತವವಾಗಿ ಹೊಸಪೇಟೆಯ ಚಾರಿತ್ರಿಕ ಮಹತ್ವ ಕಳಚೂರಿ ಬಿಜ್ಜಳ ದೇವನ ಕಾಲದಿಂದ, ಅದಕ್ಕೂ ಪೂರ್ವದಿಂದ ಪ್ರಾರಂಭವಾಗುತ್ತದೆ. ಹೊಸಪೇಟೆಯ ಸಣ್ಣಕ್ಕಿ ವೀರಭದ್ರ ದೇವಾಲಯದ ಹಿಂಭಾಗದಲ್ಲಿರುವ ಮರದ ಬುಡದಲ್ಲಿ ಕಲ್ಯಾಣ ಚಾಳುಕ್ಯರ ಶಾಸನ ಶಿಲ್ಪಗಳು ಕಂಡುಬರುತ್ತವೆ. ಇಲ್ಲಿ ಕೋಟೆ ಇದ್ದುದರ ಬಗ್ಗೆ ಚಾಳುಕ್ಯರ ಶಾಸನಗಳು ಏನೋ ಹೇಳುವುದಿಲ್ಲ. ಆಗ ಹೊಸಪೇಟೆಯು ಚಿಕ್ಕ ಗ್ರಾಮವಾಗಿತ್ತೆಂದು ತಿಳಿಯುತ್ತದೆ (ಮಹಾದೇವ,೧೯೯೭:೨೦).

ದೇವರಕೊಂಡಾರೆಡ್ಡಿಯವರು ಉಲ್ಲೇಖಿಸಿರುವಂತೆ ಹೊಸಪೇಟೆಯ ಜಂಬುನಾಥ ದೇವಾಲಯದ ಪೂಜಾರಿ ವೀರಯ್ಯಸ್ವಾಮಿಯ ವಶದಲ್ಲಿದ್ದ ತಾಮ್ರಶಾಸನದ ಕಾಗದ ಪ್ರತಿಯಲ್ಲಿ ಚೋಳರಾಯನು ಹೊಸಪೇಟೆಯ ಕೋಟೆ ಕಟ್ಟಿಸಿ, ಜೋಳದ ರಾಶಿ ಗುಡ್ಡದ ಬಳಿಯೆ ಕೆರೆಗಳನ್ನು ಕಟ್ಟಿಸಿದನೆಂದು ಹೇಳಿದೆ. ಈ ತಾಮ್ರ ಪತ್ರವು ಇತ್ತೀಚೆಗೆ ಅಂದರೆ ೨೦ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಇದರಲ್ಲಿ ವಿಷಯಗಳು

ಕ್ರಮಬದ್ಧವಾಗಿಲ್ಲ. ಕ್ರಿ.ಶ ೧೫೨೧ರ ಕೃಷ್ಣದೇವರಾಯನ ಕಾಲದಲ್ಲಿ ಶಾಸನವು ತಿರುಮಲದೇವಿ ಅಮ್ಮನವರ ಪಟ್ಟಣದಲ್ಲಿ ಕೋಟೆ ಇದ್ದುದನ್ನು ಹೇಳುತ್ತದೆ. ಅಂದರೆ ಕಲ್ಯಾಣ ಚಾಲುಕ್ಯರ ಇಲ್ಲಿಯ ಶಾಸನಗಳಲ್ಲಿ ಕೋಟೆಯ ಯಾವುದೇ ಉಲ್ಲೇಖಗಳು ಕಂಡುಬರುವುದಿಲ್ಲ. ಹಾಗಾಗಿ ಇವೆರಡರ ಮಧ್ಯದ ಅವಧಿಯಲ್ಲಿ ಹೊಸಪೇಟೆ ತಿರುಮಲದೇವಿ ಪಟ್ಟಣದಲ್ಲಿ ಕೋಟೆ ನಿರ್ಮಾಣವಾಗಿರಬಹುದು (ದೇವರಕೊಂಡಾರೆಡ್ಡಿ, ೧೯೯೮: ೧೪೧).

ದ್ವಾರಸಮುದ್ರದ ಅರಸನಾದ ೩ನೇ ಬಲ್ಲಾಳನು ತನ್ನ ಕೋಟೆಯ ರಕ್ಷಣೆಗಾಗಿ ಸುತ್ತಲೂ ಸೈನಿಕರ ಕಿರುಪಡೆಗಳನ್ನು ಸ್ಥಾಪಿಸಿದನು. ಅವೇ ಕಾಲಾಂತರದಲ್ಲಿ ಗ್ರಾಮಗಳಾದವು ಎಂದು ತಿಳಿದುಬರುತ್ತದೆ. ಅವುಗಳೆಂದರೆ ಇಂದಿನ ಹೊಸಪೇಟೆಯ ಶ್ರೀ ಜಗಳೀ ಕಟ್ಟೆರಾಯನೆಂಬ ಆಂಜನೇಯ ಗುಡಿಯ ಹತ್ತಿರ ಜಗಳೀಕಟ್ಟೆ, ಬೈಲುಹನುಮಪ್ಪನ ಗುಡಿಯ ಹತ್ತಿರ ಹಂದಿಗನೂರು, ಉತ್ತರಾದಿ ಮಠದ ಹತ್ತಿರ ವಿರೂಪಾಕ್ಷಪುರ, ಸಣ್ಣಕ್ಕಿ ವೀರಭದ್ರನ ಗುಡಿಯ ಹತ್ತಿರ ತಿರುಮಲಾಪುರ ಮತ್ತು ಶ್ರಿ ವೇಣುಗೋಪಾಲಕೃಷ್ಣ ದೇವಾಲಯದ ಹತ್ತಿರ ವಿಜಯಪುರ ಗ್ರಾಮಗಳು. ಮತ್ತೊಂದು ಮಾಹಿತಿಯಂತೆ ಹರಪನಹಳ್ಳಿ ಸೋಮಶೇಖರ ನಾಯಕನು ೧೭೪೨-೬೬ ಕಾಲದಲ್ಲಿ ಜಗಳೀಕಟ್ಟೆ ವಿರೂಪಾಕ್ಷಪುರ, ವಿಜಯಪುರ, ತಿರುಮಲಪುರ ಮತ್ತು ಹಂದಿಗನೂರು ಗ್ರಾಮಗಳನ್ನು ಒಂದುಗೂಡಿಸಿ ಹೊಸಪೇಟೆಯನ್ನಾಗಿ ಪರಿವರ್ತಿಸಲಾಯಿತೆಂದು ತಿಳಿದುಬರುತ್ತದೆ (ಮಹದೇವ,೧೯೯೭:೨೪).

ಹೊಸಪೇಟೆಯ ಹಳೆಯ ವಸತಿ ಸ್ಥಾನಗಳಲ್ಲಿ ಕೋಟೆಯ ಪ್ರವೇಶ ಮುಖ್ಯವಾಗಿದ್ದು ಪ್ರಾಯಶಃ ವಿಜಯನಗರ ಕಾಲದ ತಿರುಮಲದೇವಿ ಪಟ್ಟಣವೇ ಇದಾಗಿದೆ. ಇದರ ಮೇರೆಗಳು ಪೂರ್ವಕ್ಕೆ ಮರಿಯಪ್ಪನ ಗುಡಿ, ಉತ್ತರಕ್ಕೆ ಬಳ್ಳಾರಿ ದುರ್ಗಮ್ಮನ ಗುಡಿ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಕೋಟೆ ಗೋಡೆಯಿದ್ದು, ಉತ್ತರದಲ್ಲಿ ಗೋಡೆಯ ಹೊರಗೆ ಕಬ್ಬೇರ ಅಗಸ ಮತ್ತು ಕುರುಬರ ಕೇರಿಗಳಿವೆಯೆಂದು ಹೇಳಲಾಗುತ್ತದೆ. ಇಲ್ಲಿನ ದೇಸಾಯಿ ಮನೆತನದ ಸರಸಪ್ಪನಿಗೆ ಸಹಾಯಕರಾಗಿದ್ದ ೭೦೦೦ ಬೇಡರಿಗೆ ಹೊಸಪೇಟೆ ಕೋಟೆಯ ಸುತ್ತಲೂ ವಾಸಿಸಲು ನಿವಾಸಗಳನ್ನು ಏರ್ಪಡಿಸಲಾಯಿತು. ನಂತರದ ಕಾಲದಲ್ಲಿ ಸಂಭವಿಸಿದ ಮಲೇರಿಯಾ ಕಾಯಿಲೆ ಪರಿಣಾಮವಾಗಿ ಸಮೀಪದ ಗ್ರಾಮಗಳಿಂದ ಎತ್ತರದ ಹೊಸಪೇಟೆಗೆ ಜನರ ವಲಸೆ ಬಂದಿತು ಹಾಗೂ ಪ್ಲೇಗ್‌ನಂತಹ ಕಾಯಿಲೆ ನಿಯಂತ್ರಣಕ್ಕೆ ಇಲ್ಲಿನ ಕೋಟೆಗಳನ್ನು ಕೆಡವಿ ಹಳ್ಳಕೊಳ್ಳಗಳನ್ನು ಮುಚ್ಚಲಾಯಿತು. ಈ ಕೋಟೆಯ ಪ್ರದೇಶದ ಪಶ್ಚಿಮಕ್ಕೆ ಸಂಪೂರ್ಣವಾಗಿ ನಾಯಕರ ಮನೆಗಳೇ ಇವೆ. ಕೋಟೆಯೊಳಗೆ ದೇಸಾಯಿಗಳು, ಪಾಂಡೆಯವರ ವಂಶದವರು ಇದ್ದರು. ಹೊಸಪೇಟೆ ಎಂಬ ಗ್ರಾಮವು ಪೂರ್ವಕಾಲದಲ್ಲಿ ವಿಜಯನಗರದ ರಾಜ್ಯದ ರಕ್ಷಣೆಯಲ್ಲಿದ್ದರೂ ಇದೊಂದು ಚಿಕ್ಕಹಳ್ಳಿಯಾಗಿದ್ದರೂ

ಭದ್ರತರವಾದ ಕೋಟೆ ಕೊತ್ತಲಗಳಿಂದ ಸುರಕ್ಷಿತವಾಗಿತ್ತು ಎಂದು ಚಿಕ್ಕೇರೂರು ಗೋವಿಂದಚಾರ್ಯರು ಅಭಿಪ್ರಾಯ ಪಡುತ್ತಾರೆ. ಹೊಸಪೇಟೆಯ ದುರ್ಗವನ್ನು ಮಾತ್ರ ಅಚ್ಚಳಿಯದೆ ಉಳಿಸಿಕೊಂಡು ಇಲ್ಲಿಯೇ ಕೋಟೆಯಲ್ಲಿ ಒಂದು ಸಿಂಹಾಸನವನ್ನು ಸ್ಥಾಪಿಸಿಕೊಂಡು ಒಂದನೇ ಬುಕ್ಕನು ಆಳ್ವಿಕೆ ಮಾಡಿದಂತೆ ತಿಳಿದುಬರುತ್ತದೆ. ಹಾಳು ಬಿದ್ದ ಕಂದಕ ಕೋಟೆ ಕೊತ್ತಲಗಳು ಕ್ರಿ.ಶ. ೧೯೫೭ ರವರೆಗೆ ಇದ್ದವೆಂದು ತಿಳಿಯುವುದು (ಗೋವಿಂದಾಚಾರ್ಯ,೧೯೬೭:೧೨).

ವರ್ತಕರು

ವಿಜಯನಗರದ ಸಾಮ್ರಾಜ್ಯದ ಆರ್ಥಿಕ ಸ್ಥಿತಿಗತಿಗಳ ವಿವರಣೆಯೂ ರಾಜಧಾನಿಯಾದ ವಿಜಯನಗರದ ಪಟ್ಟಣದೊಂದಿಗೆ ಆರಂಭವಾಗುತ್ತದೆ. ಏಕೆಂದರೆ ರಾಜಧಾನಿಯು ಸಾಮ್ರಾಜ್ಯದ ಜೀವನಾಡಿಯಾಗಿತ್ತು. ೧೫೬೫ರ ರಕ್ಕಸತಂಗಡಿ ಕದನದಲ್ಲಿ ಈ ಪಟ್ಟಣವನ್ನು ಶತ್ರುಗಳು ಆಕ್ರಮಿಸಿಕೊಂಡ ಕೂಡಲೆ ಸಾಮ್ರಾಜ್ಯವೇ ನಾಶವಾಯಿತು.

ಕೃಷ್ಣದೇವರಾಯನ ಕಾಲದಲ್ಲಿ ರಾಜಧಾನಿಯ ವೈಭವ ಶಿಖರಕ್ಕೆ ಏರಿತ್ತು. ೧೫ ಮತ್ತು ೧೬ನೆಯ ಶತಮಾನದಲ್ಲಿ ಈ ಪಟ್ಟಣವನ್ನು ನೋಡಿದ್ದ ಪಾಯೇಸನು ವಿಜಯನಗರವು ರೋಂ ಪಟ್ಟಣದಷ್ಟು ದೊಡ್ಡದಾಗಿತ್ತೆಂದು ಹೇಳಿದ್ದಾನೆ (ಸಿವೆಲ್,೨೦೦೫:೫೩).

ಜನಸಂಖ್ಯೆಯ ಬಗ್ಗೆ ಪಾಯೇಸ್ ಸ್ವಲ್ಪ ಮಾಹಿತಿ ನೀಡುತ್ತಾನೆ. ಅವನ ಪ್ರಕಾರ ರಾಜಧಾನಿಯಲ್ಲಿ ಒಂದು ಲಕ್ಷ ಮನೆಗಳಿದ್ದವು. ಕೃಷ್ಣದೇವರಾಯನ ರಾಜಧಾನಿಯಲ್ಲಿ ೫ ಲಕ್ಷ ಜನರಿದ್ದಾರೆಂದು ಹೇಳಿರುತ್ತಾರೆ. ಈ ಕಾಲದ ಪಟ್ಟಣವು ಈಶಾನ್ಯದಲ್ಲಿ ಆನೆಗೊಂದಿಯಿಂದ ಅಣ್ಣಿಗೆರಲ್ಲಿ ಹೊಸಪೇಟೆಯವರೆಗೂ ಮತ್ತು ವಾಯವ್ಯದಲ್ಲಿ ಕೃಷ್ಣಾಪುರದಿಂದ ನೈರುತ್ಯದಲ್ಲಿ ಕಮಲಾಪುರದವರೆಗೂ ಹಬ್ಬತ್ತು. ಈ ವಿಸ್ತಾರವಾದ ಪ್ರದೇಶದಲ್ಲಿ ಅನೇಕ ಉಪನಗರಗಳಿದ್ದವು. ಪ್ರತಿ ಉಪನಗರದಲ್ಲಿ ಒಂದು ಪ್ರಮುಖ ದೇವಸ್ಥಾನವಿತ್ತು. ಇದರ ಎದುರಿಗೆ ನಗರದ ಅಂಗಡಿ ಮತ್ತು ಮುಖ್ಯಬೀದಿ, ಪ್ರತಿ ಉಪನಗರಕ್ಕೂ ನೀರು ಸರಬರಾಜಿನ ವ್ಯವಸ್ಥೆ ಇತ್ತು (ದೀಕ್ಷಿತ್,೧೯೯೭: ೮೮).

ಕೃಷ್ಣಾಪುರದಿಂದ ಸುಮಾರು ೪ ಮೈಲಿ ದೂರದಲ್ಲಿ ತಿರುಮಲದೇವಿಯವರ ಪಟ್ಟಣ. ಅದರಲ್ಲಿ ಒಂದು (ಹೊಸ) ಪೇಟೆ ಪ್ರಸಿದ್ಧವಾಗಿ ತಿರುಮಲದೇವಿಯರ ಪಟ್ಟಣವೆಂಬ ಹೆಸರು ಹೋಗಿ ಈಗಿನ ಹೊಸಪೇಟೆಯಾಗಿರುವ ಹಾಗೆ ಕಾಣುತ್ತದೆ. ತನ್ನ ಮುಖ್ಯ ರಾಣಿಯ ಹೆಸರಿನಲ್ಲಿ ಈ ಪಟ್ಟಣವನ್ನು ನಿರ್ಮಿಸಿದನು.

[illegible]

[illegible]

[illegible]

[illegible]

[illegible]

[illegible]

[illegible]

ಈ ಉಪನಗರದ ಮತ್ತು ಎಲ್ಲ ಉಪನಗರಗಳ ಆಡಳಿತವು ಸೆಟ್ಟಿ ಪಟ್ಟಣಸ್ವಾಮಿಗಳ ಕೈಯಲ್ಲಿತ್ತೆಂದು ಹೇಳಬಹುದು. ವಿಜಯನಗರಕ್ಕೆಲ್ಲ ಒಬ್ಬ ಮಂತ್ರಿ ಆಡಳಿತಗಾರನಾಗಿದ್ದ.

ಹೊಸಪೇಟೆಯಲ್ಲಿ ವರ್ತಕರು ದೇಶ ವಿದೇಶಗಳೊಂದಿಗೆ ವ್ಯಾಪಾರ ನಡೆಸುತ್ತಿದ್ದ ಆ ನಗರದ ವರ್ತಕರು ಸಂಪತ್ತು ಹೊಂದಿತ್ತು. ಹೆಚ್ಚು ಸಾಲ ಕೊಡುವಷ್ಟಿದ್ದರು ಅಂಗಡಿ ಬೀದಿಗಳಲ್ಲಿ ಅಂತಹ ವರ್ತಕರು ಕನಕರಾಶಿಯ ನಡುವೇ ಇರುತ್ತಿದ್ದರು ಎಂದು ಹೇಳಿರುವುದುಂಟು. ನಗರಗಳಲ್ಲಿ ನಡೆಯುವ ಅಗಾಧವಾದ ವ್ಯಾಪಾರಕ್ಕೆ ಇದು ಸಾಕ್ಷಿಯಾಗಿದೆ. ವಿದೇಶಿ ಪ್ರವಾಸಿಗರಾದ ರಾಬರ್ಟ್ ಸಿವೆಲ್ ಅವರು ಹೇಳಿಕೆ ನೀಡಿದ್ದಾರೆ.

ವಿದೇಶಿಯ ಜನ, ವರ್ತಕರು, ಪ್ರವಾಸಿಗರು ವಿಜಯನಗರದಲ್ಲಿ ಸುರಕ್ಷಿತವಾಗಿದ್ದರೆಂದು ಹೇಳುತ್ತಾನೆ. ಯಾರು ಬೇಕಾದರೂ ಅಡೆತಡೆಗಳಿಲ್ಲದೆ ಸುರಕ್ಷಿತವಾಗಿ ಇಲ್ಲಿರಬಹುದು. ಯಾರಿಂದಲೂ ಅವರಿಗೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದರು. ನಗರಗಳಲ್ಲಿ ಎಲ್ಲ ಸೌಕರ್ಯಗಳಿರುವ ನಗರವೆಂದರೆ ಇದಾಗಿತ್ತು. ಇಲ್ಲಿ ಧಾನ್ಯಗಳು ಸಮೃದ್ಧಿಯಾಗಿದ್ದು ಇವುಗಳೆಲ್ಲ ಅಗ್ಗವಾಗಿ ಸಿಗುತ್ತಿದ್ದವು. ದವಸಧಾನ್ಯಗಳನ್ನು ತರುವ ಎತ್ತಿನ ಗಾಡಿಗಳು ಬೀದಿಗಳಲ್ಲಿ ಕಿಕ್ಕಿರಿದು ಇರುತ್ತಿದ್ದವು. ಕುರಿಯ ಮಾಂಸ ಚೊಕ್ಕಟವಾಗಿರುತ್ತದೆ. ಮಾರುವ ಅಂಗಡಿಗಳು ಇರುತ್ತಿದ್ದವು. ತರಕಾರಿಗಳ ಮಾರಾಟ ಹಳ್ಳಿ ಜನರಿಂದ ಖರೀದಿಸಿ ವರ್ತಕರು ಮಾರಾಟ ಮಾಡುತ್ತಿದ್ದರು (ವಸಂತ ಮಾಧವ,೨೦೦೬:೧೦೫).

ನ್ಯೂನಿಜ್ ನು ಹೇಳುವಂತೆ ಅಕ್ಕಿ ಮತ್ತು ಇತರ ದವಸಧಾನ್ಯಗಳು ಯಥೇಚ್ಛವಾಗಿ ಸಿಗುತ್ತಿದ್ದವು. ಚಿನ್ನದ ಒಡವೆಗಳು, ವಜ್ರ ವೈಡೂರ್ಯ ಮತ್ತು ಮಾಣಿಕ್ಯಗಳನ್ನು ಮಾರುವ ಅಂಗಡಿಗಳ ಬೇರೆ ಬೀದಿಗಳು ಇದ್ದವು. ಹತ್ತಿಯ ಬಟ್ಟೆಗಳು ಮಾರುವ ವರ್ತಕರು ಅಸಂಖ್ಯಾತರಿದ್ದರು. ಕುದುರೆ, ಕತ್ತೆಗಳು ಮತ್ತು ಎತ್ತುಗಳಿಂದ ಸಾಮಾನುಗಳನ್ನು ಮಾರಾಟ ಮಾಡುವುದಕ್ಕೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯುತ್ತಿದ್ದರು.

ವೈಶ್ಯರು ಕೂಡ ವ್ಯಾಪಾರದಲ್ಲಿ ಭಾಗವಹಿಸುತಿದ್ದರು. ವಿದೇಶಿಯದಿಂದ ಬರುವ ವರ್ತಕರಿಗೆ, ಬೇರೆ ರಾಜ್ಯದಿಂದ ಬರುವ ವರ್ತಕರಿಗೆ ದಾರಿಯಲ್ಲಿ ಸಿಕ್ಕಿದ ಕಡೆ ನೀರು ತುಂಬಿಕೊಡುವ ಕೆಲಸಗಳನ್ನು ಮಾಡುತ್ತಿದ್ದರು (ಸಿವೆಲ್,೨೦೦೬:೫೪).

ಈ ಎಲ್ಲಾ ವರ್ತಕರನ್ನು ನಾವು ವಿವಿಧ ಗ್ರಂಥಗಳಲ್ಲಿ ಉಲ್ಲೇಖಿಸಿರುವುದನ್ನು ಅವಲೋಕಿಸಿದರೂ ಇವು ಅನೇಕ ಸಂದರ್ಭಗಳಲ್ಲಿ ಪ್ರಶ್ನಾರ್ಹಗಳಾಗಿವೆ. ಏಕೆಂದರೆ ಈ ದಾಖಲೆಗಳನ್ನು ಹೊರತುಪಡಿಸಿದರೆ

ಉಳಿದ ದಾಖಲೆಗಳಲ್ಲಿ ಅಥವಾ ಆಧಾರಗಳಲ್ಲಿ ಈ ಬಗೆಯ ಉಲ್ಲೇಖಗಳು ಸಿಗದಿರುವುದರಿಂದ ಈ ಹೇಳಿಕೆಗಳು ಸಂದೇಹಾಸ್ಪದವಾಗಿವೆ.

ವರ್ತಕರ ಬಗ್ಗೆ ಅನೇಕ ಶಾಸನಗಳು, ಸಾಹಿತ್ಯ, ಕೃತಿಗಳು ಮತ್ತು ಜಾನಪದ ಕಾವ್ಯಗಳು ಮುಖ್ಯ ಆಧಾರಗಳು. ವಿದೇಶಿಯ ದಾಖಲೆಗಳು ಸಮರ್ಥನೀಯ ಆಕರಗಳಾಗಿರುವುದು ಕಂಡುಬಂದಿವೆ.

ಹೊಸಪೇಟೆಯೂ ತಿರುಮಲ ದೇವಿ ಪಟ್ಟಣ ಎಂಬುವುದನ್ನು ವ್ಯಾಪಾರದ ಮಾರ್ಗವೇ ಸಾಕ್ಷಿಯಾಗಿ ಕಂಡು ಬಂದಿದೆ. ವರ್ತಕರು ಬಂದಿರುವ ದಾರಿಯನ್ನು ದಾಖಲೆ ಮಾಡಿರುವುದು ಕಂಡುಬಂದಿದೆ. ಪಾಯೇಸನು ಕೃಷ್ಣದೇವರಾಯನಿಗೆ ಈ ಪಟ್ಟಣ ಬಹಳ ಇಷ್ಟವಾಗಿತ್ತೆಂದು ಮತ್ತು ತನ್ನ ವರ್ತಕರಿಗೆ ಸರದಾರರಿಗೆ ಇದರಲ್ಲಿ ಮನೆ ಕಟ್ಟಿಕೊಳ್ಳಲು ಆಗ್ರಹಪಡಿಸಿದನೆಂದು ಹೇಳುತ್ತಾನೆ (ರೈ,೨೦೦೬:೮೨).

ಮಧ್ಯಕಾಲೀನದಲ್ಲಿ ವರ್ತಕರಿಂದ ಸಾಮಾಜಿಕ, ಧಾರ್ಮಿಕ ಜನಜೀವನ ಮತ್ತು ಬೇರೆ ದೇಶ, ರಾಜ್ಯಗಳು ಅಥವಾ ಊರುಗಳಿಗೆ ಇರುವ ಸಂಬಂಧಗಳನ್ನು ರಾಮಸ್ವಾಮಿ ಅವರು ಗುರುತಿಸಿದ್ದಾರೆ. ಹೆಚ್ಚಾಗಿ ಶೆಟ್ಟಿ, ಬಣಜಿಗ, ಲಿಂಗಾಯಿತರು ಇವರುಗಳ ಅಲ್ಲದೆ ವಿದೇಶಿ ಪ್ರವಾಸಿಗರು ವಿಜಯನಗರ ಕಾಲದಲ್ಲಿ ಬಂದವರಾ ಆಗಿದ್ದು ಕಂಡು ಬಂದಿದೆ.

ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಸಂತೆ, ಅಂಗಡಿ, ಪೇಟೆ, ಪಟ್ಟಣಗಳಿಗಿರುವ ಪ್ರಾಮುಖ್ಯತೆಯನ್ನು ಎತ್ತಿ ಹೇಳುತ್ತ ಇವುಗಳ ರಚನೆ ಕಾರ್ಯಗಳಿಗೆ ಪ್ರೇರಕ ಶಕ್ತಿಯಾಗಿವೆ. ವರ್ತಕರಗಳಿಂದ ಮಾರ್ಗಗಳು ಸಾಧನೆ ಸಾಗಾಣಿಕೆ, ಸಂತೆ ಸುಂಕ, ಮಾರಾಟ ತೆರಿಗೆ, ಸರಕು ವ್ಯಾಪಾರ ವಿಧಾನ, ವ್ಯಾಪಾರದ ಕೇಂದ್ರ, ಒಳನಾಡು ಹೊರನಾಡಿನ ವ್ಯಾಪಾರಗಳನ್ನು ತಿಳಿಸುತ್ತದೆ (ರಾಮಸ್ವಾಮಿ,೧೯೯೭:೮೯).

ವರ್ತಕರ ಅಧಿಕಾರಿಗಳಿಗೆ 'ಪಟ್ಟಣ ಸ್ವಾಮಿ'ಗಳೆಂದು ಕರೆಯುತ್ತಿದ್ದು ಕಂಡುಬರುತ್ತದೆ. ವರ್ತಕರ ಆಗಮನದಿಂದ ಮಧ್ಯಕಾಲೀನದಲ್ಲಿ ಅನೇಕ ವೃತ್ತಿಗಳು ಹುಟ್ಟಿಕೊಂಡವು.

ಕೃಷ್ಣದೇವರಾಯನು ತನ್ನ ಪಟ್ಟದರಸಿ, ತಿರುಮಲಾದೇವಿಯ ಹೆಸರಿನಲ್ಲಿ ಪಟ್ಟಣವನ್ನು ನಿರ್ಮಿಸುತ್ತಾನೆ ಹಾಗೂ ತಿರುವೆಂಗಳನಾಥ ಮತ್ತು ಗೌರೇಶ್ವರ ದೇವಾಲಯಗಳನ್ನು ಕಟ್ಟಿಸಿ ದತ್ತಿ ಬಿಡುತ್ತಾನೆ. ಈ ಪಟ್ಟಣಗಳಲ್ಲಿ ಶೆಟ್ಟಿ, ಪಟ್ಟಣ ಸ್ವಾಮಿಗಳು ಗಣ್ಯ ವರ್ತಕರಾಗಿದ್ದರು. ಪಾಯಸ್ ಹೇಳಿಕೆಗಳಲ್ಲೂ ಈ ಅಂಶವನ್ನು ಕಾಣಬಹುದು. ಬಿಸಲಹಳ್ಳಿಯ ಕಣವೆ ಹಾದಿ ಮೇಲಿನ ದಾರಿಯನ್ನು ಮಹಾಪಥವೆಂದು ಕರೆಯಲಾಗಿದೆ. ಈ ದಾರಿಯ ಮೂಲಕವೇ ತಿರುಮಲಾದೇವಿ ಪಟ್ಟಣ ಪಶ್ಚಿಮ ಕರಾವಳಿಯ ವ್ಯಾಪಾರ ವ್ಯವಹಾರಗಳು ಈ ಮೂಲಕವೇ ನಡೆಯುತ್ತಿದ್ದವೆಂದು ಕಂಡುಬರುತ್ತದೆ (ಸಿವೆಲ್,೨೦೦೬:೧೦೮).

[illegible]

ವಿಜಯನಗರ ಕಾಲದಲ್ಲಿ ಸಣ್ಣಕ್ಕಿ ವೀರಭದ್ರದೇವರ ಗುಡಿಯ ಪರಿಸರಕ್ಕೆ ಸಣ್ಣಕ್ಕಿ ಪೇಟ ಎಂಬ ಹೆಸರಿತ್ತೆಂದು ಇದೇ ತಿರುಮಲಾದೇವಿ ಪಟ್ಟಣವಾಗಿದ್ದು, ಇದು ಇಲ್ಲಿ ವ್ಯಾಪಾರಿ ಪೇಟೆಯ ಪ್ರದೇಶವಾಗಿತ್ತು.

ವ್ಯಾಪಾರಿ ಬಳಗಕ್ಕೆ ಸೇರಿದ್ದ ಶೆಟ್ಟಿ, ಪಟ್ಟಣ ಸ್ವಾಮಿಗಳು, ಬಣಜಿಗರು ದಾನಗಳನ್ನೇ ನೀಡುತ್ತಿದ್ದನ್ನ ಶಾಸನಗಳಲ್ಲಿ ಬರಿಸುತ್ತಿದ್ದರು. ಗೌರೀಶ್ವರ ಎಂಬ ಹೆಸರಿನ ಈಶ್ವರ ದೇವರ ಶೆಟ್ಟಿ ಬನಜಿಗರ ಕುಲದೇವತೆಯಾಗಿತ್ತು. ಇವರು ಶೈವ ಪಂಥಕ್ಕೆ ಸೇರಿದವರು. ಕೃಷ್ಣದೇವರಾಯನು ವಿಜಯನಗರದಿಂದ (ಹಂಪಿ) ಬಂದ ವರ್ತಕರಿಗೆ ತಿರುಮಲಾದೇವಿ ಪಟ್ಟಣದಲ್ಲಿ ವಾಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟನು (ಮಹದೇವ,೨೦೦೨:೯೨).

ಚಿತ್ತವಾಡ್ಗಿ ಶನಿವಾರ ಸಂತೆಯನ್ನು ತಿರುಮಲದೇವಿ ಪಟ್ಟಣಕ್ಕೆ ವರ್ಗಾಯಿಸಲಾಯಿತು. ಸಂತೆ ಮಾಡಿಸುವುದರಿಂದ ಮಾತ್ರ ಗ್ರಾಮವು ಪಟ್ಟಣವೆನಿಸಿಕೊಳ್ಳುತ್ತಿದ್ದಿತು. ಇದರಿಂದ ಮಧ್ಯಕಾಲೀನರಲ್ಲಿ ವಿಜಯನಗರದ ಪ್ರತಿಯೊಂದು ಪಟ್ಟಣದಲ್ಲಿಯೂ ಸಂತೆ ಜರುಗುತ್ತಿದುದು ತಿಳಿಯುತ್ತದೆ. ಕೆಲವು ಸಲ ಸಂತೆ ಕಟ್ಟಿಸಿ ಗ್ರಾಮವನ್ನು ಪಟ್ಟಣವನ್ನಾಗಿ ಪರಿವರ್ತಿಸುತ್ತಿದ್ದರು.

ಹೊಸದಾಗಿ ನಿರ್ಮಾಣವಾದ ಪಟ್ಟಣ ಮೂಲ ಗ್ರಾಮದಿಂದ ಪ್ರತ್ಯೇಕವಾಗಿರುತ್ತಿದ್ದುದನ್ನು "ಬೇವೂರ"[೧] ಶಾಸನ ಹೇಳುತ್ತದೆ. ಪಟ್ಟಣಗಳನ್ನು ನಿರ್ಮಾಣದ ಮೂಲೋದ್ದೇಶ ವರ್ತಕರು ನೆಲೆಗೊಂಡು ವಾಣಿಜ್ಯೋದ್ಯಮ ಬೆಳೆಸುವುದು. ಇದರಿಂದ ನಾನಾ ಭಾಗದ ವರ್ತಕ ಕುಟುಂಬಗಳು ಹೊಸ ಪಟ್ಟಣದಲ್ಲಿ ಬಂದು ನೆಲೆಸುತ್ತಿದ್ದರು. ಹೊಸದಾಗಿ ಕಟ್ಟಿಸಿದ ಪಟ್ಟಣದಲ್ಲಿ ಬಂದು ವಾಸಿಸುವ ವರ್ತಕರಿಗೆ ವಿಶೇಷ ಸೌಲಭ್ಯ, ಕರದ ವಿನಾಯಿತಿ ಒದಗಿಸುತ್ತದೆ.

ಗೌಡ ಪ್ರಭುಗಳು ಗ್ರಾಮಗಳು ವ್ಯಾಪಾರ ಚಟುವಟಿಕೆಯ ಪ್ರಧಾನ ಕೇಂದ್ರ ಸ್ಥಳಗಳಾಗಿ ರೂಪಗೊಳಿಸಲು ಪಟ್ಟಣಗಳಾಗಿ ಮಾಡುತ್ತಿದ್ದರು. ಪಟ್ಟಣ ಕಟ್ಟಿಸಿ ಶೆಟ್ಟಿಗಳಿಗೆ ಶಿಲಾಶಾಸನ ಹುಡಿಕಿಸಿಕೊಡುತ್ತಿದ್ದರು. ಬೇವೂರ ಶಾಸನದಲ್ಲಿ ಪಟ್ಟಣದ ವಿಸ್ತಾರದ ಬಗ್ಗೆ ಮಾಹಿತಿ ಇದೆ.

ಅರಸನ ಸಂಪ್ರೀತಿಗಾಗಿಯೇ ಶುಭಹಾರೈಕೆಗಾಗಿಯೇ ಅಧಿಕಾಗಳು ಕಟ್ಟಿಸಿದ ಪಟ್ಟಣಗಳಿಗೆ ಅರಸು ಮತ್ತು ಅವರ ಮಕ್ಕಳ ಹೆಸರು ಇಡುತ್ತಿದ್ದರು. ಈ ಸಂಪ್ರದಾಯ ವಿಜಯನಗರ ಕಾಲದಲ್ಲಿ ಪ್ರಾರಂಭವಾಯಿತು.

ಉದಾಹರಣೆಗೆ ವಿಜಯನಗರ ಅರಸು ವೀರ ಬುಕ್ಕರಾಯ ಒಡೆಯರ ಮಗ ಕುಮಾರ ಕಂಡ ರಾಜನ ಹೆಸರಿನಲ್ಲಿ ಕಂಡರಾಜ ಪಟ್ಟಣ ನಿರ್ಮಾಣವಾಯಿತು (ಹಿರೇಮಠ,೧೯೮೯:೪೪) .

ಕೃಷ್ಣದೇವರಾಯನು ವರ್ತಕರ ಸುರಕ್ಷಿತ ದೃಷ್ಟಿಯಿಂದ ಇವರು ವಾಸಿಸುವ ಸ್ಥಳ ನಿರ್ಮಾಣ ಮಾಡುವುದಕ್ಕೆ ತಿರುಮಲದೇವಿ ಪಟ್ಟಣವನ್ನು ಆಯ್ಕೆ ಮಾಡಿಕೊಂಡಿದ್ದನು.

ಕೃಷ್ಣದೇವರಾಯನು ಪೇಟೆ, ಪಟ್ಟಣಗಳನ್ನು ನಿರ್ಮಿಸಿ ರಾಜ್ಯದ ಆದಾಯ, ಉದ್ಯೋಗ ಅವಕಾಶ, ಸಾರಿಗೆ ಸಂಪರ್ಕ, ಜನರ ಜೀವನಮಟ್ಟವನ್ನು ಉಚ್ಛಸ್ಥಿತಿಗೇರಿಸಿದನು.

ಅಡಿಟಿಪ್ಪಣಿ

೦೧. ಬೇವೂರುಶಾಸನ : ಈ ಶಾಸನವು ಕ್ರಿ.ಶ. ೧೩೩೧ರದ್ದು ಈ ಶಾಸನವು ಚನ್ನಪಟ್ಟಣದಲ್ಲಿ ದೊರೆತಿದೆ. ಪಟ್ಟಣಗಳು ಮೂಲ ಗ್ರಾಮದಿಂದ ಪ್ರತ್ಯೇಕವಾಗಿರುತ್ತಿದುದನ್ನು ಬೇವೂರು ಶಾಸನ ಹೇಳುತ್ತದೆ. ಬೇವೂರು ಒಂದು ೧೩೩೧ರಲ್ಲಿ ಪಟ್ಟಣವಾಗಿತ್ತು.

೦೨. ತೂಬು : ಕೆರೆಯ ನೀರು ಹೋಗಲು ನಿರ್ಮಿಸಲಾಗಿತ್ತು. ಗಾರೆಗಚ್ಚಿನ ತೂಬು ನಿರ್ಮಿಸಲಾಗುತ್ತಿತ್ತು. ತೂಬು ಕಲ್ಲುಗಳಿಗೆ ವಿಶೇಷವಾಗಿ ಕೆತ್ತನೆ ಮಾಡಲಾಗಿದೆ.

೦೩. ವಿಜಯನಗರದ ಉಪನಗರಳು : ಕಮಲಾಪುರ, ಕೃಷ್ಣಾಪುರ, ಅಚ್ಯುತಾಪುರ, ವಿಠ್ಠಲಾಪುರ, ಮಲಪನಗುಡಿ, ಅನಂತಶಯನಗುಡಿ, (ಶಾಲೆ ತಿರುಮಲರಾಯ ಪಟ್ಟಣ) ತಿರುಮಲಾದೇವಿ ಪಟ್ಟಣ, ವರದರಾಜಮ್ಮನ ಪಟ್ಟಣ ಅನಂತಾಪುರು ವೆಂಕಟಾಪುರು, ಆನೆಗೊಂದಿ, ನಿಂಬಾಪುರ, ನಾಗಲಾಪುರ.

* * * * *

ಅಧ್ಯಾಯ ೪

ಆಧುನಿಕ ಹೊಸಪೇಟೆ

ಮದ್ರಾಸ ಪ್ರೆಸಿಡೆನ್ಸಿ ಸೇರ್ಪಡೆಗೊಂಡಾಗ ಬಳ್ಳಾರಿ ಜಿಲ್ಲೆಯಲ್ಲಿ ಹೋಸಪೇಟೆ ಭೌಗೋಳಿಕ ವಿಸ್ತೀರ್ಣ.



(ಮ್ಯಾನುಯಲ್ ಆಫ್ ಮದ್ರಾಸ್ ಪ್ರೆಸಿಡ್‌ನ್ಸಿ, ಬಳ್ಳಾರಿ ಗ್ರೆಸೆಟಿಯರ್, ೧೯೮೭)



ತಿರುಮಲಾದೇವಿ ಪಟ್ಟಣ ವಿಜಯನಗರದ ಪತನದ ನಂತರ ಬಿಜಾಪುರದ ಆದಿಲ್‌ಶಾಹಿಗಳ ಅಧೀನದಲ್ಲಿತ್ತು. ಆದರೆ ವಾಸ್ತವವಾಗಿ ಸ್ಥಳೀಯ ಪಾಳೆಯಗಾರರು ಈ ಪ್ರದೇಶವನ್ನು ಆಳಿದರು. ನಂತರ ತಿರುಮಲಾದೇವಿ ಪಟ್ಟಣವು ಹರಪನಹಳ್ಳಿ ಪಾಳೆಯಗಾರರ ಉಪರಾಜಧಾನಿಯಾಗಿತ್ತು. ಕ್ರಿ.ಶ.೧೬೭೭-೭೮ರ ಸುಮಾರಿನಲ್ಲಿ ಮರಾಠರ ಶಿವಾಜಿಯು ಈ ಪ್ರದೇಶವನ್ನು ಆಕ್ರಮಿಸುತ್ತಾನೆ. ಕ್ರಿ.ಶ. ೧೬೮೦ರಲ್ಲಿ ಸ್ವತಃ ಬಿಜಾಪುರದ ಸುಲ್ತಾನ ಈ ಪ್ರದೇಶವನ್ನು ಮರಾಠರಿಗೆ ಒಪ್ಪಿಸುತ್ತಾನೆ (ಕಾಮತ್,೧೯೭೩:೪).

ಅಂದಿನಿಂದ ಹರಪನಹಳ್ಳಿ ಪಾಳೆಯಗಾರರು ಮರಾಠರಿಗೆ ಕಪ್ಪ ಕಾಣಿಕೆ ಒಪ್ಪಿಸಲು ಆರಂಭಿಸುತ್ತಾರೆ. ೧೬೮೭ ರಲ್ಲಿ ಔರಂಗಜೇಬನು ದಕ್ಷಿಣದಲ್ಲಿ ಕೈಗೊಂಡ ದಾಳಿಯ ಪರಿಣಾಮವಾಗಿ ಹೊಸಪೇಟೆಯು ಆದೀಲ್‌ಶಾಹಿ ಅಧೀನವಾಯಿತು. ಈ ರೀತಿ ಬಳ್ಳಾರಿ ಪ್ರದೇಶವು ಬಿಜಾಪುರದ ಮೊಗಲ್ ಸುಬೇದಾರರ ಆಡಳಿತಕ್ಕೆ ಸೇರಿಕೊಂಡಿತು (ಕುಂಬಾಸ,೧೯೯೦:೪೮).

ನಂತರದ ವರ್ಷಗಳಲ್ಲಿ ಹರಪನಹಳ್ಳಿ ಪಾಳೆಯಗಾರನಾದ ಸೋಮಶೇಖರ ನಾಯಕನು ಚಿತ್ರದುರ್ಗ ನಾಯಕರನ್ನು ಸೋಲಿಸಿದ ವಿಜಯ ಯಾತ್ರೆಯ ನೆನಪಿಗಾಗಿ ಹೊಸಪೇಟೆಯಲ್ಲಿ ಆನೆಯ ಮೇಲೆ ಮೆರವಣಿಗೆಯನ್ನು ಮಾಡಿಸಿಕೊಂಡನೆಂದು ತಿಳಿದು ಬರುತ್ತದೆ (ವಿರೂಪಾಕ್ಷಿ,೨೦೦೪:೭೪).

ಇದರ ಸ್ಮಾರಕವಾಗಿ ಆನೆಯ ಮೇಲೆ ಸವಾರಿ ಮಾಡುತ್ತಿರುವ ಚಿತ್ರವನ್ನು ಶಿಲೆಯ ಮೇಲೆ ಕೆತ್ತಿಸಲಾಯಿತು. ಇದು ಹೊಸಪೇಟೆಯ ನಗರ ಸಹಕಾರಿ ಬ್ಯಾಂಕಿಗೆ ಸಮೀಪದಲ್ಲಿದೆ. ಈತನ ಕಾಲದಲ್ಲಿ ಜಿಗಳಿಕಟ್ಟೆ, ವಿರೂಪಾಕ್ಷಪುರ, ವಿಜಯಪುರ, ನಾಗಲಾಪುರ, ಹಂದಿಗನೂರು ಗ್ರಾಮಗಳನ್ನು ತಿರುಮಲಾದೇವಿ ಪಟ್ಟಣಕ್ಕೆ ಸೇರಿಸಿ ಹೊಸದಾಗಿ ಪೇಟೆಯನ್ನು ಮಾಡಲಾಯಿತೆಂದು ಹೇಳಲಾಗಿದೆ (ಮಹದೇವ,೨೦೦೨:೫೭).

೧೭೬೨ರಲ್ಲಿ ಹೈದರಾಲಿ ದಂಡೆತ್ತಿ ಬಂದನು. ಆ ಸಂದರ್ಭದಲ್ಲಿ ಹರಪನಹಳ್ಳಿ ಪಾಳೆಯಗಾರನು ಹೈದರನ ಆಧಿಪತ್ಯವನ್ನು ಒಪ್ಪಿಕೊಂಡು ಕಪ್ಪ ಕಾಣಿಕೆ ಸಲ್ಲಿಸುತ್ತಾನೆ. ೧೭೬೮ರಲ್ಲಿ ಸೋಮಶೇಖರ ನಾಯಕನು ತೀರಿಕೊಳ್ಳುತ್ತಾನೆ. ಕ್ರಿ.ಶ. ೧೭೭೫ರಲ್ಲಿ ಹೈದರಾಲಿಯು ಮತ್ತೊಮ್ಮೆ ಈ ಪ್ರದೇಶಕ್ಕೆ ಸೈನ್ಯ ಸಮೇತವಾಗಿ ಬಂದು ಎರಡು ಲಕ್ಷ ರೂಪಾಯಿಗೂ ಮೇಲ್ಪಟ್ಟು ನಾಯಕರಿಂದ ಕಾಣಿಕೆ ಪಡೆದನು. ೧೭೮೭ರಲ್ಲಿ ಟಿಪ್ಪು ಸುಲ್ತಾನನು ತನ್ನ ಆದವಾನಿ ದಾಳಿ ಮುಗಿಸಿ ಈ ಪ್ರದೇಶದ ಮೂಲಕ ಮೈಸೂರಿಗೆ ಹೋಗುವಾಗ ಹರಪನಹಳ್ಳಿ ಪಾಳೆಯಗಾರರನ್ನು ಸೋಲಿಸಿದನು.

ಕ್ರಿ.ಶ. ೧೭೯೨ರ ३ನೇ ಮೈಸೂರು ಯುದ್ಧದ ನಂತರ ಟಿಪ್ಪು ಮೈಸೂರು ರಾಜ್ಯದ ಅರ್ಧಭಾಗವನ್ನು ಇಂಗ್ಲೀಷರಿಗೆ ಬಿಟ್ಟುಕೊಡುತ್ತಾನೆ. ಹೀಗಾಗಿ ಬಳ್ಳಾರಿ ಪ್ರದೇಶವು ಬ್ರಿಟೀಷರ ಆಳ್ವಿಕೆಗೆ ಬರುತ್ತದೆ. ಕ್ರಿ.ಶ. ೧೭೯೦ರ ಒಪ್ಪಂದದಂತೆ ಮರಾಠ ನಿಜಾಮ ಮತ್ತು ಇಂಗ್ಲೀಷರು ಸೇರಿ ಈ ಅರ್ಧಭಾಗವನ್ನು ಸಮವಾಗಿ ಹಂಚಿಕೊಳ್ಳುತ್ತಾರೆ.

ಬಳ್ಳಾರಿ ಪ್ರದೇಶದ ಕೆಲವು ಭಾಗಗಳು ನಿಜಾಮನಿಗೆ ಹೋದವು. ನಾಗರಾಜ್ ಅವರ ಪ್ರಕಾರ 'ನಿಜಾಮನ ಅಧಿಕಾರಿಗಳ ದೌರ್ಬಲ್ಯದಿಂದಾಗಿ ಪಾಳೆಯಗಾರರು ಪುನಃ ತಮ್ಮ ಪ್ರಾಬಲ್ಯ ಸ್ಥಾಪಿಸಲು ಮುಂದಾದರು. ಕ್ರಿ.ಶ. ೧೭೯೯ರಲ್ಲಿ ನಡೆದ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಹತನಾದನು. ಪರಿಣಾಮವಾಗಿ ಹರಪನಹಳ್ಳಿ ಸೇರಿದಂತೆ ೬ ತಾಲ್ಲೂಕುಗಳನ್ನು (ಹೊಸಪೇಟೆ ಪ್ರದೇಶವು ಸೇರಿತ್ತು) ಪೇಶ್ವೆಗೆ ವಹಿಸಲಾಯಿತು. ಜಿಲ್ಲೆಯ ಉಳಿದ ಭಾಗವನ್ನು ನಿಜಾಮನಿಗೆ ನೀಡಲಾಯಿತು. ಆದರೆ ಕ್ರಿ.ಶ. ೧೮೦೦ರಲ್ಲಿ ನಿಜಾಮ ಮತ್ತು ಇಂಗ್ಲೀಷ್ ಸೈನ್ಯ ಇಡುವುದರ ಬಗ್ಗೆ ಒಪ್ಪಲಾಯಿತು. ನಿಜಾಮನು ಅದಕ್ಕೆ ಪ್ರತಿಯಾಗಿ ದತ್ತಿ ರೂಪದಲ್ಲಿ ಬಳ್ಳಾರಿ ಕರ್ನೂಲ್ ಕಡಪ ಮತ್ತು ಅನಂತಪುರ ಪ್ರದೇಶಗಳನ್ನು ಇಂಗ್ಲೀಷರಿಗೆ ನೀಡುತ್ತಾನೆ. ಇವುಗಳನ್ನು ಜತ್ತಿ ಜಿಲ್ಲೆಗಳೆಂದು ಕರೆಯಲಾಗಿದೆ. ನಿಜಾಮ ಹಾಗೂ ಇಂಗ್ಲೀಷರ ಪ್ರದೇಶಗಳಿಗೆ ತುಂಗಭದ್ರಾ ನದಿಯು ಗಡಿಯಾಗುತ್ತದೆ. ಅಂದಿನಿಂದ ಈ ಪ್ರದೇಶ ಮದ್ರಾಸ್ ರಾಜ್ಯದ ಭಾಗವಾಗಿ ಬ್ರಿಟಿಷರ ಆಡಳಿತಕ್ಕೊಳಪಟ್ಟಿತು" (ನಾಗರಾಜ್,೧೯೯೬: ೯೯).

ವಿಜಯನಗರದ ಅವನತಿಯ ನಂತರ ಪಾಳೆಯಗಾರರ ಕಾಲದಲ್ಲಿ ಹೊಸಪೇಟೆ ಪಟ್ಟಣವು ಹಲವು ಪರಿವರ್ತನೆಗೆ ಒಳಗಾಯಿತು. ನಂತರದಲ್ಲಿ ಹೊಸಪೇಟೆಗೆ ಹೊಂದಿಕೊಂಡಿದ್ದ ಹೊಸೂರು ಮತ್ತು ಚಿತ್ತವಾಡಿಗಿ ಗ್ರಾಮಗಳು ಮಲೇರಿಯಾದಿಂದ ಬಳಲುತ್ತಿದ್ದವು. ಈ ಕಾರಣದಿಂದಾಗಿ ಜನರು ಹೊಸೂರು ಮತ್ತು ಚಿತ್ತವಾಡಿಗಿ ಗ್ರಾಮಗಳನ್ನು ಬಿಟ್ಟು ಹೊಸದಾಗಿ ಪಟ್ಟಣ ನಿರ್ಮಿಸಿಕೊಳ್ಳಲು ಪ್ರಯತ್ನ ಮಾಡಿದರು.

[illegible]

[illegible]

[illegible]

[illegible]

ಇದರ ಫಲವಾಗಿ ಹೊಸಪೇಟೆಗೆ ಈ ಭಾಗದ ಜನರ ವಲಸೆಯುಂಟಾಯಿತು. ನಗರದ ಬೆಳವಣಿಗೆಗೆ ಇದು ಪ್ರಮುಖ ಕಾರಣವೆನ್ನಬಹುದು. ಕಾಲಾನುಕ್ರಮದಲ್ಲಿ ಹೊಸಪೇಟೆಯಲ್ಲಿದ್ದ ಕೋಟೆಯ ಭಾಗಗಳು ಹಾಳಾಗಿ ಪಟ್ಟಣವು ವಿಸ್ತೃತವಾಗಿ ಬೆಳೆದು, ವಿಶಾಲ ರಸ್ತೆಯುಳ್ಳ ಹೊಸಪೇಟೆಯಾಯಿತು. ಹಳ್ಳಿಯ ಗ್ರಾಮಗಳಾದ ನಾಗಲಾಪುರ, ತಿರುಮಲರಾಯಪುರ, ಹಂದಿಗನೂರು ಮತ್ತು ವಿಜಯಪುರಗಳು ಹೊಸಪೇಟೆಯ ಅವಿಭಾಜ್ಯ ಅಂಗಗಳಾದವು. ತಮ್ಮ ಹಳೆಯ ಹೆಸರುಗಳನ್ನು ಕಳೆದುಕೊಂಡವು. ವಿಸ್ತಾರವಾಗಿ ಬೆಳೆದ ಹೊಸಪೇಟೆಯು ಇಂದು ಚಿತ್ತವಾಡಿಗಿ, ಮುದ್ದಲಾಪುರ ಗ್ರಾಮಗಳನ್ನು ಸಹ ಒಳಗೊಂಡಿದೆ (ಮಹದೇವ,೨೦೦೨:೮೪).

ಹೊಸಪೇಟೆಯು ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿತು. ನಂತರ ವರ್ಷಗಳಲ್ಲಿ ಹೊಸಪೇಟೆಯನ್ನು ಸೇರಿಸಿಕೊಂಡಂತೆ ಬಳ್ಳಾರಿ ಪ್ರದೇಶದಲ್ಲಿ ಬ್ರಿಟಿಷ್ ಕಲೆಕ್ಟರ್‌ಗಳು ಆಡಳಿತ ನಡೆಸಿದರು. ಚರಿತ್ರೆಯ ಘಟ್ಟದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಬದಲಾವಣೆ ಹೊಂದಿ ಆಧುನಿಕತೆಗೆ ಹೊಸಪೇಟೆಯು ಕಾಲಿಟ್ಟಿತು. ಕಲೆಕ್ಟರ್ ಕಾಲದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಬದಲಾವಣೆಗಳಾದವು. ರಸ್ತೆ ಸಾರಿಗೆ, ರೈಲ್ವೆ ಸಂಪರ್ಕ, ಅಂಚೆ, ಟೆಲಿಫೋನ್‌ಗಳ ಪ್ರಾಬಲ್ಯ ಈ ಭಾಗದಲ್ಲಿ ಬಲವಾಯಿತು (ಗ್ಯಾಸೆಟಿಯರ್ ಬಳ್ಳಾರಿ,೧೯೯೭:೧೦೪).



ಹೊಸಪೇಟೆ ಪ್ರದೇಶದ ಭೂ ವಿಸ್ತೀರ್ಣ



ಸರ್ ಥಾಮಸ್ ಮನ್ರೋ ಈ ಪ್ರದೇಶದ ಮೊದಲ ಕಲೆಕ್ಟರ್ ಆಗಿ ನೇಮಕಗೊಂಡನು. ಜನರಲ್ ೧ಡುಗಾಲ್ಡ್ ಕಾಂಪ್‌ಬೆಟ ಸೈನ್ಯದ ಮುಖ್ಯಸ್ಥನಾಗಿ ನೇಮಕಗೊಂಡನು. ೮೧೭ರಲ್ಲಿ ಪಿಂಡಾರಿಗುಂಪುಗಳು ದಾಂದಲೆ ನಡೆಸುತ್ತ ಹೊಸಪೇಟೆ ಒಳಗೊಂಡಂತೆ ತುಂಗಾಭದ್ರಾ ನದಿ ದಂಡೆಯ ಹಳ್ಳಿಗಳ ಮೇಲೆ ದಾಳಿ ನಡೆಸಿ ಹರಪನಹಳ್ಳಿ ತಲುಪಿ ಖಜಾನೆಗಳನ್ನು ಲೂಟಿ ಮಾಡಿದರು. ನಂತರ ಕೊಟ್ಟೂರು ಮತ್ತು ಕೂಡ್ಲಿಗಿ ಪ್ರದೇಶದ ಮೇಲೂ ದಾಳಿ ಮಾಡಿದರೆಂಬುದು ಗಮನಾರ್ಹ.

ಕ್ರಿ.ಶ ೧೮೧೮ರಲ್ಲಿ ವಿಲಿಯಂ ಚಾಪ್ಲಿನ್ ಕಲೆಕ್ಟರನಾಗಿದ್ದಾಗ ಮನ್ರೋ ರೈತವಾರಿ ಪದ್ಧತಿಯನ್ನು ಅಳವಡಿಸಿದನು. ಪ್ರತಿಯೊಂದು ಗ್ರಾಮದ ರೈತರಿಂದ ಕಂದಾಯವನ್ನು ಕಲೆಕ್ಟರನು ವಸೂಲಿ ಮಾಡುತ್ತಿದ್ದನು. ಇದನ್ನು ವಿರೋಧಿಸಿ ರೈತರು ದಂಗೆ ಮಾಡಿದರು. ಈ ಬಗೆಯ ದಂಗೆಗಳು ಸಣ್ಣ ಪುಟ್ಟ ಗ್ರಾಮಗಳಲ್ಲಿ ಅಲ್ಲಲ್ಲಿ ನಡೆದಿತ್ತು.

ಆನಂತರ ೧೮೨೪ರಿಂದ ೧೮೩೪ರವರೆಗೆ ಎಫ್.ಡಬ್ಲ್ಯೂ. ರಾಬರ್ಟ್‌ಸನ್ ಎಂಬ ಕಲೆಕ್ಟರ್ ಗ್ರಾಮಾಧಿಕಾರದ ಆಡಳಿತವನ್ನು ಸರ್ಕಾರದ ಸಂಪೂರ್ಣ ನಿಯಂತ್ರಣಕ್ಕೊಳಪಡಿಸಿದನು. ಇವನು ಮನ್ರೋನ ಸುಧಾರಣೆಗಳಿಗೆ ಪುನಶ್ಚೇತನ ಕೊಟ್ಟನು. ಈತನು ನೀರಿನ ವ್ಯವಸ್ಥೆಯನ್ನು ಸುಧಾರಿಸಿ ಕಾಲುವೆಗಳನ್ನು ನಿರ್ಮಿಸಿದನು. ಇವುಗಳ ಮೇಲೆ ಕಂದಾಯ ಹಾಕಿದನು (ಗ್ಯಾಸೇಟಿಯರ್, ೧೯೦೪: ೧೬೬).



ಕಲೆಕ್ಟರ್ ಕಾಲದ ನಿರ್ಮಾಣದ ಕಾಲುವೆ



ಆ ಸಮಯದಲ್ಲಿ ಹೊಸಪೇಟೆಯು ಕಂಪ್ಲಿಯ ತಾಲ್ಲೂಕಿನಲ್ಲಿ ಸೇರಿತ್ತು. ೧೮೫೧ರಲ್ಲಿ ತಾಲ್ಲೂಕು ಸ್ಥಾನರೂಪವು ಕಂಪ್ಲಿಯಿಂದ ಹೊಸಪೇಟೆಗೆ ವರ್ಗಾಯಿಸಲ್ಪಟ್ಟಿತು. ನಂತರ ಹೊಸಪೇಟೆ ತಾಲೂಕು ಕೇಂದ್ರದಿಂದ ಆಡಳಿತ ನಡೆಸಲು ವ್ಯವಸ್ಥೆ ಮಾಡಿತು. ಹೊಸಪೇಟೆಯ ರೀತಿಯಲ್ಲೆ ಬಳ್ಳಾರಿ ಮತ್ತು ಸಿರುಗುಪ್ಪ



ತಾಲೂಕು ಪಂಚಾಯತಿ (೧೮೫೧) ಹೊಸಪೇಟೆ

ಪ್ರದೇಶಗಳ ಆಡಳಿತ ವಿಭಾಗಗಳಾದವು. ವಿಶೇಷವಾಗಿ ಕೆರೆ ಕಾಲುವೆಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಲಾಯಿತು. ಹೊಸಪೇಟೆ ಉಪ ವಿಭಾಗದಲ್ಲಿ ಸಬ್ ಕಲೆಕ್ಟರ್‌ನೊಬ್ಬ ಇದ್ದನು. ನ್ಯಾಯಾಲಯವು ಕೂಡ್ಲಿಗಿ ತಾಲ್ಲೂಕಿನಲ್ಲಿತ್ತು. ನಂತರ ಬ್ರಿಟಿಷರು ೧೯೦೦ರಲ್ಲಿ ನ್ಯಾಯಾಲಯವನ್ನು ಹೊಸಪೇಟೆಗೆ ವರ್ಗಾಯಿಸಿದರು. ೧೮೦೦ರಿಂದ ೧೯೪೭ರವರೆಗೆ ಬಳ್ಳಾರಿ ಪ್ರದೇಶದಲ್ಲಿ ೧೧೫ ಜನ ಕಲೆಕ್ಟರುಗಳು ಆಳ್ವಿಕೆ ನಡೆಸಿದರು.[೧] ಒಬ್ಬ ಕಲೆಕ್ಟರ್ ಎಷ್ಟು ವರ್ಷ ಬೇಕಾದರೂ ಆಡಳಿತ ನಡೆಸಬಹುದಿತ್ತು. ಆದರೆ ಅವನು ಆಡಳಿತ ನೀತಿ ರಾಜಕೀಯ ಪರಿಸ್ಥಿತಿ, ಜನಜೀವನ ಸ್ಥಿತಿಗತಿಗಳನ್ನು ಅವಲಂಬಿಸಿತ್ತು. ಕಲೆಕ್ಟರುಗಳ ಕಾಲದಲ್ಲಿ ಈ ಮುಖ್ಯ ಸುಧಾರಣೆಗಳು ಹೀಗಿವೆ (ಗ್ಯಾಸೇಟಿಯರ್,೧೯೦೪:೧೬೭).

ಕ್ರಿ.ಶ. ೧೮೭೩ರಲ್ಲಿ ಪಟ್ಟಣಗಳಿಗೆ ನೀರು ಸರಬರಾಜು ಯೋಜನೆ ರೂಪಿಸಿದರು.

ಕ್ರಿ.ಶ. ೧೮೮೨ರಲ್ಲಿ ಜಿಲ್ಲೆಯ ಕಂದಾಯ ಆಡಳಿತದ ಪ್ರಮುಖ ಉಪವಿಭಾಗವಾಗಿ ಹೊಸಪೇಟೆಯನ್ನು ಮಾಡಿದರು.

ಕ್ರಿ.ಶ. ೧೮೮೫ರಲ್ಲಿ ಹೊಸಪೇಟೆಯಿಂದ ಧಾರವಾಡ ರೈಲ್ವೆ ಮಾರ್ಗವನ್ನು ನಿರ್ಮಾಣ ಮಾಡಲಾಯಿತು.



ಕ್ರಿ.ಶ. ೧೮೫೮ರಲ್ಲಿ ಹೊಸಪೇಟೆಯಲ್ಲಿ ತಾಲ್ಲೂಕು ಸಬ್ ಕಲೆಕ್ಟರ್ ಕಛೇರಿ ಸ್ಥಾಪನೆ.

ಕ್ರಿ.ಶ. ೧೮೦೦ರಲ್ಲಿ ಹೊಸಪೇಟೆ ಮತ್ತು ಇತರ ತಾಲ್ಲೂಕುಗಳಲ್ಲಿ ಮುನ್ಸಿಪ್ ಕೋರ್ಟ್‌ಗಳ ಸ್ಥಾಪನೆ.

ಕ್ರಿ.ಶ. ೧೮೦೫ರಲ್ಲಿ ಹೊಸಪೇಟೆ ಕೊಟ್ಟೂರು ರೈಲ್ವೆ ಮಾರ್ಗ ನಿರ್ಮಾಣವಾಯಿತು.

ಆಡಳಿತ ಕ್ಷೇತ್ರ

ಬಳ್ಳಾರಿ ಜಿಲ್ಲೆ ಮದ್ರಾಸ್ ಪ್ರಾಂತ್ಯದ ೨೪ ಜಿಲ್ಲೆಗಳಲ್ಲಿ ೪ನೆಯದು. ಇದರ ಆಡಳಿತದಲ್ಲಿದ್ದ ತಾಲ್ಲೂಕುಗಳೆಂದರೆ, ಸಿರುಗುಪ್ಪ, ಕೂಡ್ಲಿಗಿ, ಹರಪನಹಳ್ಳಿ, ಹೂವಿನಹಡಗಲಿ, ಕಂಪ್ಲಿ, ಆಲೂರು, ಆದೋನಿ, ಗುತ್ತಿ, ಉರವಕೊಂಡ, ತಾಡಪತ್ರಿ, ರಾಯದುರ್ಗ, ಅನಂತಪುರ, ಧರ್ಮಾವರಂ, ಕಲ್ಯಾಣದುರ್ಗ, ಪೆನುಕೊಂಡ, ಬುಕ್ಕಪಟ್ಟಣ, ಹಿಂದೂಪುರ, ಮಡಕಶಿರಾ ಹಾಗೂ ಎಮ್ಮಿಗನೂರು ಸೇರಿ ಜಿಲ್ಲೆಯಾಗಿತ್ತು. ಹೊಸಪೇಟೆ ಆ ಸಮಯದಲ್ಲಿ ಕಂಪ್ಲಿಗೆ ಸೇರಿಕೊಂಡಿತ್ತು. ಹಾಗಾಗಿ ಇಲ್ಲಿನ ಆಡಳಿತವನ್ನು ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗ್ರಾಮವೆಂದು ವಿಭಾಗಿಸಲಾಯಿತು. ಈ ರೀತಿ ಮಾಡಿದ್ದು, ಮೊದಲ ಬಾರಿ ಆಂಗ್ಲರೇ ಆದ್ದರಿಂದ ವ್ಯಾಪಕವಾಗಿ ಬದಲಾವಣೆ ಕಂಡುಬಂದಿತು. ಹುದ್ದೆಗಳಿಗೆ ಹೆಚ್ಚಾಗಿ ವೀರಶೈವರೇ ಪಟೇಲರಾಗಿ ಅಥವಾ ಗೌಡರಾಗಿ ಸೇರುತ್ತಿದ್ದರು.

ಗ್ರಾಮಗಳ ರಕ್ಷಣೆಯನ್ನು ತಳವಾರನೇ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದನು. ಗ್ರಾಮದಲ್ಲಿ ಶಾಂತಿಯನ್ನು ಕಾಪಾಡಲು 'ದಳಪತಿ' ಎನ್ನುವ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಮುಖ್ಯವಾಗಿ ಅಪರಾಧಿ ಬುಡಕಟ್ಟು ನಿವಾಸಿಗಳು ವಾಸಿಸುವ ''ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಇಲ್ಲಿದ್ದಂತಹ ರಾಜಕೀಯ ಪರಿಸ್ಥಿತಿ ಅನೈಕ್ಯತೆಯಿಂದ ಕೂಡಿತ್ತು. ಕಾರಣ ಈ ಮೊದಲು ಇಲ್ಲಿ ಅರಸರು, ಪಾಳೆಯಗಾರರು ಆಳ್ವಿಕೆ ನಡೆಸಿ ಈ ಪ್ರದೇಶದಲ್ಲಿ ಶಾಂತಿಯನ್ನು ಸೃಷ್ಟಿಸಿದ್ದರು. ಆಂಗ್ಲ ಆಡಳಿತ ಪ್ರಾರಂಭವಾದಾಗ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಿತಲ್ಲದೆ ಇವರ ಆಡಳಿತಕ್ಕೆ ಏಕರೂಪತೆ ದೊರೆಯಿತು'' ಎಂದು ವಿರೂಪಾಕ್ಷಿ ಪೂಜಾರಹಳ್ಳಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

''ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಇಲ್ಲಿದ್ದಂತಹ ರಾಜಕೀಯ ಪರಿಸ್ಥಿತಿ ಅನೈಕ್ಯತೆಯಿಂದ ಕೂಡಿತ್ತು. ಕಾರಣ ಈ ಮೊದಲು ಇಲ್ಲಿ ಅರಸರು, ಪಾಳೆಗಾರರು ಆಳ್ವಿಕೆ ನಡೆಸಿ ಈ ಪ್ರದೇಶದಲ್ಲಿ ಶಾಂತಿಯನ್ನು ಸೃಷ್ಟಿಸಿದ್ದರು. ಆಂಗ್ಲ ಆಡಳಿತ ಪ್ರಾರಂಭವಾದಾಗ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಿತಲ್ಲದೆ ಇವರ ಆಡಳಿತಕ್ಕೆ ಏಕರೂಪತೆ ದೊರೆಯಿತು'' ಎಂದು ವಿರೂಪಾಕ್ಷಿ ಪಾಜಾರಹಳ್ಳಿ ಅವರು ಅಭಿಪ್ರಾಯ ಪಟ್ಟಿದ್ದಾರೆ (ಪೂಜಾರಹಳ್ಳಿ,೧೯೯೫: ೨೫).

[illegible]

[illegible]

[illegible]

[illegible]

[illegible]

ಈ ಬಗೆಯ ನಿಲುವುಗಳ ಸಾಮ್ರಾಜ್ಯಶಾಹಿ ಚರಿತ್ರೆ ಬರವಣಿಗೆಯ ಲಕ್ಷಣಗಳಾಗಿರುವುದನ್ನು ನಾನು ಗಮನಿಸಬಹುದು. ದೇಸಿ ಅರಸರು ಪಾಳೇಗಾರರು ರೂಪಿಸಿದ ಬಹುರೂಢೀ ಸರಕಾರಗಳು ವ್ಯವಸ್ಥೆಯನ್ನು ವಸಾಹತುಶಾಹಿ ಸರಕಾರವು ನಾಶಮಾಡಿ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡ ಸಂದರ್ಭದಲ್ಲಿ ಮಾಡಿದ ನ್ಯಾಯ ಸಮ್ಮತೀಕರಣದ ಪ್ರಯತ್ನ ಹಾಗೂ ಈ ಬಗೆಯ ಹೇಳಿಕೆಗಳು ಕಾಣುತ್ತವೆ. ಪಕ್ಷುಂತಾಕರಣದ ಸಂದರ್ಭದಲ್ಲಿ ಭಾರತೀಯ ಚರಿತ್ರೆ ಲೇಖನ ಪರಂಪರೆಯಲ್ಲಿಯೂ ಈ ಬಗೆಯ ಲಕ್ಷಣಗಳು ಅಲ್ಲಲ್ಲಿ ಗೋಚರಿಸುತ್ತವೆ.

೪.೨ ಸಾಮಾಜಿಕ ಕ್ಷೇತ್ರ

ಕಲೆಕ್ಟರುಗಳ ಆಳ್ವಿಕೆಯಲ್ಲಿ ಇತರ ಬದಲಾವಣೆಗಳಂತೆ ಸಾಮಾಜಿಕ ಕ್ಷೇತ್ರದಲ್ಲಿಯೂ ಬದಲಾವಣೆಯಾದವು. ಆಂಗ್ಲರು ಪಾದಾರ್ಪಣೆ ಮಾಡಿದ ನಂತರ ಇಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಿದರು. ಜನರನ್ನು ರಾಜಕೀಯವಾಗಿ ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಜನಾಂಗೀಯ ಮತ್ತಿತರ ಕಾರಣಗಳಿಂದ ಇವರನ್ನು ಬದಲಿಸಿದರು. ಸರ್ ಥಾಮಸ್ ಮನ್ರೋ ಕಲೆಕ್ಟರ್‌ನಾಗಿ ಜಿಲ್ಲೆಗೆ ಬಂದಾಗ, ಇಲ್ಲಿನ ಜನಾಂಗಗಳನ್ನು ಅಸಂಘಟಿತ ಅಸಂಪ್ರದಾಯಕರೆಂದು ಮತ್ತು ಸದಾ ಕೃಷಿಯಲ್ಲಿ ನಿರತರಾದ ದಯಾಳು ಮತ್ತು ಕಷ್ಟಪಟ್ಟು ದುಡಿಮೆ ಮಾಡುತ್ತಿದ್ದವರೆಂದು ಫ್ರಾನ್ಸಿಸ್ ಹೇಳಿದ್ದಾನೆ (ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್, ೧೯೦೪: ೭೦). ಮನ್ರೋ ಸಮಾಜವನ್ನು ಅತೀ ಎಚ್ಚರಿಕೆಯಿಂದ ಸುಧಾರಣೆಗೆ ತಂದನು.

ಹೊಸಪೇಟೆಯಲ್ಲಿ ಇದ್ದ ದೇವದಾಸಿ ಪದ್ಧತಿಯನ್ನು ರದ್ದುಗೊಳಿಸಿ ಇವರು ವಿವಾಹವಾಗಲು ಕಲೆಕ್ಟರುಗಳು ಪ್ರೋತ್ಸಾಹಿಸಿದರು. ಅಷ್ಟೆ ಅಲ್ಲದೆ ಬಾಲ್ಯವಿವಾಹ ನಿಷೇಧವಿದ್ದರೂ ಕೆಲವು ಕಡೆ ರೂಢಿಯಲ್ಲಿ ಇರಲಿಲ್ಲ. ಹಾಗಾಗಿ ವ್ಯಾಪಾರ, ಉದ್ಯೋಗ, ವ್ಯವಸಾಯದ ಅಭಿವೃದ್ಧಿಗಳಿಂದ ಸಾಮಾಜಿಕ ಪದ್ಧತಿ ಸಂಪ್ರದಾಯ ಮತ್ತು ರೂಢಿಗಳನ್ನು ಬದಲಾಯಿಸಿದರು. ಹೊಸಪೇಟೆಯಲ್ಲಿ ವೈದ್ಯಕೀಯ ಸಹಾಯ ಆರೋಗ್ಯ ಅಭಿವೃದ್ಧಿಯ ಕಾರ್ಯಕ್ರಮಗಳಿಂದ, ಚಿತ್ತವಾಡಿಗಿ, ಹೊಸೂರುಗಳಲ್ಲಿ ಇದ್ದ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಗಟ್ಟಲಾಯಿತು. ದೇಶೀಯ ವೈದ್ಯ ಪದ್ಧತಿಯು ಕೂಡ ಅಂದು ಪ್ರಚಲಿತದಲ್ಲಿತ್ತು.

ಭಾರತೀಯರು ಮಾಡಿದ ಅಪರಾಧಕ್ಕೆ ಕಠಿಣ ಶಿಕ್ಷೆ ವಿಧಿಸಿದರು. ವಿದೇಶಿಯರ ಅಪರಾಧಕ್ಕೆ ಸಾಧಾರಣ ಶಿಕ್ಷೆ ಇತ್ತು. ಈ ಪಟ್ಟಣವು ವ್ಯಾಪಾರ ಕೇಂದ್ರವಾಗಿದ್ದರಿಂದ ಪ್ರಾದೇಶಿಕ ವಿಂಗಡಣೆ, ಆಡಳಿತದಿಂದ ಅವರಲ್ಲಿ ಅನೈಕ್ಯತೆಯ ಬೀಜವನ್ನು ಬಿತ್ತುತ್ತಿದ್ದರು. ಹಾಗಾಗಿ ಅವರ ಒಡೆದು ಆಳುವ ನೀತಿಗೆ ಇದು ಹೊಸ ತಿರುವು

[illegible]

[illegible]

[illegible]

ನೀಡಿತು. ಆಗಿನಿಂದ ಈ ಜನರನ್ನು ನಿಕೃಷ್ಟವಾಗಿ ಕಾಣುತ್ತಿದ್ದರು. ಇಲ್ಲಿ ಬ್ರಾಹ್ಮಣ ವರ್ಗಕ್ಕೆ ಗುಮಾಸ್ತ ಹುದ್ದೆಯನ್ನು ನೀಡಿದ್ದು ಬೇಡರ ಜನಾಂಗ ಹೆಚ್ಚಿದ್ದು ಇವರಿಗೆ ಗುಮಾಸ್ತರ ಕೆಲಸಗಳನ್ನು ನೀಡುತ್ತಿದ್ದರು (ಮೂರ್ತಿ,೧೯೯೧: ೧೦೬).

ಮತಾಂತರ ಇವರ ಕಾಲಕ್ಕಿಂತ ಮುಂಚೆಯೇ ಪ್ರಚಲಿತವಾಗಿತ್ತು. ದೆಹಲಿ ಸುಲ್ತಾನರು, ಬಿಜಾಪುರದ ಸುಲ್ತಾನರು, ಹೈದರಾಬಾದಿನ ನಿಜಾಮ ಮುಂತಾದವರು ಒತ್ತಾಯ ಪೂರ್ವಕವಾಗಿ ಸಾಮಾನ್ಯ ಜನರನ್ನು ನಿರ್ದಾಕ್ಷಿಣ್ಯವಾಗಿ ಮತಾಂತರಗೊಳಿಸಿದ್ದರು. ಆದ್ದರಿಂದ ಈ ಪ್ರದೇಶದಲ್ಲಿ ಪಿಂಜಾರರು ಹೆಚ್ಚಾಗಿ ಕಂಡುಬಂದರು.

ಆಂಗ್ಲರು ತಮ್ಮ ಧರ್ಮಕ್ಕೆ ನೇರವಾಗಿ ಮಂತಾಂತರಗೊಳಿಸಲಿಲ್ಲ. ವಿನಯದಿಂದ, ಪ್ರೀತಿಯಿಂದ ಬ್ರೀಟಿಷರು ಮತಾಂತರಿಸಿದ್ದು ಕಂಡುಬರುತ್ತದೆ. ಅದ್ದರಿಂದ ಬ್ರಿಟಿಷರು ಹೊಸಪೇಟೆಯನ್ನು ಪ್ರವಾಸಿ ಕೇಂದ್ರವಾಗಿ ಮಾಡಿಕೊಂಡಿದ್ದರು. ಈ ಪ್ರದೇಶದ ಅನೇಕ ಕುಟುಂಬಗಳು ಅನ್ಯಮತವನ್ನು ಸ್ವೀಕರಿಸಿದ್ದು ಬಡತನ, ದಾರಿದ್ರ್ಯ, ಬರಗಾಲ ಇತ್ಯಾದಿಗಳಿಂದಲ್ಲ. ಇಲ್ಲಿನ ಸಮಾಜದಲ್ಲಿ ಅಸಮಾನತೆ ಇದ್ದುದರಿಂದ ಇಂದಿಗೂ ಸಹ ಮತಾಂತರ ಹೊದುತ್ತಿದ್ದಾರೆ.

ಹೊಸಪೇಟೆ ಪ್ರವಾಸಿ ಕೇಂದ್ರವಾದಾಗ ಇಲ್ಲಿ ಹೆಚ್ಚಾಗಿ ಅನೇಕ ಜನಾಂಗಗಳು ಹುಟ್ಟಿಕೊಂಡವು. ಹೆಚ್ಚಿನ ಜನರು ಹಿಂದೂಗಳು, ಅನಂತರ ಮುಸ್ಲಿಮ್, ಕ್ರೈಸ್ತ, ಜೈನ, ಸಿಖ್ ಮತ್ತು ಪಾರ್ಸಿಗಳಿದ್ದರು. ಕೈಸ್ತರಿಗೆ ವಿಜಯನಗರ ಕಾಲದಿಂದಲೂ ಬೆಳೆದುಬಂದ ಇತಿಹಾಸವಿದೆ. ಕ್ರೈಸ್ತ ದೇವಾಲಯ ನಿರ್ಮಿಸಲು ಮತ ಪ್ರಚಾರ ಮಾಡಲು ರಾಜರಿಂದ ಅನುಮತಿ ಪಡೆದಿದ್ದರು. ಹಾಗಾಗಿ ಆಧುನಿಕ ಕಾಲದಲ್ಲಿ ಮತಾಂತರವು ಒಂದು ವ್ಯವಸ್ಥೆಯನ್ನು ಪರಿವರ್ತಿಸಿತೆನ್ನಬಹುದು (ಪುಷ್ಪಾಂಜಲಿ,೧೯೬೪:೨೧).

ಆರ್ಥಿಕ ಕ್ಷೇತ್ರ

ಆಡಳಿತ, ಸಾಮಾಜಿಕ ಕ್ಷೇತ್ರದಲ್ಲಾದಂತೆ ಆರ್ಥಿಕ ಕ್ಷೇತ್ರದಲ್ಲಿ ವ್ಯಾಪಕ ಬದಲಾವಣೆ ಕಂಡು ಬಂದಿತು. ಒಂದು ಸರ್ಕಾರ ಯಶಸ್ವಿಯಾಗಿ ಆಡಳಿತ ನಡೆಸಬೇಕಾದರೆ ಅಲ್ಲಿನ ಆರ್ಥಿಕ ಸ್ವರೂಪವನ್ನು ಬದಲಿಸಿತು. ಇಲ್ಲಿ ಖನಿಜ ಸಂಪತ್ತು ಹೇರಳವಾಗಿದ್ದರಿಂದ ಕೈಗಾರಿಕೆಗಳು ಸ್ಥಾಪನೆಗೊಂಡವು. ವಾಣಿಜ್ಯೋದ್ಯಮಿಗಳ ಸೃಷ್ಟಿಗೆ ಖಾಸಗಿ ಕೈಗಾರಿಕೆಗಳು ಸ್ಥಾಪನೆಗೊಂಡು ವ್ಯಾಪಾರ ಅಭಿವೃದ್ಧಿಗೊಂಡವು, ರಫ್ತು ಮತ್ತು ಆಮದಿನಿಂದ ವಿದೇಶಗಳಿಗೆ ಸಾರಿಗೆ-ಸಂಪರ್ಕ ಬೆಳೆಯಿತು.

ವಿಜಯನಗರ ಅವನತಿ ಹೊಂದಿದ ಮೇಲೆ ಹೊಸಪೇಟೆಯಲ್ಲಿ ಕ್ಷಾಮ, ಬರಗಾಲ ಬಂದಾಗ ಜನರಿಂದ ಕಾಮಗಾರಿ ಕೆಲಸಗಳನ್ನು ಮಾಡಿಸುವುದರ ಮೂಲಕ ಕೂಲಿ ರೂಪದಲ್ಲಿ ಹಣ, ಆಹಾರ ನೀಡುತ್ತಿದ್ದರು. ಇದು ವಿಶೇಷವಾದ ಯೋಜನೆಯಾಗಿತ್ತು. ಕೆರೆಗಳ ದುರಸ್ತಿ, ಕಾಲುವೆ, ಕಟ್ಟಡಗಳ ನಿರ್ಮಾಣ, ದೇವಾಲಯಗಳ ಪುನರುಜ್ಜೀವನ, ಸರ್ಕಾರಿ ಆಡಳಿತ ಕಟ್ಟಡಗಳು, ಬಂಗಲೆ, ಉದ್ಯಾನವನಗಳ ನಿರ್ಮಾಣವನ್ನು ನೋಡಬಹುದು (ವೀರಭದ್ರಯ್ಯ,೧೯೯೪: ೫೨).

ಕೃಷಿ

ಕಲೆಕ್ಟರುಗಳ ಆಳ್ವಿಕೆಯಲ್ಲಿ ಕೃಷಿಗೆ ಪ್ರಥಮ ಸ್ಥಾನ ದೊರಕಿತ್ತು. ಆಗಿನ ಪ್ರಾಂತ್ಯದ ಉತ್ಪನ್ನ ಆದಾಯದ ಮೂಲ ಕೃಷಿಯಾಗಿತ್ತು. ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಅದಕ್ಕೆ ಹೊಸಪೇಟೆ ಹೊರತಾಗಿಲ್ಲ. ಬ್ರಿಟಿಷರು ಪ್ರಾಂತ್ಯದಲ್ಲಿ ವ್ಯವಸಾಯ ಇಲಾಖೆಯನ್ನು ಸ್ಥಾಪಿಸಿ ೧೯೦೦ರಲ್ಲಿ ಭೀಕರ ಕ್ಷಾಮ ಬಂದಾಗ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡರು. ಹೊಸಪೇಟೆಯು ಕೃಷಿ ಪ್ರಾದಾನ್ಯವಾದ ಪ್ರದೇಶವಾಗಿತ್ತು. ಕಬ್ಬು ಮುಖ್ಯ ಬೆಳೆಯಾಗಿದ್ದು ಇಲ್ಲಿನ ರೈತರು ಹೆಚ್ಚಾಗಿ ಕಬ್ಬು ಬೆಳೆಯುವಲ್ಲಿ ನಿರತರಾಗಿದ್ದಾರೆ.

ಕೃಷಿಕರು ಶೇ. ೮೦ರಷ್ಟು ಉತ್ಪಾದನೆಯಲ್ಲಿ ತೊಡಗಿದ್ದರು. ಬೆಳೆದಂತಹ ಬೆಳೆಗಳ ಮೇಲೆ ಕಂದಾಯ ನಿಗದಿಯಾಗುತ್ತಿತ್ತು. ಕಾಲರ, ಕ್ಷಾಮ, ಬರಗಾಲ ಇದ್ದಾಗ ಕಂದಾಯ ಕಡಿಮೆಯಾಗುತ್ತಿತ್ತು. ಕೃಷಿಗೆ ನೀರಾವರಿ ವ್ಯವಸ್ಥೆಯನ್ನು ಮಾಡಿದ್ದರು (ನಾಗೇಶ್, ೧೯೮೪: ೬೩).

ಎತ್ತುಗಳಿಂದ ರೈತ ಬೇಸಾಯ ಮಾಡುತ್ತಿದ್ದ. ಹೆಚ್ಚಿನ ಬೆಳೆಗಳನ್ನು ಬೆಳೆಯುತ್ತಿದ್ದರಿಂದ ಧಾನ್ಯವನ್ನು ಮಾರುತ್ತಿದ್ದರು. ಕಬ್ಬು ಮತ್ತು ಭತ್ತ ಹೆಚ್ಚು ಬೆಳೆಯುತ್ತಿದ್ದರು. ಇವರು ಬೇಸಾಯಕ್ಕೆ ನೇಗಿಲು, ಕುಂಟೆ, ಕೂರಿಗೆಯನ್ನು ಬಳಸುತ್ತಿದ್ದರು. ಹೇರಳವಾಗಿ ಬೆಳೆದದ್ದನ್ನು ಆಂಧ್ರಕ್ಕೆ ರಫ್ತು ಮಾಡುತ್ತಿದ್ದರು. ಕಲೆಕ್ಟರುಗಳ ಕಾಲದಲ್ಲಿ ಕೃಷಿಗೆ ಬ್ಯಾಂಕುಗಳ ಮೂಲಕ ಸಾಲ ನೀಡಿ, ವ್ಯವಸಾಯಕ್ಕೆ ಉಪಕರಣಗಳನ್ನು ಕೊಡುತ್ತಿದ್ದರು. (ಪಂಚಮುಖಿ, ೧೯೬೭: ೪೩)

ಕೃಷಿ ಉತ್ಪನ್ನಗಳು, ಕೈಗಾರಿಕೋತ್ಪನ್ನಗಳು ಹಾಗೂ ವಾಣಿಜ್ಯೋತ್ಪನ್ನಗಳಿಗೆ ಹೊಸಪೇಟೆ ಉತ್ತಮ ಮಾರಾಟ ಕೇಂದ್ರವಾಯಿತು.

ಸುಮಾರು ೧೦೦೦ ಎಕರೆ ಭೂಮಿಯನ್ನು ಕಬ್ಬು ಬೆಳೆಯಲು ಉಪಯೋಗಿಸುತ್ತಿದ್ದರು. ನಂತರ ೧೯೩೫ರಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲಾಯಿತು. ಈ ಕಾರ್ಖಾನೆಯ ಸ್ಥಾಪನೆಯೊಂದಿಗೆ ಕಬ್ಬಿನ ಬೆಳೆಗೆ ಮತ್ತಷ್ಟು ಪ್ರೋತ್ಸಾಹ ದೊರೆಯಿತು. ಸಕ್ಕರೆಯನ್ನು ಆಂಧ್ರಕ್ಕೆ ರಫ್ತು ಮಾಡಲಾಗುತ್ತಿತ್ತು.

ಭತ್ತ ಈ ಪ್ರದೇಶದಲ್ಲಿ ಹೆಚ್ಚಾಗಿತ್ತು. ಗೌರೀ ಸಣ್ಣ, ಸಿಪಾಯಿ, ವಂಕಿಸಣ್ಣ ಹಾಗೂ ಶ್ರೀರಂಗ ಜಾತಿಯ ಭತ್ತ ಬೆಳೆಯುತ್ತಿದ್ದರು. ನಾಲ್ಕು ತಿಂಗಳುಗಳಲ್ಲಿ ಆರು ಜಾತಿಯ ಭತ್ತವನ್ನು ಬೆಳೆಯುತ್ತಿದ್ದರು (ಸರ್ವೇಶ್ವರ ಸ್ವಾಮಿ, ೧೯೬೨: ೨೪).

ಕೈಗಾರಿಕೆ

ಆಧುನಿಕತೆ ಬೆಳವಣಿಗೆ ಹೊಂದಿದಂತೆ ಹೊಸಪೇಟೆಯು ಪ್ರಗತಿಯನ್ನು ಹೊಂದಿತು. ಅದರಂತೆಯೇ ಆಧುನಿಕತೆಯಲ್ಲಿ ಕೈಗಾರಿಕೆ ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಈ ಪ್ರದೇಶ ಕೈಗಾರಿಕೋದ್ಯಮ ಊರ್ಜಿತ ಸ್ಥಿತಿಯಲ್ಲಿತ್ತು. ಆಧುನಿಕ ಕಾಲದಲ್ಲಂತೂ ಹೊಸಪೇಟೆ ನಗರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಕೈಗಾರಿಕೆ ಮತ್ತು ಕಾರ್ಖಾನೆಗಳು ಅತ್ಯಂತ ಪ್ರಗತಿ ಸಾಧಿಸಿವೆ. ವಿದ್ಯುತ್ ಸೌಲಭ್ಯವೇ ಕೈಗಾರಿಕಾ ಬೆಳವಣಿಗೆಗೆ ಮೂಲ ಕಾರಣವಾಯಿತು. ೧೯೨೧ರಲ್ಲಿ ಹೊಸಪೇಟೆ ಪುರಸಭೆಯು ನಗರಕ್ಕೆ ವಿದ್ಯುತ್ತನ್ನು ಒದಗಿಸಲು ನಿರ್ಣಯ ಕೈಗೊಂಡಿತು. ೧೯೨೫ರಲ್ಲಿ ವಿದ್ಯುತ್ ಸರಬರಾಜು ಹೊಸಪೇಟೆ ಪ್ರದೇಶದಲ್ಲಿ ಕಂಡುಬಂದಿತು.

ಬೃಹತ್ ಕೈಗಾರಿಕೆ

ಹೊಸಪೇಟೆ ಪ್ರದೇಶವು ಬೃಹತ್ ಕೈಗಾರಿಕೆಯಲ್ಲಿ ಪ್ರಗತಿಯನ್ನು ಸಾಧಿಸಿತು. ೧೯೨೩ರಲ್ಲಿ ಭಾರತ ಸರಕಾರವು ದೇಶದ ಉದ್ಯಮಗಳನ್ನು ವಿದೇಶಿ ಕಂಪನಿಗಳ ಪೈಪೋಟಿಯಿಂದ ರಕ್ಷಿಸಬೇಕೆಂಬ ಉದ್ದೇಶದಿಂದ ಸಕ್ಕರೆ ಉದ್ಯಮವನ್ನು ಚಿತ್ತವಾಡಿಗಿಯಲ್ಲಿ ಪ್ರಾರಂಭಿಸಿತು.

೧೯೪೬ರಲ್ಲಿ ಮದ್ಯಸಾರವನ್ನು ಭಟ್ಟಿ ಇಳಿಸುವ ಪಂಪಾಸರ್, ಡಿಸ್ಟಿಲರಿ ಎಂಬ ಕಾರ್ಖಾನೆಯು ಅಸ್ತಿತ್ವಕ್ಕೆ ಬಂದಿತು. ಅದರಲ್ಲಿ ಕಬ್ಬಿನ ಕಚ್ಚಾರಸವನ್ನು ಶುದ್ಧೀಕರಿಸಿದ ಮೇಲೆ ಉಳಿದ ತ್ಯಾಜ್ಯ ಪದಾರ್ಥದಲ್ಲಿ (ಕಾಕಂಬಿ) ಮದ್ಯ (ಸಾರಾಯಿ)ವನ್ನು ಉತ್ಪಾದಿಸಲಾಗುತ್ತದೆ. ಬೆಲ್ಲ ತಯಾರಿಸುವ ಉದ್ಯಮ ಈ ಪ್ರದೇಶದಲ್ಲಿ ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಆಲೆಮನೆಗಳಲ್ಲಿ ಎತ್ತುಗಳನ್ನು ಗಾಣಕ್ಕೆ ಹೂಡಿ ಕಬ್ಬಿನ ರಸವನ್ನು ತೆಗೆಯಲಾಗುತ್ತಿತ್ತು. ಹಾಗೆ ದೊರೆತ ಕಬ್ಬಿನ ರಸವನ್ನು ದೊಡ್ಡ ಕೊಪ್ಪರಿಕೆಯಲ್ಲಿ ಕುದಿಸಿ, ಇಂಗಿಸಿ ಅಚ್ಚುಗಳಲ್ಲಿ ಹೊಯ್ದು ಒಣಗಿಸಿ ಬೆಲ್ಲವನ್ನು ತಯಾರಿಸುತ್ತಾರೆ.

ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್‌ನಲ್ಲಿ ಟಿ.ಬಿ.ಡ್ಯಾಂ, ತುಂಗಭದ್ರಾ ಯೋಜನೆಯು ಕಾರ್ಯಗೊಂಡ ಹಿನ್ನೆಲೆಯಲ್ಲಿ ಆಂಗ್ಲರ ಉದ್ಯಮ ಯೋಜನೆಯಾಗಿ ಜಾರಿಗೆ ಬಂದಿತು. ಈ ಯೋಜನೆಯು ವಿವಿಧ ಯಂತ್ರೋಪಕರಣಗಳ ಬಿಡಿ ಭಾಗಗಳನ್ನು ನಿರ್ಮಿಸಿ ಪೂರೈಸುವುದಕ್ಕಾಗಿ ೧೯೪೭ರಲ್ಲಿ ವರ್ಕ್‌ಶಾಪ್ ಮಾದರಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಮುಂದೆ ತೂಬಿನ ಬಾಗಿಲುಗಳ ಅವಶ್ಯಕತೆ ಒದಗಿಬಂದಾಗ ಆಗಿನ

ಮದರಾಸು ಸರಕಾರ ಅದೇ ಸ್ಥಳದಲ್ಲಿ ಜರ್ಮನ್ ಯಂತ್ರೋಪಕರಣಗಳೊಂದಿಗೆ ಕಾರ್ಖಾನೆಯೊಂದನ್ನು (ಶೆಟರ್ ಮ್ಯಾನುಪ್ಯಾಕ್ಚರಿಂಗ್ ಫ್ಯಾಕ್ಟರಿ) ಸ್ಥಾಪನೆಯಾಯಿತು. ಇದು ೧೯೫೨ರಲ್ಲಿ ಜವಹರಲಾಲ್ ನೆಹರು ಅವರಿಂದ ಉದ್ಘಾಟನೆಯಾಯಿತು.

ಖನಿಜ ಸಂಪತ್ತು ಮತ್ತು ಗಣಿ ಉದ್ಯಮ ಹೊಸಪೇಟೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ವಿಜಯನಗರ ಕಾಲದಲ್ಲಿ ಕಬ್ಬಿಣವನ್ನು ಸಾಕಷ್ಟು ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿತ್ತೆಂದು ಮಹದೇವ ಅವರ ಅಭಿಪ್ರಾಯವಾಗಿದೆ. ಈಗಲೂ ಕಬ್ಬಿಣದ ಅದಿರನ್ನು ಇಲ್ಲಿಂದ ವಿದೇಶಗಳಿಗೆ ರವಾನಿಸಲಾಗುತ್ತಿದೆ. ಹೊಸಪೇಟೆ ವಲಯದ ಅದಿರಿನಲ್ಲಿ ಕಬ್ಬಿಣದ ಅಂಶ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಇಲ್ಲಿನ ಕಬ್ಬಿಣದ ಅದಿರಿಗೆ ಬಹಳಷ್ಟು ವಿದೇಶಿ ಬೇಡಿಕೆಯಿದೆ. ಹಾಗಾಗಿಯೇ ಗಣಿಮಾಲೀಕರ ಸಂಖ್ಯೆ ದಿನೇ ದಿನೇ ಏರತೊಡಗಿದೆ. ಗಣಿಗಳಲ್ಲಿ ಕೆಲಸ ಮಾಡಲು ವಿವಿಧ ಕಡೆಗಳಿಂದ ಕೂಲಿ ಕಾರ್ಮಿಕರು ಹೊಸಪೇಟೆಗೆ ಆಗಮಿಸುತ್ತಿದ್ದಾರೆ.

ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗುಡಿ ಕೈಗಾರಿಕೆಗಳು

ವಿಜಯನಗರ ಕಾಲದಿಂದ ಬಟ್ಟೆಗಳ ತಯಾರಿಸುವಿಕೆ ಕಂಡುಬಂದಿದೆ. ತಯಾರಿಸಿದ ವಸ್ತುಗಳು ಪರದೇಶಗಳಿಗೆ ರಫ್ತಾಗುತ್ತಿತ್ತು. ಗೋಪಾಲಕೃಷ್ಣ ನೇಯ್ಗೆ ಮಿಲ್ ಕಂಬಳಿ ಮತ್ತು ಬಟ್ಟೆ ನೇಯುತ್ತಿತ್ತು ಇದು ೧೯೫೭ರಲ್ಲಿ ಮುಚ್ಚಿಕೊಂಡಿತು.

ಸುಣ್ಣ ಸುಡುವಿಕೆ, ಇಟ್ಟಿಗೆ ತಯಾರಿಕೆ, ಬುಟ್ಟಿ ಎಣೆಯುವಿಕೆ, ಗಾದಿ ತಯಾರಿಕೆ, ಈಚಲ ಚಾಪೆ ತಯಾರಿಕೆ, ಎತ್ತಿನ ಗಾಡಿ ತಯಾರಿಕೆ, ಕಸಬರಿಗೆ ತಯಾರಿಕೆ, ಕಮ್ಮಾರಿಕೆ ಇಂತಹ ಗುಡಿ ಕೈಗಾರಿಕೆಗಳು ಹೊಸಪೇಟೆಯಲ್ಲಿ ಕಂಡುಬಂದಿವೆ (ಸಂಶೋಧನೆ ಕಾರ್ಯದಲ್ಲಿ ಸಂಗ್ರಹಿತ ಮಾಹಿತಿ).

ಕೃಷಿ ಮತ್ತು ಕೈಗಾರಿಕೆಗಾಗಿ ತುಂಗಭದ್ರಾ ಯೋಜನೆಯನ್ನು ಜಾರಿಗೆ ತರಲಾಯಿತು. ಇದು ಸ್ವತಂತ್ರ ಪೂರ್ವದಲ್ಲಿ ಮದರಾಸು ಮತ್ತು ಹೈದರಾಬಾದ್ ರಾಜ್ಯಗಳು ೧೯೪೫ರಲ್ಲಿ ಹಮ್ಮಿಕೊಂಡ ಜಂಟಿ ಯೋಜನೆಯಾಗಿದೆ. ಅಂದು ಬ್ರಿಟೀಷ್ ಅಧೀನದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಮುದ್ಲಾಪುರದ ಹತ್ತಿರ ತುಂಗಭದ್ರಾ ನೀರು ಸಂಗ್ರಹಿಸುವ ಯೋಜನೆ ಇದಾಗಿದೆ. ಉಭಯ ದಂಡೆಗಳ ಕಾಲುವೆಗಳಿಂದ ಸುಮಾರು ೩,೬೨,೩೯೫ ಎಕ್ಕೇರು ಭೂಮಿಯನ್ನು ನೀರಾವರಿಗೆ ಒಳಪಡಿಸಿ ಇದಕ್ಕೆ ೧೩,೨ ಟಿ.ಎಂ.ಸಿ ಅಡಿ ನೀರನ್ನು ಬಳಸಲಾಗುತ್ತದೆ. ರಾಜ್ಯ ಪೂರ್ವ ವಿಂಗಡಣೆಯಾದ ನಂತರ ಯೋಜನೆಯು ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಜಂಟಿ ರಾಜ್ಯಗಳ ಸುಪರ್ದಿಗೆ ಬಂದಿತು. ಇಲ್ಲಿ ೬೯ ಮೆಗಾವ್ಯಾಟ್ ವಿದ್ಯುತ್

ಉತ್ಪಾದಿಸಲಾಗುತ್ತದೆ. ಅಣೆಕಟ್ಟು ೧೯೫೩ರಲ್ಲಿ ಪೂರ್ಣಗೊಂಡಿತು. ಈ ನೀರಿನಲ್ಲಿ ೯೦ ಹಳ್ಳಿಗಳು ಮುಳುಗಿವೆ. ೫೫ ಸಾವಿರ ಜನರಿಗೆ ಪುನರ್ವಸತಿ ಕಲ್ಪಿಸಲಾಗಿದೆ.



ತುಂಗಭದ್ರಾ ಜಲಾಶಯ

ರಾಯ ಬಸವಣ್ಣ ಕಾಲುವೆ ತುರ್ತಾಕಾಲುವೆಗಳು ಸಾಕಷ್ಟು ನೀರಾವರಿ ಸೌಕರ್ಯವನ್ನು ಈ ನಗರ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಕ್ಕೆ ಒದಗಿಸುತ್ತಿವೆ. ಅಷ್ಟೇ ಅಲ್ಲದೆ ತುಂಗಭದ್ರಾ ಅಣೆಕಟ್ಟಿನ ಕಾಲುವೆಗಳ ನೀರಾವರಿ ಸೌಕರ್ಯದಿಂದ ಬೆಳೆಗಳನ್ನು ಬೆಳೆಯುವುದಕ್ಕೆ ಸಹಾಯವಾಯಿತು.

ವ್ಯಾಪಾರ

ಆಂಗ್ಲರ ಆಳ್ವಿಕೆ ಪ್ರಾರಂಭವಾಗುವ ಮುನ್ನ ಈ ಭಾಗದಲ್ಲಿ ವ್ಯಾಪಾರ ವಾಣಿಜ್ಯಕ್ಕೆ ಕೆಲವು ಸ್ಥಳಗಳು ಪ್ರಸಿದ್ಧಗೊಂಡಿವೆ. ಸ್ಥಳೀಯ ಆಳರಸರ ವ್ಯಾಪಾರಕ್ಕೂ ಮತ್ತು ಆಂಗ್ಲ ಪದ್ಧತಿಯ ವ್ಯಾಪಾರಕ್ಕೂ ವ್ಯತ್ಯಾಸವಿತ್ತು. ಹೊಸಪೇಟೆಯಲ್ಲಿ ಗಣಿಗಾರಿಕೆ, ಕೈಗಾರಿಕೆಗಳ ಬೆಳವಣಿಗೆಯಿಂದ ವ್ಯಾಪಾರ ಅಭಿವೃದ್ಧಿಗೊಂಡಿತು. ದೇಶೀಯ ಮತ್ತು ವಿದೇಶೀಯ ವ್ಯಾಪಾರ ಪ್ರಚಲಿತಕ್ಕೆ ಬಂದಿದ್ದು, ಇವರ ಕಾಲದಲ್ಲಿ ಅಭಿವೃದ್ಧಿ ಹೊಂದಿತ್ತು (ಕಾಮತ್,೧೯೮೮:೮೫).

ವ್ಯಾಪಾರವನ್ನು ಆಂಗ್ಲರು ಎರಡು ರೀತಿಯಲ್ಲಿ ಮಾಡುತ್ತಿದ್ದರು. ಸಮುದ್ರದ ಮೂಲಕ ಮತ್ತು ಭೂಮಾರ್ಗಗಳ ಮೂಲಕ ವ್ಯಾಪಾರ ಮಾಡುತ್ತಿದ್ದರು. ಹೊಸಪೇಟೆಯಲ್ಲಿ ಕ್ಷಾಮ, ಬರಗಾಲ ಬಂದಾಗ



ವ್ಯಾಪಾರದ ಪ್ರಗತಿ ನಿಲ್ಲುತಿತ್ತು. ಆಗ ಅಂತರದೇಶಿಯ ವ್ಯಾಪಾರದಲ್ಲಿ ಬ್ರಿಟಿಷ್ ಆಧಿಪತ್ಯಗಳು ರಫ್ತು ಮತ್ತು ಆಮದು ಮಾಡಿಕೊಳ್ಳುತ್ತಿದ್ದರು. ಅದನ್ನು ಹೊಸಪೇಟೆಯ ವ್ಯಾಪಾರಕ್ಕೆ ಬಳಸುತ್ತಿದ್ದರು. ಹೊಸಪೇಟೆಯಲ್ಲಿ ಬೆಳೆದಂತಹ ಸರಕುಗಳನ್ನು ಕೊಂಡೊಯ್ದು ಮಾರಾಟ ಮಾಡುತ್ತಿದ್ದರು. ಇದು ರೈಲ್ವೇ ಪದ್ಧತಿ ಬರುವವರೆಗೆ ಇತ್ತು. ಗೋದಾವರಿ, ಮಲಬಾರು, ಕಲ್ಲಿಕೋಟೆ, ತಿಣ್ಣೆವೆಲ್ಲೈ, ಬಂದರುಗಳ ಮೂಲಕ ಸಗಟು ಸಾಮಗ್ರಿಗಳನ್ನು ವಿದೇಶಕ್ಕೆ ಕಳುಹಿಸುತ್ತಿದ್ದರು. ಕಲೆಕ್ಟರನೇ ವ್ಯಾಪಾರದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದನು. ಹೊಸಪೇಟೆಯಲ್ಲಿ ಕೃಷಿ ಕೈಗಾರಿಕೆ ವಾಣಿಜ್ಯವ್ಯಾಪಾರ ಕೇಂದ್ರವಾಗಿ ಬೆಳಿಯಿತು. ಆಮದಿಗಿಂತ ರಫ್ತಿನಲ್ಲಿ ಲಾಭವಿತ್ತು. ಇಲ್ಲಿ ಬೆಳೆಯುತ್ತಿದ್ದ ಭತ್ತ, ರಾಗಿ, ಜೋಳ, ತಂಬಾಕು, ಎಣ್ಣೆ ಬೀಜಗಳು, ಹತ್ತಿ, ತುಪ್ಪ, ತೆಂಗಿನಕಾಯಿಗಳನ್ನು ರಫ್ತು ಮಾಡುತ್ತಿದ್ದರು. ಇಷ್ಟೇ ಅಲ್ಲದೆ ಬೆಲ್ಲ, ಸಕ್ಕರೆ, ಬಟ್ಟೆ ಮೊದಲಾದವು ಮಾರುಕಟ್ಟೆಯಿಂದ ಸರಬರಾಜು ಆಗುತ್ತಿತು (ವಸಂತ ಮಾದವ, ೨೦೦೬:೧೦೬).

ಯಾವ ದೇಶಕ್ಕೆ ಸರಕನ್ನು ರಫ್ತು ಮಾಡುತ್ತಿದ್ದರೂ ಆ ದೇಶದಿಂದ ಬೇಡಿಕೆ ಸಲ್ಲಿಸದ ಸರಕುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರ ನೀತಿಯಲ್ಲಿ ಬದಲಾವಣೆ ತಂದಿತು. ೧೮೩೩ರಲ್ಲಿ ಕ್ರೈಸ್ತ ಧರ್ಮೀಯರು ಯಾರೇ ಆಗಲಿ ವ್ಯಾಪಾರದಲ್ಲಿ ಸ್ವಾತಂತ್ರ್ಯದಿಂದ ಅಧಿಕಾರವನ್ನು ನಡೆಸುತ್ತಿದ್ದರು. ಭಾರತೀಯರು ವ್ಯಾಪಾರ ಮಾಡಬೇಕೆಂದರೆ ಈಸ್ಟ್ ಇಂಡಿಯಾ ಕಂಪನಿಯಿಂದ ಅನುಮತಿ ಪಡೆಯಬೇಕಾಯಿತು.

೧೮ನೇ ಶತಮಾನದಲ್ಲಿ ಸ್ಟ್ರೇಟ ಸೆಟಲ್‌ಮೆಂಟಿಗೆ ಸಹಿ ಹಾಕಿದಾಗ ದಕ್ಷಿಣ ಏಷಿಯಾ ರಾಷ್ಟ್ರಗಳಲ್ಲಿ ಇದು ಪ್ರಬಲವಾಯಿತು. ಇವರ ೪ ಪ್ರಮುಖ ವ್ಯಾಪಾರ ಕೇಂದ್ರಗಳಲ್ಲಿ ಬಳ್ಳಾರಿ ಜಿಲ್ಲೆ ಪ್ರಮುಖವಾದುದು. (ವಂಸತ ಮಾಧವ, ೨೦೦೬: ೧೦೮).

ಸಾರಿಗೆ ಸಂಪರ್ಕ

ಕಲೆಕ್ಟರುಗಳ ಕಾಲದಲ್ಲಿ ಸಾರಿಗೆ ಸಂಪರ್ಕಕ್ಕೆ ಒತ್ತು ಕೊಟ್ಟಿದ್ದರು. ಒಂದು ದೇಶದ ಸಾರಿಗೆ ಸಂಪರ್ಕವನ್ನು ವ್ಯಾಪಾರದ ಉದ್ದೇಶದಿಂದ ನಿರ್ಮಿಸಿದ್ದರು. ಭೂ ಸಾರಿಗೆಯಲ್ಲಿ ರಸ್ತೆಗಳನ್ನು ಇವರು ದಟ್ಟವಾದ ಕಾಡುಗಳನ್ನು ಕಡಿಸಿ ದಾರಿಗಳನ್ನು ಮಾಡಿದರು. ನಂತರ ಕಾಡು ರಸ್ತೆಗಳನ್ನು ನಿರ್ಮಿಸಿ ಕುದುರೆಗಳನ್ನು ಸಾರಿಗೆ ಸಾಧನವಾಗಿ ಬಳಸಿದ್ದರು ಅನಂತರ ಉತ್ತಮ ರಸ್ತೆಗಳ ನಿರ್ಮಾಣವಾದಾಗ ವಾಹನಗಳ ಸೌಲಭ್ಯ ಕಲ್ಪಿಸಲಾಯಿತು.

[illegible]

[illegible]

[illegible]

[illegible]

[illegible]



ಹೊಸಪೇಟೆ ಭೂ ಸಾರಿಗೆ

ಹೊಸಪೇಟೆ ಕಲ್ಪಿಸಲಾಯಿತು.ಮೂಲಕ ಗದಗ, ಧಾರವಾಡಕ್ಕೆ ೧೮೫೧ರಲ್ಲಿ ರಸ್ತೆಯನ್ನು ನಿರ್ಮಿಸಲಾಯಿತು. ಪ್ರಮುಖ ವ್ಯಾಪಾರ ವಾಣಿಜ್ಯಕ್ಕೆ ಪ್ರಾಶಸ್ತ್ಯಕೊಟ್ಟರು. ೧೮೫೪ರಲ್ಲಿ ಸಣ್ಣ ಕೀಲು ಗಾಲಿಗಳುಳ್ಳ ಗಾಡಿಗಳು ಬರಲಾರಂಭಿಸಿದವು. ಅನಂತರ ಇದ್ದಿಲ ಬಸ್ಸುಗಳನ್ನು ಬಳಸಿದರು. ೧೯೪೫ರವರೆಗೆ ವಿಶೇಷವಾಗಿ ವಾಹನಗಳು ಬಳಕೆಗೆ ಬಂದವು. (ವಿರೂಪಾಕ್ಷಿ,೧೯೯೫:೪೮).

ರೈಲ್ವೇ ಸಾರಿಗೆ

ಸರಕು ಸಾಗಾಣಿಕೆ ಪ್ರಮಾಣಕ್ಕಾಗಿ ರೈಲ್ವೇ ಮಾರ್ಗವನ್ನು ಸ್ಥಾಪಿಸಿದರು. ಇಲ್ಲಿ ರೈಲ್ವೇ ಮಾರ್ಗಕ್ಕಾಗಿ ಅಗೆಯುತ್ತಿದ್ದಾಗ ಹೇರಳವಾಗಿ ಕಬ್ಬಿಣದ ಅದಿರು ಇತ್ಯಾದಿ ಕಚ್ಚಾವಸ್ತುಗಳು ಕಂಡು ಬಂದವು. ಇದರಿಂದ ಗಣಿಗಾರಿಕೆ ಬೆಳೆಯಲು ಕಾರಣವಾಯಿತು.

ರೈಲ್ವೆ ಮಾರ್ಗ ಈ ದೇಶಕ್ಕಿಂತ ಹೆಚ್ಚಾಗಿ ಇಂಗ್ಲಿಷರಿಗೆ ಉಪಯೋಗವಾಗಿತ್ತು. ೧೮೮೫ ರಿಂದ ರೈಲ್ವೆ ಮಾರ್ಗ ಪ್ರಾರಂಭವಾಯಿತು. ೨೩.೩.೧೮೮೪ರಲ್ಲಿ ಹೊಸಪೇಟೆಯಿಂದ ಬಳ್ಳಾರಿಗೆ, ಹೊಸಪೇಟೆಯಿಂದ ರಾಯದುರ್ಗಕ್ಕೆ ಬಳ್ಳಾರಿಯಿಂದ ಹಾದು ಹೋಗುವುದಕ್ಕೆ ಮಾರ್ಗ ನಿರ್ಮಿಸಿದರು. ಈ ಜಿಲ್ಲೆಯಲ್ಲಿ ರೈಲ್ವೇ ಮಾರ್ಗ ೧೯೪೫ರ ಮುನ್ನ ಇತ್ತು, ಅನಂತರ ವಿಸ್ತರಣೆ ಹೊಂದಿತು. (ಮಹದೇವ, ೨೦೦೨: ೬೯೨)



ಅಂಚೆ, ತಂತಿ ಮತ್ತು ಟೆಲಿಫೋನ್

ಆಂಗ್ಲರ ಆಳ್ವಿಕೆಯಲ್ಲಿ ಬಳಕೆಗೆ ಬಂದ ಆಧುನಿಕ ವ್ಯವಸ್ಥೆಯೆಂದರೆ ಅಂಚೆ ಪದ್ಧತಿ. ಈ ಹಿಂದೆ ಅರಸರ, ರಾಜರುಗಳ ಆಳ್ವಿಕೆಯಲ್ಲಿ ಪ್ರತ್ಯೇಕ ಜತೆಕಾರನಿದ್ದನು. ಇಲ್ಲಿ ಸಾರ್ವಜನಿಕರಿಗಾಗಿ ಪತ್ಯೇಕ ಅಂಚೆ ವ್ಯವಸ್ಥೆಯನ್ನು ಮಾಡಲಾಯಿತು. ತಿಂಗಳಿಗೊಮ್ಮೆ ವಾರಕ್ಕೊಮ್ಮೆ ಪತ್ರದ ವಿಲೇವಾರಿ ಕಾರ್ಯ ನಡೆಯುತಿತ್ತು. ತರುವಾಯ ಹೊಸಪೇಟೆಯಲ್ಲಿ ೧೮೬೨ರಲ್ಲಿ ಅಂಚೆ ಕಚೇರಿಗಳು ಪ್ರಾರಂಭವಾದವು. ಮೊದಲು ೧೯೦೦ರಲ್ಲಿ ಹೋಬಳಿ ಮಟ್ಟದಲ್ಲಿ ಅಂಚೆ ಕಚೇರಿ ಸ್ಥಾಪಿಸಿ, ಇದರ ವ್ಯಾಪ್ತಿಯನ್ನು ಹೆಚ್ಚಿಸಿದರು. ೧೮೯೨ರಲ್ಲಿ ಹೊಸಪೇಟೆ ಸಬ್ ಆಫೀಸಾಗಿ ಮಾರ್ಪಟ್ಟಿತು.

ಆಗ ಕೇವಲ ಒಬ್ಬ ಅಂಚೆ ಅಧಿಕಾರಿಗಳನ್ನು ನೆಮೀಸುತ್ತಿದ್ದರು. ಪ್ರತಿಯೊಂದು ಪ್ರದೇಶಕ್ಕೆ ಒಬ್ಬ ವ್ಯಕ್ತಿ ಹೋಗಿ ಅಂಚೆ ಪತ್ರವನ್ನು ವಿಲೇವಾರಿ ಮಾಡುತ್ತಿದ್ದನು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಂಚೆಯ ಚೀಲಕ್ಕೆ ಗೆಜ್ಜೆಯನ್ನು ಕಟ್ಟಿಕೊಂಡು ಶಬ್ದ ಮಾಡುತ್ತ ಸಾಗಿಸುತ್ತಿದ್ದನು. ಕಾಡಿನಲ್ಲಿ ಹೋಗುವಾಗ ಕೈಯಲ್ಲೊಂದು ಕತ್ತಿ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುದುರೆ ಮೇಲೆ ಹೋಗುತ್ತಿದ್ದನು.

ಬಳ್ಳಾರಿ ಜಿಲ್ಲೆಯಲ್ಲಿ ಮೂರು ಅಂಚೆ ವಿಭಾಗಗಳಿದ್ದವು. ಅವು ಹರಪನಹಳ್ಳಿ, ಹೊಸಪೇಟೆ ಮತ್ತು ಬಳ್ಳಾರಿ. ೧೯೫೫ನೇ ಏಪ್ರಿಲ್ ೨೭ರಂದು ಟೆಲಿಫೋನ್ ಎಕ್ಸ್‌ಚೇಂಜ್ ಉದ್ಘಾಟನೆಯಾಯಿತು. ಹೊಸಪೇಟೆ ಮತ್ತು ತೋರಣಗಲ್‌ಗಳ ನಡುವೆ ತಂತಿ ಸಂಪರ್ಕದ ಕಂಬಗಳನ್ನು ಸಹ ಕಾಣಬಹುದು. (ವಿರೂಪಾಕ್ಷಿ,೧೯೫೫: ೬೧).

ಶೈಕ್ಷಣಿಕ ಕ್ಷೇತ್ರ

ಮೊದಲು ಇಲ್ಲಿನ ಶೈಕ್ಷಣಿಕ ಕ್ಷೇತ್ರ ವ್ಯಾಪಕವಾಗಿ ಬೆಳದಿರಲಿಲ್ಲ. ಹಾಗಾಗಿ ಇಲ್ಲಿ ವರ್ಣ ವ್ಯವಸ್ಥೆಗೆ ಪುರೋಹಿತಶಾಹಿಯೆ ಕಾರಣವೆನ್ನಬಹುದು. ಶ್ರೀಮಂತ ಮಕ್ಕಳು ಶಾಸ್ತ್ರ ವಿದ್ಯಾಭ್ಯಾಸ ಕಲಿಯಬೇಕೆಂಬ ನಿಯಮಗಳಿಂದ ಅಳವಡಿಸಿಕೊಂಡಿದ್ದರು. ಆದ್ದರಿಂದ ಇಲ್ಲಿ ಅಗ್ರಹಾರ ಇದ್ದುದು ಕಂಡಿತು. ಭಾರತದಲ್ಲಿ ಬೌದ್ಧ, ಜೈನ, ಮಹಮ್ಮದೀಯ ಶಿಕ್ಷಣದಂತೆ ಆಂಗ್ಲ ಮಾದರಿ ಶಿಕ್ಷಣ ಬೆಳೆಯಿತು.

ಸಾಮಾನ್ಯ ಜನರು ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕೆ ಕೆಲವು ಸಂದರ್ಭದಲ್ಲಿ ಅನರ್ಹರಾಗಿದ್ದರು. ಕೆಳವರ್ಗದವರು ತಮ್ಮ ಪರಂಪರೆಯಿಂದ ಬಂದ ವೃತ್ತಿಗಳಲ್ಲಿ ತೊಡಗಿ ವಿದ್ಯಾಬ್ಯಾಸಕ್ಕೆ ಮಕ್ಕಳನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ೧೯೨೬ರಲ್ಲಿ ಹೊಸಪೇಟೆಯಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ನಿಯಮವು ಪ್ರಾರಂಭವಾಯಿತು (ಕನ್ನಡ ವಿಶ್ವಕೋಶ,೧೯೭೦: ೯೫೦).

[illegible]

[illegible]

[illegible]

[illegible]

[illegible]

ಈ ಭಾಗದಲ್ಲಿ ಆಂಗ್ಲರು ವಿದ್ಯಾಭ್ಯಾಸ ಪದ್ಧತಿಯನ್ನು ತಮ್ಮ ದೇಶೀಯ ಮಾದರಿಯಲ್ಲಿ ಕೊಟ್ಟರು. ಆ ಸಂದರ್ಭದಲ್ಲಿ ಸ್ವತಂತ್ರ ಜೀವನ ಹಾಗೂ ನಮ್ಮ ಸಂಸ್ಕೃತಿ ಸಾಹಿತ್ಯಗಳಿಗೆ ಅಭಿವೃದ್ಧಿ ಮತ್ತು ಸರ್ವತೋಮುಖ ಬೆಳವಣಿಗೆಗೆ ಅವಕಾಶವಾಗಲಿಲ್ಲ. ೧೯೫೧ರಲ್ಲಿ ಹೊಸಪೇಟೆಗೆ ಮದ್ರಾಸ್ ಪ್ರಾಂತದ ರಾಜ್ಯಪಾಲರಾದ ಲಾರ್ಡ್ ಸ್ಟ್ಯಾನಿಲಾ ಭೇಟಿ ಕೊಟ್ಟರು. ಮುನಿಸಿಪಲ್ ಹೈಸ್ಕೂಲಿನ ಕಟ್ಟಡಗಳ ಶಂಕುಸ್ಥಾಪನೆಯನ್ನು ೧೯೩೧ರಲ್ಲಿ ನೆರವೇರಿಸಲಾಯಿತು. ಕಟ್ಟಡಗಳ ಶಂಕುಸ್ಥಾಪನೆಯನ್ನು ೧೯೩೫ನೇ ನವಂಬರ್ ೯ರಂದು ಆಗ ಬಿಲ್ ಕಲೆಕ್ಟರಾದ ಶ್ರೀ ಟಿ.ಬಾಸ್ಕರರಾವ್ ನಾಯ್ಡು ಅವರು ನೆರವೇರಿಸಿದರು.

ಪ್ರಾಥಮಿಕ ಶಾಲೆಗಳು ಆಂಗ್ಲರ ಆಳ್ವಿಕೆಗೆ ಮುನ್ನ ಇರಲಿಲ್ಲ. ವಿದ್ಯಾಕೇಂದ್ರ ಮಠಗಳಿದ್ದವು. ಅವರು ಬಂದಾಗ ನಾಲ್ಕಾರು ಹಳ್ಳಿಗೊಂದು ಶಾಲೆಯನ್ನು ತೆರೆದು ಬೋಧಿಸುವಂತೆ ಆಜ್ಞೆ ಹೊರಡಿಸಿದರು.

ಆಗ ಶಾನುಬೋಗರ, ಆಯ್ಯಅವರುಗಳ ಮಠಗಳು ಇದ್ದು ಜಮೀನುದಾರರ ಮಕ್ಕಳಿಗೆ ಪಾಠ ಹೇಳುತ್ತಿದ್ದು ಬ್ರಾಹ್ಮಣರು, ಪುರೋಹಿತರು, ಜಂಗಮರು, ಮಠಗಳಲ್ಲಿ, ಜೈನರು ಮಂದಿರಗಳಲ್ಲಿ, ಮುಸ್ಲಿಮರು ಮಸೀದಿಗಳಲ್ಲಿ ಶಿಕ್ಷಣ ಕೊಡುತ್ತಿದ್ದರು. (ಕರ್ನಾಟಕದ ಪರಂಪರೆ, ೧೯೯೨: ೪೦೨) ಈ ಮೇಲಿನ ವ್ಯವಸ್ಥೆ ಆಂಗ್ಲರ ಪ್ರಭಾವದಿಂದ ಅವಸಾನ ಹೊಂದಿ ಆಧುನಿಕ ಶಿಕ್ಷಣವನ್ನು ಅವಲಂಬಿಸಿತು.

ಇವರು ಪಠ್ಯಕ್ರಮ ಪ್ರಾರಂಭಿಸಿ ತಾಳೆಗರಿಯಲ್ಲಿ, ಮರಳಿನಲ್ಲಿ ಬರೆಯುವುದನ್ನು ನಿಲ್ಲಿಸಿ, ಪೆನ್ನಿನಲ್ಲಿ ಬರೆಯುವುದನ್ನು ಪ್ರಾರಂಭಿಸಿದರು. ಮೊಟ್ಟ ಮೊದಲಿಗೆ ಬಾಲಕರಿಗೆ ಮಾತ್ರ ಶಾಲೆಯನ್ನು ಹೊಸಪೇಟೆಯಲ್ಲಿ ಪ್ರಾರಂಭಿಸಿದರು. ನಂತರದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಾದ ಮಹತ್ತರ ಬದಲಾವಣೆಯೆಂದರೆ ಶಿಕ್ಷಣ ಪಡೆಯಲು ಸ್ತ್ರೀ-ಪುರುಷರಿಗೆ ಸಮಾನ ಹಕ್ಕು ನೀಡುತ್ತಿದ್ದರು. ಆದ್ದರಿಂದ ಹೊಸಪೇಟೆಯಲ್ಲಿ ಬಾಲಕಿಯರಿಗೆ ಪ್ರತ್ಯೇಕ ಪ್ರಾಥಮಿಕ ಶಾಲೆಗಳನ್ನು ತೆರೆದರು. ವಿದೇಶೀಯ, ಸ್ಥಳೀಯ ಮಹಿಳೆಯರನ್ನು ಬೋಧನೆಗೆ ನೇಮಿಸುತ್ತಿದ್ದರು. ೧೮೪೦ರ ದಶಕದಲ್ಲಿ ಭಾಷಾ ಸಾಮಸ್ಯೆ ಉದ್ಭವಿಸಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಬಾಲಕ-ಬಾಲಕಿಯರಿಗೆ ಪ್ರಾರಂಭಿಸಿದರು.

೧೮೭೦ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿತು (ಕರ್ನಾಟಕದ ಪರಂಪರೆ, ೧೯೯೨:೪೦೪).

ಬ್ರಿಟಿಶ್ ಕಾಲದ ಆಳ್ವಿಕೆ ಬರುವುದಕ್ಕಿಂತ ಮುಂಚೆ ಎಲ್ಲ ಗ್ರಾಮಗಳು ಸೇರಿ ಒಂದು ಹೊಸ ಪಟ್ಟಣ ಸೃಷ್ಟಿಯಾಯಿತು. ಹೊಸಪೇಟೆಯು ಆಧುನಿಕವಾಗುವುದಕ್ಕೆ ಕಲೆಕ್ಟರುಗಳು ಮಾಡಿದ ಕೃಷಿ ಮುಖ್ಯವಾದುದು.

[illegible]

[illegible]

[illegible]

[illegible]

[illegible]

ಕ್ರಿ.ಶ.೧೮೫೧ರಲ್ಲಿ ಕಂಪ್ಲಿಯಿಂದ ತಾಲ್ಲೂಕನ್ನು ವರ್ಗಾಯಿಸಿ ಹೊಸಪೇಟೆಯನ್ನು ತಾಲ್ಲೂಕು ಕೇಂದ್ರವಾಗಿ ಮಾಡಲಾಯಿತು. ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಯಿತು.

ಹೊಸಪೇಟೆಯಲ್ಲಿ ಆಧುನಿಕತೆ ಮುಂದುವರೆಯಿತು. ಇದರಿಂದ ಜನರು ಒಂದು ಊರಿನಿಂದ ಇನ್ನೊಂದು ಊರಿನ ಜನರೊಂದಿಗೆ ಸಂಪರ್ಕಪಡೆದು ಎಲ್ಲ ಜನರ ಮನದಲ್ಲಿ ಸ್ವಾತಂತ್ರ್ಯ ಭಾವನೆಯನ್ನು ಮೂಡಿಸುವಲ್ಲಿ ಬ್ರಿಟೀಷರ ಸುಧಾರಣೆ ಕಾರಣವಾಯಿತು. ಬ್ರಿಟೀಷರ ಒಡೆದು ಆಳುವ ನೀತಿ ತಿಳಿದ ಜನರು, ಎಲ್ಲರನ್ನೂ ಒಟ್ಟುಗೂಡಿಸಿ ಹೋರಾಡಲು ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿದ್ದಾರೆ. ಸ್ವಾತಂತ್ರ ಹೋರಾಟದಲ್ಲಿ ಹೊಸಪೇಟೆಯ ಜನರು ಭಾಗವಹಿಸಿದ್ದರು.

ಸ್ವಾತಂತ್ರ ಚಳುವಳಿ

ಕ್ರಿ.ಶ ೧೮೧೮ರಲ್ಲಿ ೫೦೦ ಜನರ ಪ್ರಬಲ ಪಿಂಡಾರಿಗಳ ಗುಂಪೊಂದು ಈ ಭಾಗದಲ್ಲಿ ತುಂಗಭದ್ರಾ ನದಿಯನ್ನು ದಾಟಿ ಹರಪನಹಳ್ಳಿ ಖಜಾನೆಯನ್ನು ಲೂಟಿಮಾಡಿ ನಂತರ ಕೊಟ್ಟೂರು ಕೂಡ್ಲಿಗಿಗೆ ನುಗ್ಗಿ ಹಿಂತಿರುಗಿತು. ಕ್ರಿ.ಶ ೧೮೫೭ರ ಸ್ವಾತಂತ್ರ ಸಂಗ್ರಾಮದ ಫಲವಾಗಿ ಕ್ರಿ.ಶ ೧೮೫೮ರಲ್ಲಿ ಮುಂಡರಗಿ ಭೀಮರಾಯನು ಬ್ರಿಟಿಷರ ವಿರುದ್ಧ ಹೋರಾಡಲು ಈ ಪ್ರದೇಶದಲ್ಲಿ ಜನ ಸಂಘಟನೆಯಲ್ಲಿ ತೊಡಗಿದನು.

ಹೊಸಪೇಟೆ ಮತ್ತು ಕಮಲಾಪುರಗಳಿಂದ ಜನ ಸಂಘಟನೆ ಮಾಡಿದನು. ಈ ಸಂಬಂಧವಾಗಿ ಹೊಸಪೇಟೆಯ ಠಾಕೂರ್ ಎಂಬುವರಿಗೆ ಸೈನ್ಯ ಭರ್ತಿಗಾಗಿ ಧನ ಸಹಾಯ ಮಾಡಿದುದರ ಉಲ್ಲೇಖವಿದೆ (ಚಂದ್ರಶೇಖರ, ೧೯೯೪:೬೪).

ಈ ಪ್ರದೇಶದಿಂದ ೧೫೦ ಜನ ದೇಶಪ್ರೇಮಿಗಳನ್ನು ತನ್ನ ಸಶಸ್ತ್ರಪಡೆಗೆ ನೇಮಿಸಿಕೊಂಡನು. ಭೀಮರಾವ್, ಕೆಂಚನಗೌಡ, ಹಮ್ಮಿಗಿಯ ದೇಸಾಯಿ ಮೂವರೂ ಶಸ್ತ್ರ ಹಿಡಿದು ಹೊಸಪೇಟೆಯ ಸಮೀಪದ ಕೊಪ್ಪಳದ ಕೋಟೆಯನ್ನು ಹಿಡಿದರು. ಆಗ ಬ್ರಿಟಿಷರ ಸೈನ್ಯವು ಕೋಟೆಯ ತೆರವಿಗೆ ಬಳ್ಳಾರಿಯಿಂದ ಹೊಸಪೇಟೆಯ ಮಾರ್ಗವಾಗಿ ಕೊಪ್ಪಳಕ್ಕೆ ತೆರಳಿತು. ಅಲ್ಲಿ ನಡೆದ ಯುದ್ಧದಲ್ಲಿ ಭೀಮರಾಯ ಮತ್ತು ಕೆಂಚನಗೌಡ ಸಾವನ್ನಪ್ಪಿದರು. ಅವರ ಬೆಂಬಲಿಗರಲ್ಲಿ ಸುಮಾರು ಸಾವಿರಮಂದಿ ಪ್ರಾಣ ಕಳೆದುಕೊಂಡರು. ೧೫೦ ಮಂದಿಯನ್ನು ಸೆರೆ ಹಿಡಿಯಲಾಯಿತು. ೨೮ ಜನರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇವರಲ್ಲಿ ಬಳ್ಳಾರಿ ಜಿಲ್ಲೆಯ ೧೩ ಜನರಿದ್ದರು. ಅವರಲ್ಲಿ ಇಬ್ಬರು ಹೊಸಪೇಟೆ ತಾಲ್ಲೂಕಿನವರು. ಸ್ವಾತಂತ್ರ ಹೊರಾಟಕ್ಕೆ ಇದು ತಾಲ್ಲೂಕಿನ ಪ್ರಥಮ ಕಾಣಿಕೆ.

೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಕಾಂಗ್ರೆಸ್ ಮುಂದಾಳುತನದಲ್ಲಿ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಯಿತು. ಈ ಪ್ರದೇಶದ ಅನೇಕ ಪತ್ರಿಕೆಗಳು ಹಾಗೂ ಸಂಘ ಸಂಸ್ಥೆಗಳು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯುಂಟುಮಾಡಿದವು. (ಚನ್ನಪ್ಪ, ೧೯೮೪ : ೫೨)

೧೯೨೪ರಲ್ಲಿ ದೇಶಪಾಂಡೆ ಗಂಗಾಧರರಾಯರ ಮುಂದಾಳತ್ವದಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನ ಬೆಳಗಾವಿಯಲ್ಲಿ ಜರುಗಿತು. ಇದಕ್ಕೆ ಹೊಸಪೇಟೆಯಿಂದ ವಕೀಲರಾದ ಬೂದಿಹಾಳ, ಅನಂತಾಚಾರ್, ಬಳ್ಳಾರಿಯಿಂದ ಟೇಕೂರು ಸುಬ್ರಮಣ್ಯ ಅವರು. ಭಾಗವಹಿಸಿದ್ದರು.

೧೯೩೩-೩೪ರಲ್ಲಿ ಗಾಂಧೀಜಿಯವರು ಹರಿಜನ ನಿಧಿಗಾಗಿ ಬಳ್ಳಾರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಹುಬ್ಬಳ್ಳಿಗೆ ಪ್ರಯಾಣ ಮಾಡುವಾಗ ಹೊಸಪೇಟೆಗೆ ಬಂದು ಈ ನಿಧಿಯ ಮಹತ್ವ ವಿವರಿಸಿದರು. ನಂತರ ನಿಧಿಗಾಗಿ ಕೂಡಿಸಿದ್ದ ಹಣವನ್ನು ಗಾಂಧೀಜಿಯವರು ತೆಗೆದುಕೊಂಡರು. ಗಾಂಧೀಜಿಯವರು ತಾವು ಬಂದಿದ್ದ ರೈಲಿನಲ್ಲಿ ಹುಬ್ಬಳ್ಳಿಗೆ ಪ್ರಯಾಣ ಮುಂದುವರಿಸಿದರು (ಶಿವರಾಮಪ್ಪ, ೧೯೮೭: ೮೨).

ಕರ್ನಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಹೊಸಪೇಟೆಯವರೇ ಆದ ನಾಗನಗೌಡರು ಆಯ್ಕೆಯಾದರು. ಅಧ್ಯಕ್ಷರಾದ ಕೆಲವೇ ದಿನಗಳಲ್ಲಿ ಅವರನ್ನು ಬ್ರಿಟಿಷ್ ಸರ್ಕಾರ ವಿನಾಕಾರಣ ಜೈಲಿಗಟ್ಟಿತು. ಜೈಲುಗಳಲ್ಲಿ ಕೈದಿಗಳಿಗೆ ಓದುವುದಕ್ಕೆ ಪುಸ್ತಕ, ಪತ್ರಿಕೆಗಳನ್ನು ನೀಡುತ್ತಿದ್ದರು. ಇದರಿಂದ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಜಾಗೃತವಾಯಿತು.

ಕ್ರಿ.ಶ. ೧೯೩೦ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ ಮತ್ತು ಮಧ್ಯನಿಷೇಧ ಚಳುವಳಿಯಲ್ಲಿ ಹೊಸಪೇಟೆಯಿಂದ ಮತ್ತಿಹಳ್ಳಿ ರಾಘುವೇಂದ್ರರಾಯ, ಕಲ್ಲಪ್ಪ ಬೆನ್ನೂರು ಮತ್ತು ಅಸುಂಡಿ ತಿರುಮಲರಾಯರು ಭಾಗವಹಿಸಿದರು.

ಕ್ರಿ.ಶ. ೧೯೩೨ರಲ್ಲಿ ಬ್ರಿಟಿಷ್ ಸರ್ಕಾರವನ್ನು ಖಂಡಿಸಲು ಅನಧಿಕೃತ ಸಾಹಿತ್ಯ ಹಾಡುವ ಚಳುವಳಿಯಲ್ಲಿ ಡಿ.ಬಿ. ಜಯಲಕ್ಷ್ಮೀಬಾಯಿಯವರು ಹೊಸಪೇಟೆಯಿಂದ ಭಾಗವಹಿಸಿ ಬಂಧಿತರಾದರು. ಕ್ರಿ.ಶ. ೧೯೩೨-೩೩ರ ಆಂದೋಲನದಲ್ಲಿ ಹೊಸಪೇಟೆಯ ಆಗಿನ ಮುನಿಸಿಪಲ್ ಪ್ರೌಢಶಾಲೆಯ ವಿದ್ಯಾರ್ಥಿಗಳಾಗಿ ಮರಿಸ್ವಾಮಿ ಹೀರೆಮಠ ಮತ್ತು ಎ.ಎಂ. ವಿರೂಪಾಕ್ಷಯ್ಯನವರನ್ನು ರಾಜಕೀಯ ಚಟುವಟಿಕೆಗಳಿಂದಾಗಿ ಶಾಲೆಯಿಂದ ಹೊರ ಹಾಕಿದರು.

ಕ್ರಿ.ಶ. ೧೯೩೪ರಲ್ಲಿ ಮಹಾತ್ಮ ಗಾಂಧೀಜಿಯವರು ಹೊಸಪೇಟೆಗೆ ಬಂದು ಭಾಷಣ ಮಾಡಿದರು. (ಚನ್ನಪ್ಪ, ೧೯೯೧ : ೭೪)

ಕ್ರಿ.ಶ. ೧೯೪೦-೪೧ರಲ್ಲಿ ಹೊಸಪೇಟೆಯ ಬಿ. ಅನಂತಾಚಾರ್ಯ, ಡಾ. ಆರ್.ನಾಗನಗೌಡ, ಮರಿಸ್ವಾಮಿ, ಹೀರೆಮಠ ಮೊದಲಾದವರು ಸೆರೆಯಾದರು.

ಕ್ರಿ.ಶ ೧೯೪೨ರ 'ಭಾರತದಿಂದ ತೊಲಗಿರಿ' ಆಂದೋಲನದಲ್ಲಿ ಅಸುಂಡಿ ತಿರುಮಲರಾಯ, ಗಜಪತಿ ಕೋರಿಶೆಟ್ಟಿ, ಜಂಬಣ್ಣ ಮೊದಲಾದ ೧೩ ಜನರು ಭಾಗವಹಿಸಿ ಜೈಲಿಗೆ ಹೋದರು. ಕಾಂಗ್ರೆಸ್ ನಾಯಕರ ಮಾತಿಗೆ ಓಗೊಟ್ಟು ಜಿಲ್ಲಾಕೋರ್ಟ್ ಅಧ್ಯಕ್ಷರಾಗಿದ್ದ ಒ.ಪಂಪಾಪತಿಯವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದರು (ಕಾಮತ್,೧೯೮೪:೧೦೪).

ಏಕೀಕರಣ

ಕ್ರಿ.ಶ.೧೯೪೮ನೆಯ ಸೆಪ್ಟೆಂಬರ್ ೧೩ರಿಂದ ೧೭ರವರೆಗೆ ಹೊಸಪೇಟೆಯು ರಕ್ಷಣಾ ಕಾರ್ಯಾಚರಣೆಯಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸಿತು. ಹೊಸಪೇಟೆಗೆ ಅತ್ಯಂತ ಸಮೀಪದ ತುಂಗಭದ್ರಾ ನದಿಯ ಎಡದಂಡೆಯಲ್ಲಿರುವ ಮುನಿರಾಬಾದ್-ಹುಲಿಗಿಯಲ್ಲಿ ನಿಜಾಮನ ಪರವಾದ ರಜಾಕಾರರೆಂಬ ಹೈದರಾಬಾದಿನ ಸ್ವಯಂ ಸೇವಕ ಸೈನ್ಯದ ಮೇಲೆ ಗದುಗಿನ ಕಡೆಯಿಂದ ಜಾರ್ಜ ಸೈನಿಕ ತುಕಡಿಗಳು ಮತ್ತು ಹೊಸಪೇಟೆ ಕಡೆಯಿಂದ ಗೂರ್ಖ ಸೈನ್ಯ ಪಡೆಗಳು ದಾಳಿ ಮಾಡಿದವು. ಮುನಿರಾಬಾದ್ ರಜಾಕಕಾರರಾದ ನಿಜಾಮ ಶರಣಾದರು (ದಿವಾಕರ ೧೯೯೨:೪೪).

ತುಂಗಭದ್ರಾ ಹೋರಾಟದಲ್ಲಿ ಫಜಲ್ ಆಯೋಗವು ಹೊಸಪೇಟೆ ಆಂಧ್ರಕ್ಕೆ ಸೇರಿಸಬೇಕು ಎಂದು ವರದಿಯಲ್ಲಿ ಶಿಫಾರಸ್ಸು ಮಾಡಿತು. ಇದರಿಂದ ಹೊಸಪೇಟೆಯಲ್ಲಿಯೂ ಹೋರಾಟದ ಭಾವನೆ ಮೂಡಿತ್ತು. ಶಿಫಾರಸ್ಸಿನಲ್ಲಿ ತುಂಗಭದ್ರಾ ಅಣೆಕಟ್ಟನ್ನು ಆಂಧ್ರಕ್ಕೆ ಸೇರಿಸುವ ಉದ್ದೇಶದಿಂದ ಈ ರೀತಿ ಮಾಡಿದ್ದರು. ಇದರಿಂದ ಹೊಸಪೇಟೆ ಭಾಗವನ್ನು ಆಂಧ್ರಕ್ಕೆ ಸೇರಿಸುವಂತೆ ವರದಿ ನೀಡಿದರು.

ರಾಜ್ಯ ಪುನರ್‌ವಿಂಗಡಣ ಆಯೋಗದ ವರದಿಯ ವಿರುದ್ಧ ಹೋರಾಟದ ಚಟುವಟಿಕೆ ಚುರುಕಾಗಿ ಆರಂಭವಾಯಿತು. ಇಡೀ ಜಿಲ್ಲೆಯು ಆಯೋಗದ ತೀರ್ಮಾನವನ್ನು ತಿರಸ್ಕರಿಸಿತು. ಹೊಸಪೇಟೆಯಲ್ಲಿ ಜನರು ಹೋರಾಟ ನಡೆಸಲು ತೀರ್ಮಾನಿಸಿದರು. ಈ ಹೋರಾಟ ಏಕೀಕರಣಕ್ಕೆ ತಿರುಗಿತು.

ಫಜಲ್ ಆಲಿಯ ವರದಿಯ ನಂತರ ತುಂಗಭದ್ರಾ ಅಣೆಕಟ್ಟಿನ ಭಾಗವು ಆಂಧ್ರಕ್ಕೆ ಸೇರಿಸಬೇಕು ಎಂದಾಗ ಕರ್ನಾಟಕದಲ್ಲೆ ಉಳಿಸಿಕೊಳ್ಳುವ 'ತುಂಗಭದ್ರಾ ಹೊರಾಟ ಸಮಿತಿ'ಯನ್ನು ಹೊಸಪೇಟೆಯಲ್ಲಿ ಮಾಡಿಕೊಂಡರು. ಇದನ್ನು ಜನರು ನೀರಿನ ಸತ್ಯಾಗ್ರಹ ಎಂದೇ ಹೇಳಿಕೊಂಡರು.

[illegible]

[illegible]

[illegible]

[illegible]

[illegible]

[illegible]

ಸತ್ಯಾಗ್ರಹದಲ್ಲಿ ತ್ರಿವರ್ಣ ಧ್ವಜ ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸಿದರು. ಎಲ್ಲ ಸತ್ಯಾಗ್ರಹಿಗಳು ನಿರ್ಧಾರಿತ ಸ್ಥಳಕ್ಕೆ ಬಂದು ಕೊಂಡಗಳಲ್ಲಿ ಹರಿಯುತ್ತಿದ್ದ ತುಂಗಭದ್ರೆಯ ನೀರನ್ನು ತುಂಬಿಕೊಂಡು ಕಾನೂನನ್ನು ಉಲ್ಲಂಘಿಸಿದರು. ಈ ತಂಡದ ನಾಯಕತ್ವವನ್ನು ಎಂ. ಸತ್ಯವಂತರಾಯರು ವಹಿಸಿದ್ದರು. ಈ ಹೋರಾಟದಲ್ಲಿ ಜನರು ಸಿರಿಗೇರಿಯಲ್ಲಿ ಕಾಲುವೆಯನ್ನು ಅಡ್ಡಗಟ್ಟಿ ಆಂಧ್ರಕ್ಕೆ ಹೋಗುವ ನೀರನ್ನು ನಿಲ್ಲಿಸಿದರು. ಪ್ರತಿ ರಾತ್ರಿ ಹೊಸಪೇಟೆಯ ಜನರು ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದರು.

ಹೊಸಪೇಟೆಯ ಜನರು ನೀರಿನ ಸತ್ಯಾಗ್ರಹ ಎಂದು ತಿಳಿದು ಭಾಗವಹಿಸಿದರೆ. ಅದು ಕರ್ನಾಟಕದಲ್ಲಿ ಏಕೀಕರಣ ಚಳುವಳಿಯಾಗಿ ಬದಲಾವಣೆ ಹೊಂದಿತು.

ನೀರಿನ ಸತ್ಯಾಗ್ರಹದಲ್ಲಿ ಹೊಸಪೇಟೆಯ ಪ್ರತಿಯೊಂದು ಗ್ರಾಮವು ಭಾಗವಹಿಸಿತು. ಜನಸಾಮಾನ್ಯರು ಈ ಚಳುವಳಿಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಭಾಗವಹಿಸಿದರು. ಅನೇಕರು ಕಾಲುವೆಗಳನ್ನು ಅಡ್ಡಗಟ್ಟಿದರಲ್ಲದೆ, ಕಾಲುವೆಗಳನ್ನು ಧ್ವಂಸ ಮಾಡಿದರು. ಇನ್ನು ಕೆಲವರು ತುಂಗಭದ್ರಾ ಅಣೆಕಟ್ಟನ್ನು ರಕ್ಷಣೆ ಮಾಡುವುದರಲ್ಲಿ ನಿರಾತರಾಗಿದ್ದರು. ಹೊಸಪೇಟೆಯ ಬಿ.ಕೆ. ನಾಯ್ಕ ಮತ್ತು ಅವರ ಗರಡಿ ಮನೆಯಲ್ಲಿನ ಜನರು ಪ್ರತಿದಿನ ತುಂಗಭದ್ರವನ್ನು ಕಾಯುವ ಕಾರ್ಯದಲ್ಲಿ ನಿರತರಾಗಿದ್ದರು.

ಹೊಸಪೇಟೆಯಲ್ಲಿ ಲಂಬಾಣಿ ಅಬ್ಬಯ್ಯ, ಬಿ.ಎಂ. ಮರುಗಯ್ಯ, ಜಿ. ಪರಪ್ಪ ಗೊಟ್ಟಾಲ, ಕೆ.ಎಲ್. ಹುಸೇನ ಸಾಬ್, ಎ. ಕಾಜಾಸಾಹೇಬ್, ಕೆ. ಇಮ್ರಾನ್ ಸಾಹೇಬ್, ಜೆ. ಶಂಕರಪ್ಪ, ಕೆ. ಭಾಸ್ಕರ್, ಎ. ಸಿದ್ದಪ್ಪ, ಎಂ. ರಂಗಪ್ಪ, ಜೆ. ಬೀರಪ್ಪ, ರಾಚಪ್ಪ, ಇವರು ನೀರಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲಿಗೆ ಸೇರಿದರು. ಈ ನೀರಿನ ಚಳುವಳಿಯೇ ಮುಂದೆ ಏಕೀಕರಣ ಚಳುವಳಿಯಾಯಿತು.

೧೯೫೦ ಜನವರಿ ಸಂವಿಧಾನ ಸ್ಥಾನ ನಂತರ ಕಾಂಗ್ರೆಸ್ ಸಂಸ್ಥೆ ತನ್ನ ಸಂಘಟನ ಕಾರ್ಯಕ್ಕೆ ಈ ತಳಹದಿಯನ್ನು ಒಪ್ಪಿಕೊಂಡಿತ್ತು. ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಈ ಭಾಷಾವಾರು ಪುನರ್ ವಿಂಗಡಣೆಯ ಪ್ರಶ್ನೆ ಮತ್ತೆ ಹುಟ್ಟಿಕೊಂಡಿತು.

ಮದ್ರಾಸ್ ರಾಜ್ಯವು ಇದಕ್ಕಾಗಿ ವಿಭಜನಾ ಸಮಿತಿಯನ್ನು ಕ್ರಿ.ಶ ೧೯೪೯ರಲ್ಲಿ ನೇಮಿಸಿತು. ಆ ಸಮಿತಿಯು ಈ ಹಿಂದಿನ ತೀರ್ಪನ್ನು ಅನುಮೋದಿಸಿತು.

ನೂತನ ಸಂವಿಧಾನ ಕಾರ್ಯರೂಪಕ್ಕೆ ಬಂದ ಮೇಲೆ ಆಂಧ್ರದ ಜನತೆ ರಾಜ್ಯ ರಚಿಸಲು ಒತ್ತಾಯ ಮಾಡಿತ್ತು (ಸುಶೀಲಾ ಸುಬ್ರಹ್ಮಣ್ಯಂ, ೧೯೯೩, ಸ್ಮರಣ ಸಂಚಿಕೆ).

ಭಾರತ ಸರ್ಕಾರ ಕ್ರಿ.ಶ. ೧೯೫೨ರ ಡಿಸೆಂಬರ್‌ನಲ್ಲಿ ಕೆ.ಎನ್. ವಾಂಚೂ (ರಾಜಸ್ಥಾನ್ ಹೈಕೋರ್ಟ್ ನ್ಯಾಯಾಧೀಶರು) ಅವರನ್ನು ಈ ಕುರಿತು ವರದಿ ಸಲ್ಲಿಸಲು ನೇಮಿಸಲಾಯಿತು. ಅವರು ಸಹ ಬಳ್ಳಾರಿಯ ತಾಲ್ಲೂಕುಗಳನ್ನು ಆಂಧ್ರದಿಂದ ಬೇರೆಯಾಗಿರಬೇಕೆಂದು ಸಲಹೆ ಮಾಡಿದರು.

ಭಾರತ ಸರ್ಕಾರ ಮತ್ತೊಮ್ಮೆ ನ್ಯಾಯಮೂರ್ತಿ ಎಲ್.ಎಸ್. ಮಿಶ್ರ ಅವರನ್ನು ಬಳ್ಳಾರಿ ತಾಲ್ಲೂಕಿನ ಬಗ್ಗೆ ತೀವ್ರ ಪರಿಶೀಲನೆ ಮಾಡಲು ನೇಮಿಸಿತು. ಇವರು ಬಳ್ಳಾರಿ ಸಹಿತ ಹೊಸಪೇಟೆ, ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಶಿರಗುಪ್ಪ ತಾಲ್ಲೂಕುಗಳನ್ನು ಹಾಗೂ ಉಪತಾಲ್ಲೂಕು ಕಲ್ಲಾಪುರವನ್ನು (ಈಗ ಹಗರಿಬೊಮ್ಮನಹಳ್ಳಿ ತಾಲ್ಲೂಕು) ಮೈಸೂರು ರಾಜ್ಯಕ್ಕೆ ವರ್ಗಾಯಿಸಲು ಸಲಹೆ ನೀಡಿದರು. ೧೯೫೩ನೆಯ ಅಕ್ಟೋಬರ್ ೧ರಂದು ೧೯೫೩ರ ಆಂಧ್ರ ರಾಜ್ಯಕೆ ವಿದಾಯ ಹೇಳಿ ಈ ಪ್ರದೇಶ ಮದ್ರಾಸ್ ರಾಜ್ಯ ಬಿಟ್ಟು ಮೈಸೂರು ರಾಜ್ಯಕ್ಕೆ ಸೇರಿತು (ದಿವಾಕರ, ೧೯೯೭: ೭೪).


ಹೊಸಪೇಟೆ ಕೃಷಿ ಬೆಳೆಗಾರರ ಹೋರಾಟ

ಹೊಸಪೇಟೆಯಲ್ಲಿ ಕೈಗಾರಿಕೆ, ಗಣಿಗಾರಿಕೆ ಮತ್ತು ವ್ಯಾಪಾರ ತೀವ್ರವಾಗಿ ಬೆಳೆಯುತ್ತಿದ್ದರೂ ಹೊಸಪೇಟೆ ತಾಲ್ಲೂಕಿನ ಜನರ ಮುಖ್ಯ ಕಸಬು ಕೃಷಿಯೇ ಆಗಿದೆ. ಕೃಷಿಯೇತರ ಕಸಬುಗಳು ಎಷ್ಟೇ ಬೆಳೆದರೂ ಕೃಷಿಯ ಪ್ರಾಮುಖ್ಯತೆಯನ್ನು ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗಿಲ್ಲ. ರಾಜ್ಯ ಪುನರ್‌ವಿಂಗಡಣೆಯಾದ ನಂತರ ಬಳ್ಳಾರಿ ಜಿಲ್ಲೆ ಹಳೆ ಮದರಾಸು ಪ್ರಾಂತದಿಂದ ೧೯೫೬ರಲ್ಲಿ ಕರ್ನಾಟಕಕ್ಕೆ ಸೇರಿಸಲ್ಪಟ್ಟಿತು. ಇದೇ ಅವಧಿಯಲ್ಲಿ ನಿರ್ಮಾಣಗೊಂಡ ತುಂಗಭದ್ರಾ ಜಲಾಶಯ ಹೊಸಪೇಟೆ ತಾಲ್ಲೂಕಿನ ಆರ್ಥಿಕ ಪರಿಸ್ಥಿತಿಯನ್ನು ಬದಲಾಯಿಸಿತು. ನೀರಾವರಿ ಸೌಲಭ್ಯ ಪಡೆಯುತ್ತಿರುವ ಪ್ರದೇಶ ವಿಸ್ತಾರಗೊಂಡಿತು. ಕೃಷಿ ಆಧುನೀಕರಣಗೊಂಡಿತು. ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪ್ರದೇಶವೂ ವಿಸ್ತಾರಗೊಂಡಿತು. ಈ ಕಾರಣಕ್ಕೆ ಕೃಷಿ ಬೆಳವಣಿಗೆ ಜೊತೆಗೆ ಕೈಗಾರಿಕೆಗಳೂ ಈ ನಗರದ ಸುತ್ತ ಬೆಳೆಯುತ್ತಾ ಬಂದವು. ಈ ಪ್ರದೇಶದಲ್ಲಿ ಬೆಳೆಯುವ ಹಲವಾರು ವಾಣಿಜ್ಯ ಬೆಳೆಗಳಲ್ಲಿ ಕಬ್ಬು ಬಹು ಮುಖ್ಯವಾದುದು.

ಕಬ್ಬಿನ ಕೃಷಿ

ಹೊಸಪೇಟೆ ತಾಲ್ಲೂಕಿನ ರೈತರಿಗೆ ನೀರಾವರಿಯಾಗಲೀ ಅಥವಾ ಕಬ್ಬಿನ ಕೃಷಿಯಾಗಲೀ ಹೊಸತೇನಲ್ಲ. ವಿಜಯನಗರದ ಕಾಲದ ನೀರಾವರಿ ವ್ಯವಸ್ಥೆಯ ಅವಶೇಷಗಳು ಇಂದಿಗೂ ಇಲ್ಲಿ ದೊರೆಯುತ್ತವೆ. ಅಂದು ನಿರ್ಮಿಸಲ್ಪಟ್ಟ ನೀರಾವರಿ ವ್ಯವಸ್ಥೆ ಇಂದಿಗೂ ಕಂಡುಬರುತ್ತದೆ. ಆ ಕಾಲದಿಂದಲೂ ಕಬ್ಬು ಈ ಪ್ರದೇಶದ ಒಂದು ಮುಖ್ಯ ಬೆಳೆಯಾಗಿದೆ. ಕಬ್ಬಿನ ಬೆಲ್ಲದ ಗಾಣಕ್ಕೆ ಕಬ್ಬನ್ನು ಸರಬರಾಜು ಮಾಡುತ್ತ ಜನರು ಅಪಾರ

ಏಕೀಕರಣಗೊಂಡ ನಂತರ ಆಧುನಿಕ ಹೊಸಪೇಟೆ





ಸಂಪತ್ತನ್ನು ಗಳಿಸಿದ್ದಾರೆ. ೧೯೧೦-೧೫ರವರೆಗೆ ಹೊಸಪೇಟೆ ಮತ್ತು ಮುಖ್ಯವಾಗಿ ಚಿತ್ತವಾಡಿಗಿ ಬೆಲ್ಲದ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ವಿಜಯನಗರ ಕಾಲದ ನಂತರದಲ್ಲಿ ಹೊಸಪೇಟೆಗಿಂತ ಚಿತ್ತವಾಡಿಗಿಯು ವ್ಯಾಪಾರ ವಹಿವಾಟಿನ ಕೇಂದ್ರವಾಗಿತ್ತು. ಕಾಲ ಕಳೆದಂತೆ ತೀವ್ರವಾಗಿ ಬೆಳೆದ ಹೊಸಪೇಟೆಯಲ್ಲಿ ಚಿತ್ತವಾಡಿಗಿಯ ಮಹತ್ವ ಕಡಿಮೆಯಾಯಿತು.

ಸಕ್ಕರೆ ಕಾರ್ಖಾನೆಯ ಉಗಮ

೧೯೩೨ರಲ್ಲಿ ಭಾರತ ಸರ್ಕಾರವು ದೇಶೀಯ ಸಕ್ಕರೆ ಉದ್ಯಮಗಳನ್ನು ವಿದೇಶಿ ಕಂಪನಿಗಳ ಪೈಪೋಟಿಯಿಂದ ರಕ್ಷಿಸಬೇಕೆಂಬ ಕಾರಣಕ್ಕೆ ಸಕ್ಕರೆ ಉದ್ಯಮ ರಕ್ಷಣಾ ಕಾನೂನನ್ನು ಜಾರಿಗೆ ತಂದಿತು. ಅಧಿಕ ಪ್ರಮಾಣದಲ್ಲಿ ಕಬ್ಬು ಬೆಳೆಯುತ್ತಿದ್ದ ಈ ಭಾಗದ ಕೆಲವು ಜನ ಸಕ್ಕರೆ ಕಾರ್ಖಾನೆ ಸ್ಥಾಪಿಸುವುದರ ಬಗ್ಗೆ ಆಸಕ್ತಿ ತಳೆದು ಡಾ.ಆರ್,ನಾಗನಗೌಡರು, ಶ್ರೀ ತಾಂಡವ ಮೊದಲಿಯಾರ್ ಮತ್ತು ಶ್ರೀರಂಘುವಾಧ ಮೊದಲಿಯಾರ್ ಸಾರ್ವಜನಿಕ ಸೇವೆಯ ದೃಷ್ಟಿಯಿಂದ ಸಕ್ಕರೆ ಕಾರ್ಖಾನೆ ಸ್ಥಾಪನೆ ಬಗ್ಗೆ ಶ್ರಮಪಟ್ಟರು. ಈ ಕಾರ್ಯದಲ್ಲಿ ಡಾ.ಗೌಡರ ಪಾತ್ರ ತುಂಬಾ ಮಹತ್ವದ್ದಾಗಿತ್ತು. ೧೯೩೪-೩೫ರಲ್ಲಿ ಸಕ್ಕರೆ ಕಾರ್ಖಾನೆ ಚಿತ್ತವಾಡಿಗಿಯಲ್ಲಿ ಕೆಲಸ ಪ್ರಾರಂಭಿಸಿತು. ಪ್ರಾರಂಭದಲ್ಲಿ ಇದರ ಬಗ್ಗೆ ಕಬ್ಬು ಬೆಳೆಗಾರರು ತುಂಬಾ ಉತ್ಸಾಹಿಗಳಾಗಿದ್ದರು. ಆದರೆ ಕಬ್ಬು ಬೆಳೆಗಾರರ ಉತ್ಸಾಹ ಬಹುದಿನ ಉಳಿಯಲಿಲ್ಲ. ಕಬ್ಬಿಗೆ ಯೋಗ್ಯ ಬೆಲೆಯನ್ನು ಕೊಡುವಲ್ಲಿ ಕಾರ್ಖಾನೆ ವಿಫಲವಾಯಿತು. ಕಾರ್ಖಾನೆಯವರು ಹೇಳಿದ್ದೇ ಬೆಲೆ, ಮಾಡಿದ್ದೇ ತೂಕ ಮತ್ತು ಕೊಟ್ಟಿದ್ದೇ ಹಣ ಎಂಬಂತಾಯಿತು. ಆದರೆ ನಾಗನಗೌಡರು ಕಂಪನಿಯ ಆಡಳಿತ ಮಂಡಳಿಯಲ್ಲಿ ಈ ಅನ್ಯಾಯವನ್ನು ಸರಿಪಡಿಸಲು ಪ್ರಯತ್ನಿಸಿದರು. ಕಬ್ಬು ಬೆಳೆಗಾರರ ಪರ ವಾದಿಸಿ ಕೃಷಿ ಬೆಳೆಗಾರರ ಹೋರಾಟಕ್ಕೆ ಪ್ರೇರಣೆಯಾದರು. ಆದರೆ ಕಾರ್ಖಾನೆಯ ತೂಕ, ಬೆಲೆ ವ್ಯವಸ್ಥೆಯನ್ನು ವಿರೋಧಿಸಿದವರ ಕಬ್ಬನ್ನು ಕೊಂಡುಕೊಳ್ಳುವುದನ್ನು ಕಾರ್ಖಾನೆ ನಿಲ್ಲಿಸಿತು. ಈ ರೀತಿಯ ಅನ್ಯಾಯ ಅಪಮಾನ ಮತ್ತು ಅನನುಕೂಲಕ್ಕೆ ಸಿಲುಕಿದ ಕಬ್ಬು ಬೆಳೆಗಾರರು ತಮ್ಮ ಸಂಘಟನೆ ಬೆಳೆಸಲು ಯೋಚಿಸಲಾರಂಭಿಸಿದರು.

೧೯೪೦ರಲ್ಲಿ ಕಬ್ಬು ಬೆಳೆಗಾರರ ಸಂಘಟನೆಯನ್ನು ಸ್ಥಾಪಿಸಿಕೊಂಡಿತು. ಸಂಘಟನೆಯ ನಿರ್ಧಾರದಂತೆ ಹೋರಾಟ ಮಾಡಿದರು. ೧೯೫೦ರ ಹೊತ್ತಿಗೆ ರೈತ ಸಂಘಗಳು ಡಾ.ನಾಗನಗೌಡರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸುತ್ತಿದ್ದವು. ಕಾರ್ಖಾನೆಯಿಂದ ಕಬ್ಬು ಬೆಳೆಗಾರರಿಗೆ ಉಂಟಾಗುತ್ತಿದ್ದ ಅನ್ಯಾಯಗಳ ವಿರುದ್ಧ ಈ ರೈತ ಸಂಘಗಳು ಹೋರಾಟ ನಡೆಸುತ್ತಿದ್ದವು. ಈ ಹೋರಾಟದಿಂದ ಕಬ್ಬಿನ ಬೆಲೆ ನಿಗದಿ, ಅದರ ಹಣ ಪಾವತಿ ಮತ್ತು ಸರಿಯಾದ ತೂಕ ಈ ವಿಷಯಗಳಿಗೆ ಸಂಬಂಧಿಸಿದಂತೆ ರೈತ ಸಂಘಗಳು ಕಾರ್ಖಾನೆಯವರ

ಜೊತೆ ಸೌಹಾರ್ದಯುತವಾದ ಒಪ್ಪಂದಕ್ಕೆ ಬರುವಂತಹ ವಾತಾವರಣ ಸೃಷ್ಟಿಸುವುದರಲ್ಲಿ ಯಶಸ್ವಿಯಾಗಿವೆ. ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಹೆಚ್ಚು ಬೆಲೆ ಪಡೆಯುವಲ್ಲಿ ಕೂಡ ಯಶಸ್ವಿಯಾಗಿವೆ.

ಅಡಿಟಿಪ್ಪಣಿ

೧. ಬಳ್ಳಾರಿ ಪ್ರದೇಶದ ಆಡಳಿತವನ್ನು ನಿರ್ವಹಿಸಿದ ೧೧೫ ಕಲೆಕ್ಟರುಗಳ ಆಳ್ವಿಕೆಯ ಪಟ್ಟಿಯು ಹೀಗಿದೆ.

೦೧.	ಸರ್ ಥಾಮಸ್ ಮನ್ರೊ	ಡಿಸೆಂಬರ್ ೧೮೦೦	ರಿಂದ	೧೪.೧೦.೧೮೦೭
೦೨.	ಗಾಹನ್	೧೫.೧೦.೧೮೦೭	ರಿಂದ	೧೨.೦೭.೧೮೦೯
೦೩.	ವಿಲಿಯಂ ಚಾಪ್ಲೈಸ್	೧೩.೦೭.೧೮೦೯	ರಿಂದ	೧೩.೦೬.೧೮೧೮
೦೪.	ವಿಲಿಯಂ ಥ್ಯಾಕರ್	೧೬.೦೬.೧೮೧೮	ರಿಂದ	೦೧.೧೧.೧೮೧೮
೦೫.	ಸಿ.ಸ್ಮಾಲ್ಲ್ಯೇ	೦೩.೧೧.೧೮೧೮	ರಿಂದ	೩೧.೦೧.೧೮೨೦
೦೬.	ಎ.ಐ.ಕ್ಯಾಂಪಬೆಲ್	೦೧.೦೨.೧೮೨೦	ರಿಂದ	೦೮.೦೩.೧೮೨೪
೦೭.	ಬರ್ಡ್	೦೮.೦೩.೧೮೨೪	ರಿಂದ	೧೬.೧೨.೧೮೩೪
೦೮.	ಎಫ್.ಡಬ್ಲ್ಯೂ. ರಾಬರ್ಟ್‌ಸನ್	೦೬.೦೪.೧೮೨೪	ರಿಂದ	೧೬.೧೨.೧೮೩೮
೦೯.	ಮಾಥ್ಯು ಲೆವಿನ್	೧೭.೧೨.೧೮೩೮	ರಿಂದ	೩೧.೧೨.೧೮೩೮
೧೦.	ಸರ್.ಬಿ.ಸಿ.ಮಾಟೆಂಗೋಮರಿ	೦೧.೦೧.೧೮೩೯	ರಿಂದ	೨೧.೦೨.೧೮೪೦
೧೧.	ಎ.ಮಿಲ್ಲರ್	೨೨.೦೨.೧೮೪೦	ರಿಂದ	೦೭.೦೮.೧೮೪೮
೧೨.	ಡಿ.ಮಾಯ್ನೆ	೦೮.೦೮.೧೮೪೮	ರಿಂದ	೨೩.೦೮.೧೮೪೮
೧೩.	ಕಾಲ್ಲೆಸ್ ಪಿಲ್ಲೇ	೨೪.೦೮.೧೮೪೮	ರಿಂದ	೦೮.೦೮.೧೮೫೦
೧೪.	ಎ.ಹ್ಯಾಢವೇ	೦೯.೦೮.೧೮೫೦	ರಿಂದ	೨೦.೦೪.೧೮೬೩
೧೫.	ಜಿ.ಬಿ.ಪೊರ್ಡ್	೨೧.೦೪.೧೮೫೯	ರಿಂದ	೦೬.೦೪.೧೮೬೩
೧೬.	ಎ.ವೆಡ್ಡರ್ ಬರ್ನ್	೦೭.೦೪.೧೮೬೩	ರಿಂದ	೧೮.೦೨.೧೮೬೪
೧೭.	ಜೆ.ಐ.ಎಂ.ಚೆನ್	೧೮.೦೩.೧೮೬೪	ರಿಂದ	೨೦.೦೪.೧೮೬೬
೧೮.	ಎ.ವೆಡ್ಡರ್ ಬರ್ನ್	೨೨.೦೬.೧೮೬೬	ರಿಂದ	೦೭.೦೨.೧೮೬೮
೧೯.	ಎಚ್.ಇ.ಸುಲ್ಲಿವಾನ್	೦೨.೦೩.೧೮೬೮	ರಿಂದ	೦೧.೦೯.೧೮೬೯

[illegible]

[illegible]

[illegible]

[illegible]

೨೦.	ಜೆ.ಕೆಲ್‌ಶಾಲ್	೧೬.೦೯.೧೮೬೯	ರಿಂದ	೨೭.೦೯.೧೮೬೯
೨೧.	ಜೆ.ಎಂ.ಮಾಸ್ಟರ್	೨೮.೦೯.೧೮೬೯	ರಿಂದ	೧೫.೦೭.೧೮೭೧
೨೨.	ಮಹಾನೀಯ, ಜೆ.ಸಿ.ಕ್ಲೈರ್	೧೯.೦೭.೧೮೭೧	ರಿಂದ	೨೮.೦೭.೧೮೭೩
೨೩.	ಡಬ್ಲ್ಯೂ.ಎಸ್.ಪೊಸ್ಟರ್	೨೯.೦೭.೧೮೭೧	ರಿಂದ	೦೩.೦೩.೧೮೭೩
೨೪.	ಹೆನ್ರಿ ಸಿವೆಲ್	೧೭.೦೩.೧೮೭೪	ರಿಂದ	೦೪.೦೫.೧೮೭೮
೨೫.	ಎಚ್.ಪಿ.ಗೊಡನೆ	೧೫.೦೫.೧೮೭೮	ರಿಂದ	೧೭.೦೩.೧೮೭೯
೨೬.	ಚಾರ್ಲೆಸ್ ಜಾನ್ ಕ್ರೊಸ್ಟ್‌ವೈಟ್	೧೮.೦೩.೧೮೭೯	ರಿಂದ	೩೧.೦೩.೧೮೮೧
೨೭.	ಡೇನಿಸ್ ಬ್ಲಾಕ್ (ಬ್ಯಾಕ್ ಬಲ್ಕ್)	೦೬.೦೪.೧೮೮೧	ರಿಂದ	೦೧.೦೭.೧೮೮೩
೨೮.	ಹೆನ್ರಿ ಸೇಂಟ್ ಅಬೂರು ಗೊಡ್‌ರಿಚ್	೦೬.೦೭.೧೮೮೩	ರಿಂದ	೨೨.೦೮.೧೮೮೪
೨೯.	ರಾಬರ್ಟ್ ಸಿವೆಲ್	೨೩.೦೮.೧೮೮೪	ರಿಂದ	೨೯.೧೧.೧೮೮೪
೩೦.	ಸಿ.ಎ.ಗಾಲ್ಬನ್	೩೦.೧೧.೧೮೮೪	ರಿಂದ	೨೯.೧೦.೧೮೮೫
೩೧.	ಹೆನ್ರಿ ಸೈಂಟ್ ಅಬೂರು ಗೂಡೇರಿಚ್	೧೦.೧೧.೧೮೮೫	ರಿಂದ	
೩೨.	ಡಬ್ಲ್ಯೂ.ಎ.ವೆಲ್‌ಕೂಕ್	೨೦.೦೨.೧೮೮೬	ರಿಂದ	೦೧.೧೨.೧೮೮೬
೩೩.	ಎಚ್.ಎಂ.ವಿಂಟರ್ ಬೊಥಾಮ್	೦೨.೧೨.೧೮೮೬	ರಿಂದ	೧೮.೦೯.೧೮೮೭
೩೪.	ಹೆನ್ರಿ ಸೈಂಟ್ ಅಬೂರು ಗೂಡೇರಿಚ್	೧೯.೦೯.೧೮೮೭	ರಿಂದ	೨೭.೦೨.೧೮೯೦
೩೫.	ರಾಬರ್ಟ್ ಸಿವೆಲ್	೨೮.೦೨.೧೮೯೦	ರಿಂದ	೯.೦೩.೧೮೯೦
೩೬.	ಎಚ್.ಇ.ಲಾಫೇನ್	೧೦.೦೩.೧೮೯೦	ರಿಂದ	೦೪.೦೪.೧೮೯೩
೩೭.	ಎ.ಇ.ಕ್ಯಾಸ್ಟ್ಲೆಲ್ ಸ್ಟೂವರ್ಟ್	೦೫.೦೪.೧೮೯೩	ರಿಂದ	೧೧.೦೬.೧೮೯೩
೩೮.	ರಾಬರ್ಟ್ ಸಿವೆಲ್	೧೨.೦೬.೧೮೯೩	ರಿಂದ	೦೭.೦೧.೧೮೯೪
೩೯.	ಎಫ್.ಡಿ.ಎ.ಸಿ.ವೋಲ್ಫ್‌ಮುರ್ರಿ	೦೮.೦೧.೧೮೯೪	ರಿಂದ	೩೧.೦೧.೧೮೯೪
೪೦.	ರಾಬರ್ಟ್ ಸಿವೆಲ್	೦೧.೦೨.೧೮೯೪	ರಿಂದ	೧೫.೦೫.೧೮೯೪
೪೧.	ಎಫ್.ಎಚ್.ನಿಕೋಲ್ ಸನ್	೧೬.೦೫.೧೮೯೪	ರಿಂದ	೧೯.೦೬.೧೮೯೪
೪೨.	ಎಚ್.ಟ್ರೇಮನ್‌ಹುರ್	೨೦.೦೬.೧೮೯೪	ರಿಂದ	೧೮.೦೪.೧೮೯೬
೪೩.	ಇ.ಸಿ.ರಾವ್‌ಸನ್	೧೮.೦೪.೧೮೯೫	ರಿಂದ	೧೬.೦೬.೧೮೯೬
೪೪.	ಇ.ಸ್ಕೂಟ್	೧೭.೦೬.೧೮೯೬	ರಿಂದ	೦೨.೦೭.೧೮೯೬

೪೫.	ಎಚ್.ಟ್ರೆಮನ್‌ಹುರ್	೦೩.೦೭.೧೮೯೬	ರಿಂದ	೦೯.೦೮.೧೮೯೬
೪೬.	ಆರ್.ಎಚ್.ಚಾಂಪ್‌ಬೆಲ್	೧೮.೦೮.೧೮೯೬	ರಿಂದ	೦೨.೦೨.೧೮೯೭
೪೭.	ಎಚ್.ಎ.ಸ್ಟೂವರ್ಟ್	೦೩.೦೨.೧೮೯೭	ರಿಂದ	೧೦.೧೧.೧೮೯೭
೪೮.	ಟಿ.ಇ.ಹಾರ್ಸ್‌ಫಾಲ್	೨೬.೧೧.೧೮೯೭	ರಿಂದ	೦೩.೦೧.೧೮೯೮
೪೯.	ಇ.ಎ.ಎಲ್ವಿನ್	೦೪.೦೧.೧೮೯೮	ರಿಂದ	೨೪.೦೧.೧೮೯೯
೫೦.	ಆರ್.ಎಚ್.ಚಾಂಪ್‌ಬೆಲ್	೨೫.೦೧.೧೮೯೯	ರಿಂದ	೦೮.೧೧.೧೮೯೯
೫೧.	ಇ.ಎ.ಎಲ್ವಿನ್	೦೯.೧೧.೧೮೯೯	ರಿಂದ	೨೪.೦೨.೧೯೦೨
೫೨.	ಆರ್.ಸಿ.ಸಿ.ಕಾರ್	೨೫.೦೨.೧೯೦೨	ರಿಂದ	೦೪.೦೮.೧೯೦೨
೫೩.	ಪಿ.ಎಸ್.ಪಿ.ರೈಸ್	೦೫.೦೮.೧೯೦೨	ರಿಂದ	೦೬.೦೫.೧೯೦೩
೫೪.	ಡಿ.ಡಬ್ಲ್ಯೂ.ಜಿ.ಕೊವ್	೦೭.೦೫.೧೯೦೩	ರಿಂದ	೨೪.೦೪.೧೯೦೫
೫೫.	ಬಿ.ಸಿ.ಸ್ಮಿತ್	೨೫.೦೪.೧೯೦೫	ರಿಂದ	೦೫.೦೬.೧೯೦೫
೫೬.	ಡಿ.ಡಬ್ಲ್ಯೂ.ಕೊವ್	೦೬.೦೬.೧೯೦೫	ರಿಂದ	೨೮.೦೩.೧೯೦೬
೫೭.	ಆರ್.ಎ.ಗ್ರಾಹಮ್	೨೯.೦೩.೧೯೦೬	ರಿಂದ	೨೫.೦೫.೧೯೦೬
೫೮.	ಪಿ.ಎ.ಬೂಟ್	೨೫.೦೫.೧೯೦೬	ರಿಂದ	೧೫.೦೬.೧೯೦೬
೫೯.	ಆರ್.ಎ.ಗ್ರಾಹಮ್	೧೬.೦೬.೧೯೦೬	ರಿಂದ	೦೨.೦೬.೧೯೦೮
೬೦.	ಜೆ.ಸಿ.ಬರ್ನ್	೦೨.೦೬.೧೯೦೮	ರಿಂದ	೦೧.೦೭.೧೯೦೮
೬೧.	ಆರ್.ಎ.ಗ್ರಾಹಮ್	೦೨.೦೭.೧೯೦೮	ರಿಂದ	೨೪.೦೩.೧೯೦೯
೬೨.	ಜೆ.ಎ.ಕುಮ್ಮಿಂಗ್	೨೪.೦೩.೧೯೦೯	ರಿಂದ	೩೦.೦೪.೧೯೧೦
೬೩.	ಬಿ.ಸಿ.ಸ್ಮಿತ್	೦೧.೦೫.೧೯೧೦	ರಿಂದ	೩೧.೦೫.೧೯೧೦
೬೪.	ಎಚ್.ಆರ್.ಬಾರ್ಡ್‌ಸ್ವೆಲ್	೦೧.೦೬.೧೯೧೦	ರಿಂದ	೩೦.೧೦.೧೯೧೧
೬೫.	ಇ.ಎ.ಡೇವಿಸ್	೦೧.೧೧.೧೯೧೧	ರಿಂದ	೦೭.೦೧.೧೯೧೨
೬೬.	ಜೆ.ಎಚ್.ರಾಬರ್ಟ್‌ಸನ್	೦೮.೦೧.೧೯೧೨	ರಿಂದ	೧೦.೦೧.೧೯೧೩
೬೭.	ಜಿ.ಎಫ್.ಪ್ಯಾಡ್ಡಿಸನ್	೧೦.೦೧.೧೯೧೩	ರಿಂದ	೧೭.೦೪.೧೯೧೩
೬೮.	ಎ.ಎಫ್.ಜಿ.ಮಾಕಾರ್ಡಿ	೧೮.೦೪.೧೯೧೩	ರಿಂದ	೦೮.೦೪.೧೯೧೫
೬೯.	ಜೆ.ಕೆ.ಲಾಂಕ್‌ಪೈರ್	೦೯.೦೪.೧೯೧೫	ರಿಂದ	೧೧.೦೫.೧೯೧೫

೭೦.	ಎ.ಎಫ್.ಜಿ.ಮಾಕಾರ್ಡಿ	೧೨.೦೫.೧೯೧೫	ರಿಂದ	೦೩.೦೯.೧೯೧೬
೭೧.	ಜೆ.ಎಂ.ಟೂರಿಂಗ್	೦೪.೦೯.೧೯೧೬	ರಿಂದ	೨೦.೧೨.೧೯೧೮
೭೨.	ಜೆ.ಐ.ಸ್ಮೀತ್	೦೩.೦೧.೧೯೧೯	ರಿಂದ	೨೯.೦೧.೧೯೧೯
೭೩.	ಎಫ್.ಹಾನ್ನಿಂಗಟನ್	೩೦.೦೧.೧೯೧೯	ರಿಂದ	೧೨.೦೩.೧೯೧೯
೭೪.	ಜೆ.ಐ.ಸ್ಮಿತ್	೧೩.೦೩.೧೯೧೯	ರಿಂದ	೩೦.೧೧.೧೯೧೯
೭೫.	ಎ.ಎಫ್.ಜಿ.ಮಾಕಾರ್ಡಿ	೦೧.೧೨.೧೯೧೪	ರಿಂದ	೦೯.೦೯.೧೯೨೧
೭೬.	ಎಂ.ಆರ್.ರೈ.ರಾವ್ ಸಾಹೇಬ್	೦೯.೦೯.೧೯೨೧	ರಿಂದ	೧೬.೧೨.೧೯೨೧
೭೭.	ಜೆ.ಸಿ.ಮೊಲನಿ	೧೭.೧೨.೧೯೨೧	ರಿಂದ	೧೫.೦೫.೧೯೨೨
೭೮.	ಎ.ಸಿ.ಡಫ್	೧೫.೦೫.೧೯೨೨	ರಿಂದ	೦೪.೧೧.೧೯೨೨
೭೯.	ಡಬ್ಲ್ಯೂ.ಬಿ.ನ್ಯೂಸಮ್	೦೪.೧೧.೧೯೨೪	ರಿಂದ	೦೫.೦೧.೧೯೨೫
೮೦.	ಎ.ಎಲ್.ಡಫ್	೦೫.೦೧.೧೯೨೫	ರಿಂದ	೨೯.೦೮.೧೯೨೫
೮೧.	ಖಾನ್ ಬಹದ್ದೂರ್ ಮೊಹದಿ ಬಜಲುಲ್ಲಾ ಸಾಹೇಬ್	೨೯.೦೮.೧೯೨೫	ರಿಂದ	೦೬.೦೮.೧೯೨೬
೮೨.	ಇ.ಡಬ್ಲ್ಯೂ.ಡಾಯ್ಡ್	೦೬.೦೮.೧೯೨೬	ರಿಂದ	೧೯.೦೮.೧೯೨೬
೮೩.	ಸಿ.ಜಿ.ಹರ್ಬಾರ್ಟ	೧೯.೦೮.೧೯೨೬	ರಿಂದ	೧೯.೧೧.೧೯೨೬
೮೪.	ಸಿ.ಬಿ.ಎ.ಕ್ರಾಫ್ಟ್‌ನ್	೧೨.೧೧.೧೯೨೬	ರಿಂದ	೦೨.೦೫.೧೯೨೮
೮೫.	ಎಸ್.ವೆಂಕಟೇಶ್ವರನ್	೦೨.೦೫.೧೯೨೮	ರಿಂದ	೨೧.೦೫.೧೯೨೮
೮೬.	ಇ.ಬೆನ್ನಟ್	೨೧.೦೫.೧೯೨೮	ರಿಂದ	೧೧.೧೧.೧೯೩೦
೮೭.	ಎ.ಎಂ.ಎ.ಇ.ಗಾಲ್ಲೇಟ್	೧೭.೧೧.೧೯೩೦	ರಿಂದ	೨೬.೦೬.೧೯೩೨
೮೮.	ಎಫ್.ಡಬ್ಲ್ಯೂ.ಸ್ಟೇವರ್ಟ್	೨೭.೦೬.೧೯೩೨	ರಿಂದ	೩೧.೦೭.೧೯೩೪
೮೯.	ಎಂ.ಆರ್.ರೈ ಎಂ.ವಿ.ಸುಬ್ರಮಣ್ಯಂ	೦೧.೦೮.೧೯೩೪	ರಿಂದ	೧೫.೦೯.೧೯೩೪
೯೦.	ಗೌರವಾನ್ವಿತ ಮಿ.ಎಫ್.ಡಬ್ಲ್ಯೂ ಸ್ಟೇವಟ್	೧೫.೦೯.೧೯೩೪	ರಿಂದ	೩೧.೦೩.೧೯೩೫
೯೧.	ಟಿ.ಭಾಸ್ಕರ್ ನಾಯ್ಡು	೩೧.೦೯.೧೯೩೫	ರಿಂದ	೦೩.೧೧.೧೯೩೬
೯೨.	ಎ.ಜಿ.ಬ್ಲಾಕ್	೦೩.೧೧.೧೯೩೬	ರಿಂದ	೧೬.೦೩.೧೯೩೭
೯೩.	ಜೆ.ಡಬ್ಲ್ಯೂ.ಪ್ರಿಟ್‌ಚಾರ್ಡ್	೧೯.೧೦.೧೯೩೭	ರಿಂದ	೩೧.೦೩.೧೯೩೮

೯೪. ಇ.ಸಿ.ವುಡ್	೩೧.೦೩.೧೯೩೮	ರಿಂದ	೨೨.೧೦.೧೯೩೮
೯೫. ಜೆ.ಡಬ್ಲ್ಯೂ.ಪ್ರಿಟ್‌ಚಾರ್ಡ್	೨೨.೧೦.೧೯೩೮	ರಿಂದ	೨೩.೦೩.೧೯೩೯
೯೬. ಡಬ್ಲ್ಯೂ.ಸ್ಕಾಟ್‌ಬ್ರಾನ್	೨೩.೦೩.೧೯೩೯	ರಿಂದ	೧೫.೦೫.೧೯೩೯
೯೭. ಕೆ.ಎಂ.ಉನಿಥನ್	೧೫.೦೫.೧೯೩೯	ರಿಂದ	೨೭.೦೬.೧೯೩೯
೯೮. ಹೆಚ್.ಡಿ.ಕ್ರೊಂಬೈ	೨೭.೦೬.೧೯೩೯	ರಿಂದ	೨೭.೦೩.೧೯೪೦
೯೯. ಎಂ.ಕರಮುತುಲ್ಲಾ	೨೭.೦೩.೧೯೪೦	ರಿಂದ	೨೬.೦೮.೧೯೪೧
೧೦೦. ಎ.ಡಿ.ಕ್ರೊಂಬೈ	೨೭.೦೬.೧೯೪೦	ರಿಂದ	೨೬.೦೮.೧೯೪೧
೧೦೧. ಐ.ಎಂ.ಫ್ರಾಸರ್	೧೬.೦೬.೧೯೪೧	ರಿಂದ	೧೫.೦೫.೧೯೪೩
೧೦೨. ಪಿ.ಎಸ್.ವಿಶ್ವನಾಥ ಅಯ್ಯರ್	೧೫.೦೫.೧೯೪೩	ರಿಂದ	೧೬.೦೬.೧೯೪೩
೧೦೩. ಐ.ಎಂ.ಫ್ರಾಸರ್	೧೬.೦೬.೧೯೪೩	ರಿಂದ	೧೫.೦೫.೧೯೪೪
೧೦೪. ಪಿ.ಎಸ್.ವಿಶ್ವನಾಥ ಐಯ್ಯರ್	೧೫.೦೫.೧೯೪೪	ರಿಂದ	೧೬.೦೬.೧೯೪೪
೧೦೫. ಐ.ಎಂ.ಫ್ರಾಸರ್	೧೬.೦೬.೧೯೪೪	ರಿಂದ	೨೨.೧೨.೧೯೪೪
೧೦೬. ಪಿ.ಎಸ್.ವಿಶ್ವನಾಥ್ ಐಯ್ಯರ್	೨೨.೧೨.೧೯೪೪	ರಿಂದ	೧೦.೧೧.೧೯೪೫
೧೦೭. ರಾವ್‌ಸಾಹಿಬ್ ಆರ್.ಡಿ.ಪೌಲ್	೧೦.೦೧.೧೯೪೫	ರಿಂದ	೨೭.೦೫.೧೯೪೬
೧೦೮. ಎಸ್.ವಿರೂಪಾಕ್ಷ ಶೆಟ್ಟಿ ರಾವ್ ಸಾಹಿಬ್	೨೭.೦೫.೧೯೪೬	ರಿಂದ	೦೫.೦೭.೧೯೪೬
೧೦೯. ಕೆ.ಎನ್.ಅನಂಥ ರಾಮನ್	೧೫.೦೭.೧೯೪೬	ರಿಂದ	೨೫.೧೦.೧೯೪೬
೧೧೦. ಇ.ಸಿ.ಅಲ್ಲಾರ್ಡೀಸ್	೦೯.೦೨.೧೯೪೯		
೧೧೧. ಖಾನ್ ಸಾಹಿಬ್ ಸೈದ್ ನಾಕೂದ ಸಾಹಿಬ್			
೧೧೨. ಎನ್.ವಿಸುಗುವನನ್	೧೦.೦೯.೧೯೪೯	ರಿಂದ	೨೯.೧೨.೧೯೪೯
೧೧೩. ಇ.ಸಿ.ಅಲ್ಲಾರ್ಡೀಸ್	೨೯.೧೨.೧೯೪೯	ರಿಂದ	೧೦.೦೨.೧೯೫೦
೧೧೪. ಜಿ.ರಾಮಿರೆಡ್ಡಿ	೧೦.೦೨.೧೯೫೦	ರಿಂದ	೦೧.೦೫.೧೯೫೨
೧೧೫. ಡಿ.ಆರ್.ಸುಂದ್ರಾಮ್	೦೨.೦೫.೧೯೫೨	ರಿಂದ	೦೧.೦೯.೧೯೫೩

(ಪೂಜಾರಹಳ್ಳಿ ಅಪ್ರಕಟಿತ ಎಂ.ಫಿಲ್.ಪ್ರಬಂಧ, ೧೯೯೫ : ೧೧೧)

* * * * *

ಅಧ್ಯಾಯ ೫

ಉಪಸಂಹಾರ

ಪ್ರಸ್ತುತ ಅಧ್ಯಯನವು ಹೊಸಪೇಟೆ ಪ್ರದೇಶದ ಚಾರಿತ್ರಿಕ ಅಧ್ಯಾಯನವನ್ನು ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ಅಭ್ಯಸಿಸಲು ಪ್ರಯತ್ನಮಾಡಿದೆ. ವಿಜಯನಗರ ಚರಿತ್ರೆ ಎಂದಾಗ ಬಹುತೇಕವಾಗಿ ಹಂಪೆಯನ್ನು ಕೇಂದ್ರವಾಗಿರಿಸಿಕೊಂಡು ಬಹುತೇಕ ವಿದ್ವಾಂಸರು ಅಧ್ಯಯನವನ್ನು ಕೈಗೊಂಡಿರುವುದನ್ನು ನಾವು ನೋಡಿದ್ದೇವೆ. ಈ ಮೂಲಕ ವಿಜಯನಗರ ಅಧ್ಯಯವೆಂದರೆ ಹಂಪೆಯ ಅಧ್ಯಯನ, ಹಂಪೆಯ ಅಧ್ಯಾಯನವೆಂದರೆ ವಿಜಯನಗರ ಅಧ್ಯಯನ ಎನ್ನುವ ವಸ್ತು ವಿಷಯಗಳು ಪ್ರಚಲಿತದಲ್ಲಿ ಇರುವುದನ್ನು ನಾವು ಕಾಣಬಹುದು. ಈ ಬಗೆಯ ಇತಿಹಾಸ ಬರವಣಿಗೆಯ ಕ್ರಮಗಳು ಪ್ರಭಲವಾಗಿ ಚರಿತ್ರೆ ರಚನಾಶಾಸ್ತ್ರದಲ್ಲಿ ಇರುವುದು ಈ ದಿನದವರೆಗೂ ಸ್ಪಷ್ಟವಾಗಿ ಉಳಿದಿಲ್ಲ. ವಿಜಯನಗರ ಸಂಸ್ಥಾನವನ್ನು ರೂಪಿಸಿದ ನಗರ ಪಟ್ಟಣಗಳ ಅಧ್ಯಯನಗಳು ಈ ನಿಟ್ಟಿನಲ್ಲಿ ಬಹಳಷ್ಟು ಕಡಿಮೆ ಶ್ರೀರಂಗಪಟ್ಟಣ, ತೇಕಲ, ಪೇನಗೊಂಡ, ಅಕೋಲ, ಬಟ್ಕಳ, ಹೊಸಪೇಟೆ ಮುಂತಾದ ಪಟ್ಟಣಗಳ ಆರ್ಥಿಕ ಚಟುವಟಿಕೆಗಳು ವಿಜಯನಗರದ ಬಲಾಡ್ಯತೆಯನ್ನು ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಆದರೆ ವಿಜಯನಗರ ಅಧ್ಯಯನ ಮಾಡುವ ಸಂದರ್ಭದಲ್ಲಿ ಈ ಪಟ್ಟಣಗಳ ಚಾರಿತ್ರಿಕ ಅಧ್ಯಯನ ಮಾಡಿರುವುದು ಕಡಿಮೆ.

ಪ್ರಸ್ತುತ ಅಧ್ಯಯನದಲ್ಲಿ ಈ ಕಾರಣಕ್ಕಾಗಿ ಹೊಸಪೇಟೆ ಪ್ರದೇಶದ ಅಧ್ಯಯನವನ್ನು ಕೈಗೊಂಡು ಕೆಲವೊಂದು ವಿಚಾರಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಹಂಪೆಗೆ ಹೊಂದಿಕೊಂಡಂತೆ ಇರುವ ಹೊಸಪೇಟೆ ಪಟ್ಟಣದ ಚಾರಿತ್ರಿಕ ಬೆಳವಣಿಗೆಗಳನ್ನು ಈ ಕಾರಣಕ್ಕಾಗಿ ವಿಶ್ಲೇಷಿಸಲಾಗಿದೆ.

ಹೊಸಪೇಟೆ ಎಂಬ ಹೆಸರು ರಾರಾಜಿಸುವ ಮೊದಲೇ ಈ ಪ್ರದೇಶವನ್ನು ಬಿಸಲಹಳ್ಳಿ, ತಿರುಮಲಾದೇವಿ ಪಟ್ಟಣ, ನಾಗಲಾಪುರ ಮುತಾದ ಹೆಸರುಗಳಿಂದ ಈ ಪ್ರದೇಶವನ್ನು ಗುರುತಿಸಿರುವ ಪ್ರಕ್ರಿಯೆಯನ್ನು ಅಧ್ಯಾಯ -೨ರಲ್ಲಿ ವಿವರಿಸಲಾಗಿದೆ. ಈ ಮೂಲಕ ಹೊಸಪೇಟೆಯ ಸ್ಥಳನಾಮದ ಬಗ್ಗೆ ಇರುವ ವಿವಿಧ ಆಕರಗಳನ್ನು

ಒಟ್ಟಿಗೆ ತರುವ ಪ್ರಯತ್ನ ಮಾಡಲಾಗಿದೆ. ಹಾಗೆ ಈ ಆಕರವನ್ನು ವಿಶ್ಲೇಷಿಸಲಾಗಿದೆ. (ಅಧ್ಯಯನ.೨, ಪು.೨೬)

ಅಧ್ಯಾಯ ಮೂರರಲ್ಲಿ ಹೊಸಪೇಟೆಯನ್ನು ಸೇರಿಸಿದಂತೆ ವಿಜಯನಗರವನ್ನು ಆಳಿದ ಅರಸರ ಆಡಳಿತದ ಬಗ್ಗೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಅವರ ಕಾಲದಲ್ಲಿ [illegible] ದೇವಾಲಯಗಳ ನಿರ್ಮಾಣ, ಕೆರೆಗಳ ನಿರ್ಮಾಣ, ಕೋಟೆಗಳು ಪುನರ್ ನಿರ್ಮಾಣದ ಬಗ್ಗೆ ಸಾಕಷ್ಟು ಮಾಹಿತಿಯನ್ನು ಅಧ್ಯಾಯ ಮೂರರಲ್ಲಿ ಕಲೆಹಾಕಲಾಗಿದೆ. ಕೆರೆ, ಕೋಟೆ, ದೇವಾಲಯಗಳ ನಿರ್ಮಾಣಗಳು ಹೊಸಪೇಟೆಯನ್ನು ಒಂದು ನಗರವನ್ನಾಗಿ ಮಾಡಲು ಕಾರಣವಾದ ಬಗೆಗಳನ್ನು ಅಲ್ಲಿ ಚರ್ಚಿಸಲಾಗಿದೆ. (ಅಧ್ಯಾಯ.೩, ಪು.೫೨) ಇದು ಸಹಜವಾಗಿ ಉಳಿದ ಪ್ರದೇಶಗಳ ವರ್ತಕರನ್ನು ಆಕರ್ಷಿಸಿ ಅವರಲ್ಲಿ ಇಲ್ಲಿ ನೆಲೆವುರುವ ಕಾರಣವಾದ ಅಂಶಗಳು ಈ ನಿಟ್ಟಿನಲ್ಲಿ ಗಮನಾರ್ಹವಾಗಿವೆ. ಹೊಸಪೇಟೆ ಪಟ್ಟಣದ ಬೂನಾದಿಗೆ ಇದೊಂದು ಪ್ರಮುಖವಾದ ಕಾರಣವಾಗಿದೆ.

ಅಧ್ಯಾಯ ನಾಲ್ಕರಲ್ಲಿ ಹೊಸಪೇಟೆಯು ಆಧುನಿಕತೆಗೆ ತೆರೆದುಕೊಂಡ ಬಗೆಗಳ ಬಗ್ಗೆ ಚರ್ಚೆಮಾಡಿದೆ. ವಸಾಹತು ಕಾಲದಲ್ಲಿ ಬಳ್ಳಾರಿ ಪ್ರದೇಶವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಕಲೆಕ್ಟರಗಳ ಆಡಳಿತವನ್ನು ವಿಶ್ಲೇಷಿಸಲಾಗಿದೆ. ಈ ಹಂತದಲ್ಲಿ ಆದ ಹೊಸಪೇಟೆಯ [illegible] ನಿರ್ಮಾಣದ ಪ್ರಕ್ರಿಯೆಗಳನ್ನು ಅಭ್ಯಸಿಸಲಾಗಿದೆ. ಕಲೆಕ್ಟರ್‌ಗಳ ಅನೇಕ ಬಗೆಯ ಸುಧಾರಣೆ ಹೊಸಪೇಟೆಯನ್ನು ರೂಪಿಸಿರುವ ಪ್ರಕ್ರಿಯೆ ಬಗ್ಗೆ [illegible] ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಲಭ್ಯವಿರುವ ಆಕಾರಗಳ ಮೂಲಕ ನಗರ ಅಧ್ಯಯನದ ಮಾದರಿಯೊಂದನ್ನು ರೂಪಿಸುವ ಸಣ್ಣ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಚರಿತ್ರೆ ಬರವಣಿಗೆಯ ಮತ್ತೊಂದು ಮಜಲನ್ನು ಅಭ್ಯಸಿಸಲು ಪ್ರಸ್ತುತ ಅಧ್ಯಯನವು ಯತ್ನಿಸಿದೆ.

* * * * *

ಪರಾಮರ್ಶನ ಗ್ರಂಥಗಳು

ಪ್ರಕಟಿತ ಆಕರಗಳು:

೦೧. ಅಡಪ ರಾಮಕೃಷ್ಣರಾವ್, **ಕೃಷ್ಣದೇವರಾಯ**, ಭಾರತೀಯ ಸಾಹಿತ್ಯ ನಿರ್ಮಾಪಕರು, ಬೆಂಗಳೂರು, ೨೦೦೩

೦೨. ಅಣ್ಣಿಗೇರಿ.ವಿ.ಎಂ., **ಕರ್ನಾಟಕದ ಶಾಸನಗಳ ಸ್ವರೂಪ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೫.

೦೩. ಅ.ಸುಂದರ, **ಕಿಷ್ಕಿಂದ ಶ್ರೀವಿದ್ಯಾವಿಜಯನಗರ ಹಂಪೆ** ಎರಿಟೇಜ್‌ಟ್ರಸ್ಟ್, ಹೊಸಪೇಟೆ, ೧೯೯೭.

೦೪. ಆಲೂರು ವೆಂಕಟರಾಯರು, **ಕರ್ನಾಟಕ ಗತವೈಭವ** ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮

೦೫. ಕುಂಬಾಸ, **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ** (ಸಂಶೋಧಿತ ಲೇಖನಗಳು), ಮಾಲತೇಶ ಪ್ರಕಾಶನ ಕುಂಚೂರು, ಹರಪನಹಳ್ಳಿ, ೧೯೯೦

೦೬. ಕೊಟ್ರಯ್ಯ ಸಿಟಿಯಂ, **ಹಂಪೆ ಶರಣರ** ಸುವಾಸಿನಿ ಬಳಗ, ಹೊಸಪೇಟೆ, ೧೯೯೭

೦೭. ಕೊಟ್ರಯ್ಯ ಸಿಟಿಯಂ **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೦೮. ಕೋಡದ ಎಸ್.ಬಿ. **ವಿಜಯನಗರ ವಿಪತ್ಕಾಲ** ಪ್ರಭಾ ಪಬ್ಲಿಕೇಷನ್, ಧಾರವಾಡ, ೧೯೯೬

೦೯. ಕೋಡದ ಎಸ್.ಬಿ. **ತಾಳಿಕೋಟೆ ಯುದ್ಧ**, ಪ್ರಭಾ ಪಬ್ಲಿಕೇಷನ್, ಧಾರವಾಡ, ೧೯೯೯

೧೦. ಕೃಷ್ಣಪ್ಪ.ಎಂ.ವಿ, ಚನ್ನಬಸಪ್ಪ, ಎಸ್.ಪಾಟೀಲ, ವಿಜಯನಗರ ಅಧ್ಯಯನ, ಸಂಪುಟ.೪ , ೫ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೯

೧೧. ಕೊಟ್ರೇಶ್.ಎಂ. ಪ್ರವಾಸಿಗರ ಹಂಪಿ ದರ್ಶನ, ಶ್ರೀ ವ್ಹಿ.ವ್ಹಿ.ಎಂ ಸಹೋದರರು ಕಡ್ಡಿರಾಂಪುರ, ಹೊಸಪೇಟೆ, ೨೦೦೪

೧೨. ಗಿರಿಯಪ್ಪ ಕರ್ನಾಟ-ಕರ್ನಾಟಕ-ಕನ್ನಡ-ಏಕೀಕರಣ, ಮಧು ಪ್ರಕಾಶನ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ೨೦೦೨

೧೩. ಗೋಪಾಲರಾವ್.ಎಚ್.ಎಸ್. ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬

೧೪. ಚಂದ್ರಶೇಖರ.ಟಿ.ಆರ್. ನಿರೂಪಣೆ:ಶ್ರೀಬೆಲ್ಲದ ಚನ್ನಪ್ಪ, ಕಬ್ಬು ಬೆಳೆಗಾರರ ಹೋರಾಟ, ಹೊಸಪೇಟೆ ರೈತ ಸಂಘ, ಹೊಸಪೇಟೆ, ೧೯೮೭

೧೫. ಚಂದ್ರಶೇಖರ, ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ, ಶ್ರಿ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ, ಹೂವಿನಹಡಗಲಿ, ೧೯೯೪

೧೬. ಚಂದ್ರಶೇಖರ.ಟಿ.ಆರ್. ಕಬ್ಬು ಬೆಳೆಗಾರರ ಹೋರಾಟ, ಹೊಸಪೇಟೆ ರೈತ ಸಂಘ, ಹೊಸಪೇಟೆ, ೧೯೯೯

೧೭. ಚೆಲುವರಾಜು, ಹಂಪೆಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೧೮. ಜಯಪ್ಪ ಗೌಡ, ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಕ್ರಿ.ಶ.೧೩೫೦ರವರೆಗೆ, ಶುಭೋದಯ ಪ್ರಕಾಶನ, ಕುವೆಂಪುನಗರ, ಮೈಸೂರು, ೧೯೮೩

೧೯. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೧೯೬೮

೨೦. ತುಕಾರಾಮ್ ರಾವ್.ಎಚ್, ಹೊಸಪೇಟೆ ಚಾರಿತ್ರಿಕ ವಿವೇಚನೆ, ಶ್ರೀಶರಣರ ಸುಹಾಸಿನಿ ಬಳಗ, ಹೊಸಪೇಟೆ, ೨೦೦೪

೨೧. ದೇವರಾಜ್ ಡಿ.ವಿ, ಚನ್ನಬಸಪ್ಪ ಎಸ್.ಪಾಟೀಲ, ವಿಜಯನಗರ ಅಧ್ಯಯನ ಸಂಪುಟ.೧, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೬

೨೨. ಜಿ.ಎಸ್.ದೀಕ್ಷಿತ್, ಬಿ.ರಾಮಸ್ವಾಮಿ, ಭಾರ್ಗವಿ ಶಿವಯ್ಯ, **ಶ್ರೀಕೃಷ್ಣದೇವರಾಯ ಜೀವನ ಸಾಧನೆಗಳು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೭

೨೩. ದೇವರಕೊಂಡಾರೆಡ್ಡಿ, **ಶಾಸನ ಸಂಪುಟ.೧ (ಬಳ್ಳಾರಿ ಜಿಲ್ಲೆ)** ಪ್ರಸಾರಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೮

೨೪. ದೇವರಕೊಂಡಾರೆಡ್ಡಿ, **ಶಾಸನ ಸಂಪುಟ.೩ ಹಂಪೆಯ ಶಾಸನಗಳು** ಪ್ರಸಾರಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೨೫. ದೇವರಕೊಂಡಾರೆಡ್ಡಿ, **ಹಂಪಿ ಸಂಪುಟ (ಕಲೆ, ಕ್ರೀಡೆ ಮತ್ತು ಕೌಶಲ)** ಪ್ರಸಾರಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೨೬. ನಂಜುಂಡಸ್ವಾಮಿ.ಎ.ಎಸ್. **ವಿಜಯನಗರದ ಇತಿಹಾಸ ಕರ್ನಾಟಕ ಇತಿಹಾಸ ಮಾಲಿಕೆ**, ಸಮಾಜ ಪುಸ್ತಕಾಲಯ ಶಿವಾಜಿಬೀದಿ, ಧಾರವಾಡ, ೧೯೯೧

೨೭. ನರಸಿಂಹ ಮೂರ್ತಿ, **ವಿಜಯನಗರದ ನಾಣ್ಯ ಸಂಪತ್ತು** ಗೃಹ ಸರಸ್ವತೀ ಗ್ರಂಥಮಾಲೆ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೯೬

೨೮. ನಾಗರಾಜ ರಾವ್ ಎಂ.ಎಸ್. ಅಲೆಕ್ಸಾಂಡರ್ ಜೆ.ಗ್ರೀನ್‌ಲಾ **(೧೮೫೬) ಜೂನ್ ಗಾಲಿಂಗ್ಸ್ (೧೮೮೩) ಕಂಡ ವಿಜಯನಗರ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು,೧೯೯೮

೨೯. ನಾಗಯ್ಯ.ಜಿ.ಎಂ. **ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ**, ಲೋಹಿಯಾ ಪ್ರಕಾಶನ, ೨೦೦೨, ಬಳ್ಳಾರಿ

೩೦. ಪ್ರಬಮತಿ ಶ್ಯಾಮರಾವ್, **ವಿಜಯನಗರದ ಕಲೆ ಮತ್ತು ಸಾಹಿತ್ಯ** , ಮೈಸೂರು ಸಂಸ್ಥಾನ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೫೬

೩೧. ಬಸವರಾಜ ಮಲಶೆಟ್ಟಿ, **ಹಂಪೆ ಒಂದು ಪರಿಚಯ** ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ, ಹಂಪೆ, ೧೯೮೧

೩೨. ಪಾಂಡುರಂಗರಾವ ದೇಸಾಯಿ, **ಹಂಪೆ**, ಪಿ.ಬಿ.ಎಚ್.ಪ್ರಕಾಶನ, ಗಾಂಧೀನಗರ, ಬೆಂಗಳೂರು, ೧೯೮೬

೩೩. ಪರಮೇಶ್ವರಪ್ಪ.ಡಿ, **ಹಂಪಿ ಪರಂಪರೆ** ಶ್ರೀ ವಿದ್ಯಾವಿಜಯನಗರ ಹಂಪಿ, ಹೆರಿಟೇಜ್ ಟ್ರಸ್ಟ್, ಆನೆಗೊಂದಿ.ಎನ್.ಸಿ.ಕಾಲೋನಿ, ೧೯೯೬, ಹೊಸಪೇಟೆ

೩೪. ಪುರುಷೋತ್ತಮ ಬಿಳಿಮಲೆ, ಹಂಪಿ ಜಾನಪದ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೩೫. ಪ್ರಕಾಶ್.ಎಂ.ಪಿ, ಡೊಮಿಂಗೋಸ್ ಪಿಯಾಸ್ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೩೬. ಬೆಲ್ಲದ ಚೆನ್ನಪ್ಪ, ಹಣ್ಣೆಲೆಯ ಹಸಿರು ನೆನಪುಗಳು, ಕಲ್ಮಟೇಶ್ವರ ಪ್ರಕಾಶನ, ಚಿತ್ತವಾಡ್ಗಿ, ಹೊಸಪೇಟೆ, ೧೯೮೭

೩೭. ಭೂಸನೂರ ಮಠ , ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ, ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ, ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಮಠ, ಹಂಪಿ, ೧೯೮೮

೩೮. ಭೂಸನೂರ ಮಠ ಸಂ,ಶಿ., ವಿಜಯ ಕಲ್ಯಾಣ, ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ಹಂಪಿ,೧೯೮೮

೩೯. ಬೆಲ್ಲದ ಚನ್ನಪ್ಪ, ಕಲ್ಮಟೇಶ್ವರ ದೇವಸ್ಥಾನ ಮತ್ತು ಜಾತ್ರೆ, ಕಲ್ಮಟೇಶ್ವರ ಪ್ರಕಾಶನ, ಚಿತ್ತವಾಡ್ಗಿ, ಹೊಸಪೇಟೆ, ೧೯೯೧

೪೦. ಬಸವರಾಜ ಮಲಶೆಟ್ಟಿ, ಎನಗಿಂತ ಕಿರಿಯರಿಲ್ಲ ಶ್ರೀ ಅಗಡಿ ಸಂಗಣ್ಣ ಅಭಿನಂದನ ಸಮಿತಿ, ಕೊಪ್ಪಳ, ೧೯೯೯

೪೧. ಮಹದೇವ.ಸಿ., ತಿರುಮಲಾದೇವಿಯರ ಪಟ್ಟಣ-ನಾಗಲಾಪುರ-ಹೊಸಪೇಟೆ ಇತಿಹಾಸ ದರ್ಶನ ಸಂಪುಟ.೧೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೫

೪೨. ಮಹದೇವ.ಸಿ., ಎ.ಸುಬ್ಬಣ್ಣ ರೈ, ಮಾಧವ ಪೆರಾಜೆ, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ,೨೦೦೦

೪೩. ಮೋಹನ ನಾಗಮ್ಮನವರ, ಸ್ವಾತಂತ್ರ್ಯ ಆಂದೋಲನದ ಪ್ರಮುಖ ಧಾರೆಗಳು, ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ, ಧಾರವಾಡ, ೨೦೦೩

೪೪. ಮೋಹನ್ ಕೃಷ್ಣ ರೈ.ಕೆ., ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೪೫. ಮಹದೇವ.ಸಿ., ಚಿನ್ನಸ್ವಾಮಿ ಸೋಸಲೆ, ಹಂಪಿ ಅಂದು-ಇಂದು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

೪೬. ಎಂ.ವಿ.ವಸು., ಮಾರ್ಗದರ್ಶಿ ಅಭ್ಯಾಸ ಪಾಠಗಳು, ಕರ್ನಾಟಕ ಚರಿತ್ರೆ ಆಯ್ದ ವಿಷಯಗಳು, ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ಹಂಪಿ, ೨೦೦೬

೪೭. ರಾಘುವೇಂದ್ರರಾವ್.ವಿ. ವಿಜಯನಗರ, ಎಚ್.ವೆಂಕಟರಾಮಯ್ಯ ಅಂಡ್ ಸನ್ಸ್, ವಿದ್ಯಾನಿಧಿ, ಬುಕ್‌ಡಿಪೋ, ಮೈಸೂರು, ೧೯೪೮

೪೮. ರಾಮ್‌ರಾವ್.ಎಂ., ಕೃಷ್ಣದೇವರಾಯ ಜೀವನ ಚರಿತ್ರೆ ಮಾಲೆ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸ ದೆಹಲಿ,೧೯೭೧

೪೯. ರಾಮಚಂದ್ರರಾವ್.ಎಸ್.ಕೆ., ಕನ್ನಡ ನಾಡಿನ ದಾರ್ಮಿಕ ಪರಂಪರೆ, ಕನ್ನಡ ಮತ್ತು ಸಂಸ್ಕತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು, ೧೯೮೩

೫೦. ರಾಬರ್ಟ್ ಸಿವೆಲ್ (ಮೂಲ) ಸದಾನಂದ ಕನವಳ್ಳಿ (ಅನು) ''ಮರೆತುಹೋದ ಮಹಾಸಾಮ್ರಾಜ್ಯ, ವಿಜಯನಗರ'' ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೩

೫೧. ರವೀಂದ್ರನಾಥ.ಕೆ., ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, ೨೦೦೫,

೫೨. ಲಿಂಗಯ್ಯ ಡಿ.ಎಲ್. ಭವ್ಯ ಹಿಂದೂ ಸಾಮ್ರಾಜ್ಯ ವಿಜಯನಗರ ಲಿಂಗಯ್ಯ ಮಂಡ್ಯ ಚಿಕಿತ್ಸಾಲಯ, ಮಂಡ್ಯ,೧೯೬೭

೫೩. ಲಕ್ಷಣ್ ತೆಲಗಾವಿ. ಜೀರ್ಣವಿಜಯನಗರಾದರ್ಶಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬

೫೪. ಲಕ್ಷಣ್ ತೆಲಗಾವಿ, ಚರಿತ್ರೆ ಅಧ್ಯಯನ ಸಂಪುಟ-೧, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೫೫. ಎಚ್ಚೆಸ್ಕೆ ಅವಲೋಕನ: ಕರ್ನಾಟಕ ಪರಂಪರೆಯ ಸಮೀಕ್ಷೆ ವಿಶ್ವ ಕನ್ನಡ ಸಮ್ಮೇಳನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

೫೬. ವಸುಂಧರ ಫಿಲಿಯೋಜಾ ಅಳಿದುಳಿದ ಹಂಪೆ ಪ್ರೇಮಸಾಮಿ ಪ್ರಕಾಶನ, ಬೆಂಗಳೂರು, ೧೯೯೩

೫೭. ವೆಂಕಟರತ್ನಂ ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ ಕನ್ನಡ ಅಧ್ಯಾಯನ ಸಂಸ್ಥೆ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು

೫೮. ವಾಸುದೇವನ್ ಸಿ.ಎಸ್. ಹಂಪಿ ಪರಿಸರದ ಕೆರೆಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೫೯. ವಸಂತ ಕುಷ್ಟಗಿ, ವಿಜಯ ನಗರದ ಸಾಮ್ರಾಜ್ಯದ ಪತನಾ ನಂತರದ ಹರಿದಾಸ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨

೬೦. ವಿರೂಪಾಕ್ಷಿ ಪೂಜಾರಹಳ್ಳಿ ಬಳ್ಳಾರಿ ಜಿಲ್ಲೆಯ ಪಾಳೆಗಾರರು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೪

೬೧. ವಿರೂಪಾಕ್ಷಿ ಪೂಜಾಹಳ್ಳಿ, ಕರ್ನಾಟಕದಲ್ಲಿ ತಳವಾರಿಕೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೬೨. ವಿವೇಕ ರೈ ಬಿ.ಎ., ಪ್ರವಾಸಿ ಕಂಡ ವಿಜಯನಗರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೬೩. ಶರ್ಮ ಕಿ.ತಾ., ಚಾರಿತ್ರಿಕ ದಾಖಲೆಗಳು'' ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೫, ೧೯೭೧

೬೪. ಶಿವಶಂಕರ. ಎಂ. ಎಲ್, ಚನ್ನಬಸಪ್ಪ ಎಸ್. ಪಾಟೀಲ, ವಿಜಯನಗರ ಅಧ್ಯಯನ ಸಂಪುಟ -೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ೧೯೯೭, ಮೈಸೂರು, ೧೯೯೭

೬೫. ಷೇಕ್ ಅಲಿ.ಬಿ., ಕರ್ನಾಟಕ ಚರಿತ್ರೆ (ಕ್ರಿ.ಶ. ೧೩೩೬-೧೭೬೦) ಸಂಪುಟ-೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೬೬. ಸರ್ವೇಶ್ವರ, ಹೊಸಪೇಟೆ, ಸುವರ್ಣ ಮಹೋತ್ಸವ ಸಮಾರಂಭಗಳು , ಹೊಸಪೇಟೆ ಪುರಸಭೆ, ೧೯೧೩-೧೯೬೪

೬೭. ಸೂರ್ಯನಾಥ ಕಾಮತ್, ವಿಜಯನಗರ ಸಾಮ್ರಾಜ್ಯ, ಅರ್ಚನಾ ಪ್ರಕಾಶನ, ಬೆಂಗಳೂರು, ೧೯೭೩

೬೮. ಸೂರ್ಯನಾಥ ಕಾಮತ್, ವಿಜಯನಗರ ಸಾಮ್ರಾಜ್ಯ, ಪ್ರಕಾಶ ಸಾಹಿತ್ಯ, ತಲಕಾಡು ಸುಬ್ಬರಾವಗಲ್ಲಿ, ಅರಳೇಪೇಟೆ, ಬೆಂಗಳೂರು. ೧೯೭೩

೬೯. ಸೂರ್ಯನಾಥ ಕಾಮತ್, ಲಕ್ಷ್ಮಣ್ ತೆಲಗಾವಿ ಇತಿಹಾಸ ದರ್ಶನ ಸಂಪುಟ-೨ ಪ್ರಥಮ ವಾರ್ಷಿಕ ಸಮ್ಮೇಳನದ ವಿಶೇಷ ಸಂಚಿಕೆ, ೧೯೮೭

೭೦. ಸದಾಶಿವಪ್ಪ.ಕು.ಬಾ., ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೬

೭೧. ಬಿ.ಆರ್.ಹಿರೇಮಠ, **ಶಾಸನಗಳಲ್ಲಿ ಕರ್ನಾಟಕದ ವರ್ತಕರು** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೮೬

೭೨. K.R.Basavaraja, **The Vijayanagara Urbanity**, A Series issued by the Commitiee of National Symoposivm on Urban Development, Hospet, 1978

೭೩. Chandrashekhara Shasthri.H.M **The Vijayanagar Urbanity**, Bhagyashree Enterprises, Bangalore, 2006

೭೪. Francis H, **Madran district Gazettere, Bellary**, Madras, Government of India, 1904-33

೭೫. Hnumappa.H.G, **SOCCO- Econimic strveture of Hospet**, Institute for Social Economic Change, Bangalore, 1978

೭೬. Karennavar.M.E. **Hospet A Study in Urban Geogrphy**, Research Report, Deparment of Geography, Karnatak University, Dharwad, 1975-76

೭೭. Vijayalakshmi.K.S. **Studees in Karnataka History and Culture**, Pruceedings Vol-VII, Karnataka History Congress, 2006

ಅಪ್ರಕಟಿತ

೦೧. ತಾರೀಹಳ್ಳಿ ಹನುಮಂತಪ್ಪ, ಪಿಎಚ್.ಡಿ ಮಹಾಪ್ರಬಂಧ **ಹೊಸಪೇಟೆ ನಾಯಕರ ಏಳುಕೇರಿಗಳ, ಸಾಂಸ್ಕೃತಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೦೨. ಬಸವರಾಜಯ್ಯ ಮಠದ, ಎಂ.ಫಿಲ್ ಪ್ರಬಂಧ **ವಿಜಯನಗರ ಕಾಲದ ಸಮಾಜ ಕೆಲವು ಅನಿಷ್ಠ ಪದ್ಧತಿಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೦೩. ಮಹೇಶ.ಕೆ. ಪಿಎಚ್.ಡಿ ಮಹಾಪ್ರಬಂಧ **ಕೃಷ್ಣದೇವರಾಯ ಕಾಲದ ವೈಷ್ಣವ ದೇವಾಲಯಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೦೪. ಮಲ್ಲಿಕಾರ್ಜುನ.ಯು, ಪಿಎಚ್.ಡಿ ಮಹಾಪ್ರಬಂಧ **ಹೊಸಪೇಟೆ ತಾಲೂಕಿನ ಗರಡಿ ಸಂಪ್ರದಾಯ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೦೫. ಸತೀಶ್, ಪಿಎಚ್.ಡಿ ಮಹಾಪ್ರಬಂಧ ವಿಜಯನಗರ ಕಾಲದ ಶೈವ ದೇವಾಲಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೦೬. ಸೋಮಶೇಖರ.ಎಸ್.ವೈ, ಪಿಎಚ್.ಡಿ ಮಹಾಪ್ರಬಂಧ ವಿಜಯ ನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೦೭. ವಿರೂಪಾಕ್ಷಿ, ಎಂ.ಫಿಲ್ ಪ್ರಬಂಧ ಬಳ್ಳಾರಿ ಜಿಲ್ಲೆ ಕಲೆಕ್ಟರುಗಳ ಆಳ್ವಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೫

೦೮. ಸುಮನ.ಆರ್, ಎಂ.ಫಿಲ್ ಪ್ರಬಂಧ ವಿಜಯನಗರದ ತುಳುವ ಅರಸರ ರಾಣಿಯರು, (ಚಾರಿತ್ರಿಕ ಅಧ್ಯಯನ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೫

೦೯. ಹುರುಳ ಮಹಾಬಲೇಶ್ವರ, ಎಂ.ಫಿಲ್ ಪ್ರಬಂಧ ಚರಿತ್ರೆ ರಚನಾಶಾಸ್ತ್ರ ಬಳ್ಳಾರಿ :ಪ್ರದೇಶದ ಮೇಲಿನ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩

ಪ್ರಬಂಧಗಳು

೦೧. ಮಂಜುನಾಥ ಬೇವಿನ ಕಟ್ಟಿ, ವಿಜಯನಗರ ಸಾಂಸ್ಕೃತಿಕ ಆಯಾಮಗಳು, ಹೊಸಪೇಟೆಯಲ್ಲಿ ಮಾರ್ಚ್ ೧೯೯೭ರಲ್ಲಿ ನಡೆದ ಸ್ಥಳೀಯ ವಿಚಾರ ಗೋಷ್ಠಿಯಲ್ಲಿ ಮಂಡಿಸಲಾದ ಕನ್ನಡ ಪ್ರಬಂಧಗಳು.

೦೨. ಕೆ.ಆರ್.ರಾಮಕೃಷ್ಣ, ಟಿ.ಎಸ್.ಗಂಗಾಧರ, ಟಿ.ಎಮ್.ಮಜುನಾಥಯ್ಯ, ವಿಜಯನಗರ ಅಧ್ಯಯನ ಸಂಪುಟ.೭, ಹಂಪಿ ಉತ್ಸವ ೨೦೦೧ರಲ್ಲಿ ಮಂಡಿಸಿದ ಪ್ರಬಂಧಗಳು

ಪತ್ರಿಕೆ

೦೧. ವಿರೂಪಾಕ್ಷ ನಾಯ್ಕ, ಹೊಸಪೇಟೆ ಟೈಮ್ಸ್, ಕನ್ನಡ ದಿನ ಪತ್ರಿಕೆ, ಸುವರ್ಣ ಕರ್ನಾಟಕ ವಿಶೇಷ ಸಂಚಿಕೆ, ಹಂಪಿ ಉತ್ಸವ-೨೦೦೬.

ಸ್ಮರಣಸಂಚಿಕೆ

೦೧. ಸರ್ವೇಶ್ವರ ಎಚ್. ಸುವರ್ಣ ಪುಷ್ಪಾಂಜಲಿ ಹೊಸಪೇಟೆ ನಗರಸಭೆ, ಸುವರ್ಣಮಹೋತ್ಸವ ಸ್ಮರಣ ಸಂಚಿಕೆ , ಹೊಸಪೇಟೆ, ೧೯೬೪

* * * * *

AKSHARA GRANTHALAYA
ACC.NO. 129782